TIGHT BINDING BOOK

TEXT PROBLEM
WITHIN THE
BOOK ONLY
TEXT FLY WITHIN
THE BOOK ONLY

UNIVERSAL LIBRARY
OU_198313
UNIVERSAL LIBRARY

# ಗುರುಗೋವಿಂದಸಿಂಹ.

ಲೇಖಕ:—

ಶಂಕರರಾವ ಕುಲಕರ್ಣಿ, ಸೂಲವಿ.

೫೦೦ ಪ್ರತಿಗಳು

೧೯೨೭ ನವಂಬರ.

ಬೆಲೆ ೧೨ ಆಣೆ.

ಆನಂದವನದ ಶ್ರೀ ಶೇಷಾಚಲ ಪ್ರೆಸ್ಸಿನಲ್ಲಿ ಭಿ. ವ. ಕಾಳೆ

ಇವರು ಮುದ್ರಿಸಿದರು:

ಹಾಗು

ಶಂಕರ ಅಣ್ಣಾಜಿ ಕುಲಕರ್ಣಿ ಇವರು ನೂಲವಿಯಲ್ಲಿಯ ತಮ್ಮ ಮನೆಯಲ್ಲಿ

ಪ್ರಸಿದ್ಧಪಡಿಸಿದರು.

# ಪ್ರಸ್ತಾವನೆ.

ಪಾರತಂತ್ರ್ಯದಲ್ಲಿ ದೇಶದ ಸದ್ಗುಣಗಳ ಪರೀಕ್ಷೆಯಾಗುತ್ತಿರುತ್ತದೆ. ಸ್ವಾತಂತ್ರ್ಯದಲ್ಲಿ ದುರ್ಗುಣಗಳ ಪರೀಕ್ಷೆಯಾಗುತ್ತಿರುತ್ತದೆ. ಗ್ರೀಸ ರೋಮ ಮುಂತಾದ ರಾಜ್ಯಗಳು ವೈಭವಶಿಖರದಲ್ಲಿ ಮೆರೆಯುತ್ತಿದ್ದಾಗ, ಆ ಜನರೊಳಗೆ ಸೇರಿದ ಹುಳುಕುಗಳು ಹೊರಬಿದ್ದು ಆ ಆ ಹುಳುಕುಗಳ ಮೂಲಕವೇ ಅವು ತಮ್ಮ ವೈಭವಕ್ಕೆ ಎರವಾದವು. ಹಿಂದುಸ್ಥಾನದೇಶವು ಈಗ ಸಾವಿರಾರು ವರ್ಷಗಳಿಂದ ಪಾರತಂತ್ರ್ಯಕ್ಕೆ ಈಡಾದುದು ಅತ್ಯಂತ ದುರ್ದೈವದ ಸಂಗತಿಯಾದಾಗ್ಯೂ ಈ ದುರ್ದೈವವೇ ನಮ್ಮ ಜನರೊಳಗಿದ್ದ ತೇಜವನ್ನು ಬಹಿರಂಗಪಡಿಸಲಿಕ್ಕೆ ಕಾರಣವಾಗಿದೆ ಹೀಗೆ ಸದ್ಗುಣಗಳ ಒರೆಗಲ್ಲಿಗೆ ಹಚ್ಚಲ್ಪಟ್ಟು ತೇಜವನ್ನು ಚಿಮ್ಮಿದ ಅನೇಕ ಅಸಾಧಾರಣ ವ್ಯಕ್ತಿಗಳನ್ನು ನಾವು ನಮ್ಮ ಇತಿಹಾಸದಲ್ಲಿ ಕಾಣಬಹುದು. ಪೃಥ್ವೀರಾಜ, ನಾನಕ, ಗುರುಗೋವಿಂದಸಿಂಗ, ರಾಣಾಪ್ರತಾಪಸಿಂಗ, ವಿದ್ಯಾರಣ್ಯ, ಹರಿಹರ, ಶಿವಾಜಿ ಮುಂತಾದ ಅಲೌಕಿಕ ವ್ಯಕ್ತಿಗಳೆಲ್ಲವೂ ಈ ಮಾದರಿಯ ವ್ಯಕ್ತಿಗಳೇ. ನಮ್ಮ ದೇಶಕ್ಕೆ ಮುಖ್ಯವಾಗಿ ಬಂದ ಆಪತ್ತುಗಳು ಎರಡು. (೧) ಧರ್ಮಗ್ಲಾನಿ. (೨) ತನ್ಮೂಲಕ ಉಂಟಾದ ರಾಜ್ಯಗ್ಲಾನಿ. ನಮ್ಮ ದೇಶದಲ್ಲಿ ಉದಯವಾದ ಧರ್ಮವೀರ ಕರ್ಮವೀರರಿಗಲ್ಲ ಇವೆರಡು ಆಪತ್ತುಗಳೊಡನೆ ಬಲವಾಗಿ ಹೋರಾಡಬೇಕಾಯಿತು. ಆ ಹೋರಾಟದಲ್ಲಿ ಆಯಾ ಕಾಲದ ಪರಿಸ್ಥಿತಿಯ ಮೂಲಕ ಮತ್ತು ಕೆಲಮಟ್ಟಿಗೆ ತಮ್ಮ ಸಾಮರ್ಥ್ಯದಲ್ಲಿಯೂ ತಪೋಬಲದಲ್ಲಿಯೂ ನ್ಯೂನತೆಯಿದ್ದ ಮೂಲಕ ಕೆಲವ್ಯಕ್ತಿಗಳಿಗೆ ಅವೆರಡೂ ಮಹಾ ಸಂಕಟಗಳಿಗೆ ಇದಿರಾಗಿ ಜಯಪಡೆಯುವುದು ಆಗಲಿಲ್ಲ. ಮತ್ತೆ ಕೆಲವು ವ್ಯಕ್ತಿಗಳಿಗೆ ಆ ಹೋರಾಟದಲ್ಲಿ ಉಜ್ವಲವಾದ ಜಯವು ಪ್ರಾಪ್ತವಾಯಿತು. ಹೀಗೆ ಜಯದೊರೆಯದ ವ್ಯಕ್ತಿಗಳಲ್ಲಿ ಗುರುಗೋವಿಂದ

ಸ್ಲಿಂಹನೊಬ್ಬನು. ಈತನ ಆಯುಷ್ಯವೆಲ್ಲವೂ ಸೋಲುಗಳನ್ನು ಸಹಿಸುವುದರಲ್ಲಿಯೂ ಅಪಮಾನಗಳಿಗೆ ಈಡಾಗುವುದರಲ್ಲಿಯೂ ಸಂಕಟಗಳಿಗೆ ಗುರಿಯಾಗುವುದರಲ್ಲಿಯೂ ಸ್ವಜನರಿಂದಲೂ ಶತ್ರುಗಳಿಂದಲೂ ವಂಚಿಸಲ್ಪಡುವುದರಲ್ಲಿಯೂ ಕಳೆದು ಹೋಯಿತು. ಆದರೇನು, ಇದರಿಂದ ಆತನ ಯೋಗ್ಯತೆ ಕಡಿಮೆಯಾಗಬಹುದೆ? ಸಂಕಟಗಳು ಹೆಚ್ಚು ಹೆಚ್ಚು ಒದಗಿದಷ್ಟು ಆತನ ತೇಜವು ಹೆಚ್ಚು ಹೆಚ್ಚು ಪ್ರಕಟವಾಗುತ್ತಿತ್ತು. ಗುರುಗೋವಿಂದಸಿಂಹನ ಈ ಚರಿತ್ರೆಯೆಂದರೆ ರಾಮಾಯಣ ಮಹಾಭಾರತದ ಕಥೆಯಂತೆಯೇ ಕೆಲವು ಕಡೆಗೆ ಭಾಸವಾಗುತ್ತಿದೆ. ಘೋರವಾದ ವಿಪತ್ತುಗಳಲ್ಲಿ ಆತನು ತನ್ನ ಸದ್ಗುಣಗಳನ್ನು ಅಚ್ಚಳಿಯದೆ ಕಾಯ್ದುಕೊಂಡದ್ದೇನೂ ಸಾಮಾನ್ಯ ಸಂಗತಿಯಲ್ಲ. ಅದೇ ಆತನನ್ನು ಅಲೌಕಿಕ ಪುರುಷರಲ್ಲಿ ಗಣಿಸಲಿಕ್ಕೆ ಸಾಕಾಗಿದೆ.

ಗುರುಗೋವಿಂದಸಿಂಹನ ಈ ಚರಿತ್ರೆಯನ್ನೋದಿದರೆ ನಮ್ಮ ದೇಶದಲ್ಲಿ ಧರ್ಮ ಮತ್ತು ರಾಜಕಾರಣ ಎಂಬೆರಡು ಪರಸ್ಪರ ವಿರೋಧವಾದ ವಸ್ತುಗಳಿರುವದಿಲ್ಲವೆಂದೂ ಅವು ತೀರ ಸಂಲಗ್ನವಾಗಿರುವವೆಂದೂ ಕಂಡು ಬರುವದು. ಧರ್ಮವೇ ನಮ್ಮ ದೇಶದ ಮುಖ್ಯ ಧ್ಯೇಯು; ಒಣರಾಜಕಾರಣಕ್ಕೆ ನಮ್ಮ ದೇಶದಲ್ಲಿ ಅಷ್ಟೊಂದು ಬೆಲೆ ಇಲ್ಲ. ಧರ್ಮದಲ್ಲಿ ಪರ್ಯವಸಾನವಾಗದಿದ್ದ ರಾಜಕಾರಣವನ್ನು ನಮ್ಮ ರಾಜಕಾರಣ ಪುರುಷರು ಎಲ್ಲಿಯ ವರೆಗೆ ನಡಿಸುವರೋ ಅಲ್ಲಿಯ ವರೆಗೆ ಜನಸಾಮಾನ್ಯವು ಆ ರಾಜಕಾರಣದಿಂದ ಅಲಿಪ್ತವಾಗಿ ಉಳಿಯುವುದೇ ಸರಿ. ನಾವು ಸ್ವಾತಂತ್ರ್ಯಹೀನರಾದುದರಿಂದ ನಮ್ಮ ಧರ್ಮಕ್ಕೆ ಗಂಡಾಂತರವೊದಗಿದೆಂಬುದನ್ನು ಸಾಮಾನ್ಯಜನರಿಗೆ ಬಿಂಬಿಸಿದರೆ ಮಾತ್ರ, ರಾಜಕಾರಣಕ್ಕೆ ವಿಲಕ್ಷಣ ಕಳೆ ಏರುವದು. ಮುಸಲ್ಮಾನರ ಕಾಲದಲ್ಲಿ, ಮುಸಲ್ಮಾನರು ಬಹಿರಂಗವಾಗಿಯೂ ಬಲವಾಗಿಯೂ ಧರ್ಮಕ್ಕೆ ತೂತು ಕೊರೆಯ ಹತ್ತಿ

ದ್ದರಿಂದ, ಜನಸಾಮಾನ್ಯವು ತಟ್ಟನೆ ಎಚ್ಚರವಾಗುತ್ತಿತ್ತು. ಇದ ರಿಂದ ಗುರುಗೋವಿಂದಸಿಂಹನು ತನ್ನ ಶೀಖಜನರಿಗೆ ವೀರದೀಕ್ಷೆ ಯನ್ನು ಕೊಡಲಿಕ್ಕೆ ಉತ್ತಮವಾದ ಸಂಧಿ ದೊರೆಯಿತು. ಆದರ ಲಾಭವನ್ನು ತೆಗೆದುಕೊಂಡು ಆತನು ಶೀಖಜನರನ್ನು ವೀರರನ್ನಾಗಿ ಮಾಡಿ ಬಿಟ್ಟನು. ಇಂದಿಗೆ ಅವರು ವೀರಾಗ್ರಣಿಗಳೆಂದು ಖ್ಯಾತಿ ಪಡೆದಿರುವರು ಪಂಚಾಬದೇಶವು ಪುರಾತನ ಕಾಲದಿಂದಲೂ ಪರ ಕೀಯರ ದಾಳಿಗಳಿಗೆ ಎಲ್ಲಕ್ಕೂ ಮುಂಚೆ ಮೈಯೊಡ್ಡಬೇಕಾಗಿರು ವುದು ಆದಕ್ಕೆ ಮೇಲಿಂದ ಮೇಲೆ ಪರಕೀಯರ ಪೆಟ್ಟುಗಳು ಬಿದ್ದು ದಡ್ಡು ಬಿದ್ದಿರುತ್ತದೆ. ಈ ಕಾರಣದ ಸಲುವಾಗಿಯೇ ದೇವರು ಆ ಪ್ರಾಂತೀಯರಲ್ಲಿ ಕ್ಷಾತ್ರತೇಜವನ್ನು ಹೆಚ್ಚಿಗೆ ಇಟ್ಟಿರುವನು. ಆ ಕ್ಷಾತ್ರತೇಜಕ್ಕೆ ಧರ್ಮದ ತಳಹದಿಯನ್ನು ಹಾಕಿದ್ದರಿಂದ ಗುರುಗೋ ವಿಂದಸಿಂಹನ ಶಿಷ್ಯರಲ್ಲಿ ಧರ್ಮವೂ ಕ್ಷಾತ್ರತೇಜವೂ ಮಿಲಿತವಾಗಿ ಪ್ರಕಟವಾದುವು

ಗುರುಗೋವಿಂದಸಿಂಹನ ಆಯುಷ್ಯವು ಅಪಜಯದಿಂದ ತುಂಬಿರುವುದೆಂಬದನ್ನು ನಾವು ಮೇಲೆ ಹೇಳಿಯೇ ಇರುವೆವು. ಅದರ ಕಾರಣವನ್ನೂ ನಾವು ಯೋಚಿಸಲೇಬೇಕು. ನಮ್ಮ ಹಿಂದುಸ್ಥಾನವು ಪರಕೀಯರ ದಾಳಿಗಳನ್ನು ಸಮಗ್ರವಾಗಿ ಮುರಿಯಲು ಸಮರ್ಥ ವಾಗಲಿಲ್ಲವೆಂಬುದೊಂದೇ ಸಂಗತಿಯು, ನಮ್ಮ ಜನರಲ್ಲಿ ಕೆಲವು ಕುಂದು-ಕೊರತೆಗಳು ಇದ್ದೇ ಇರಬೇಕೆಂಬುದಕ್ಕೆ ಪ್ರತ್ಯಕ್ಷ ಪುರಾವೆ ಯಾಗಿದೆ. ಗುರುಗೋವಿಂದಸಿಂಹನ ಚರಿತ್ರೆಯನ್ನೋದಿದರೆ ಅವುಗಳ ಲ್ಲಿಯ ಕೆಲವು ಕುಂದು-ಕೊರತೆಗಳು ನಮಗೆ ಗೊತ್ತಾಗದಿರವು. ನಮ್ಮ ಜನರ ಮರುಳತನವು ವಿಲಕ್ಷಣವಾದದ್ದು. ನಮ್ಮ ಜನರಿಗೆ ತಮ್ಮ ಮಿತ್ರರಾರು, ಶತ್ರುಗಳಾರು ಎಂಬುದು ತೀವ್ರ ತಿಳಿಯುವದಿಲ್ಲ ವೆಂದು ತೋರುತ್ತದೆ. ಅವರು ಪರರನ್ನು ತೀವ್ರವೇ ನಂಬಿಬಿಡುವರು.

ಇದು ವ್ಯಕ್ತಿಶಃ ಸದ್ಗುಣವೆಂದು ತಿಳಿಯಲ್ಪಟ್ಟರೂ ರಾಜಕಾರಣ ದೃಷ್ಟಿಯಿಂದ ನೋಡಲು ಅದೊಂದು ದೊಡ್ಡ ಕುಂದೇಎಂದು ಹೇಳ ಬಹುದು. ಹಾಗೆಯೇ, ನಮ್ಮ ಜನರಲ್ಲಿ ಇಡೀ ಹಿಂದುಸ್ಥಾನದ ಕಲ್ಪನೆಯು ತಟ್ಟನೆ ಒಡಮೂಡದಿರುವುದೂ ನಮ್ಮ ಅವನತಿಗೆ ಮುಖ್ಯಕಾರಣವಾಯಿತು. ಹಾಗೆಯೇ ಒಡಕು ಎಂಬುವದಂತೂ ನಮ್ಮ ಅತ್ಯಂತ ದೊಡ್ಡ ದುರ್ಗುಣವೆಂಬುದನ್ನು ಬೇರೆ ಹೇಳಲಿಕ್ಕೆ ಕಾರಣವಿಲ್ಲ ಸಾರಾಂಶ, ಇವೇ ಮುಂತಾದ ಹಲವು ದುರ್ಗುಣ ಗಳು ನಮ್ಮಲ್ಲಿ ಸೇರಿದ್ದೊಂದೇ ಗುರುಗೋವಿಂದಸಿಂಹನ ಅಪಜ ಯಕ್ಕೆ ಕಾರಣವಾಯಿತು. ಆತನು ಅತಿ ಪ್ರಯಾಸದಿಂದ ಅತ್ತ ಸ್ವಾತಂತ್ರ್ಯದೇವಿಯ ಮಂದಿರದ ಒಂದೊಂದೇ ಇಟ್ಟಿಗೆಯನ್ನು ಏರಿಸುತ್ತಿದ್ದಾಗ, ಇತ್ತ ಈ ದುರ್ಗುಣಗಳು ಒಳಗಿಂದೊಳಗೆ ತೂತು ಕೊರೆದು ಇಟ್ಟಿಗೆಗಳನ್ನು ಸಡಿಲು ಮಾಡುತ್ತಿದ್ದವು. ಹೀಗಾದ ಬಳಿಕ ಆ ಮಂದಿರವು ಏರುವುದು ಹೇಗೆ?

ಇರಲಿ, ಸರಳವಾದ ಮತ್ತು ಸರಸವಾದ ಭಾಷೆಯಲ್ಲಿ ಬರೆ ಯಲ್ಪಟ್ಟ ಗುರುಗೋವಿಂದಸಿಂಹನ ಈ ಜೀವನಚರಿತ್ರೆಯು ಭಾರತೀ ಯರ ಹೃದಯದಲ್ಲಿ ಯಾವಾಗಲೂ ಹುರುಪು ಹುಟ್ಟಿಸುವುದೆಂಬ ಮಾತು ನಿರ್ವಿವಾದವಿದೆ. ಅದನ್ನು ಓದಿ ನಮ್ಮ ತರುಣರು ಕರ್ತವ್ಯ ದೀಕ್ಷೆಯನ್ನು ಸ್ವೀಕರಿಸುವರೆಂದು ನಂಬುತ್ತೇವೆ.

ಧಾರವಾಡ, ೧-೧೧-೧೯೨೭ } **ವೇಂಕಟೇಶ ಭೀಮರಾವ ಆಲೂರ.**

# ಅನುಕ್ರಮಣಿಕೆ.


| ಅಧ್ಯಾಯ. | | ಪುಟ |
|---|---|---|
| ೧ | ಮುನ್ನುಡಿ | ೧ |
| ೨ | ಶೀಖರು | ೪ |
| ೩ | ಪೂರ್ವೇತಿಹಾಸ | ೧೨ |
| ೪ | ಜನನ | ೨೦ |
| ೫ | ಬಾಲ್ಯ | ೨೪ |
| ೬ | ತೇಗಬಹದ್ದೂರನ ಆತ್ಮಯಜ್ಞ | ೩೦ |
| ೭ | ಅಭಿಷೇಕ | ೩೭ |
| ೮ | ಸಾಧನೆ | ೪೦ |
| ೯ | ಔರಂಗಜೇಬ | ೪೯ |
| ೧೦ | ಹೃದಯಪರಿಚಯ | ೫೬ |
| ೧೧ | ಭಿಂಗಾಲಿಯ ಯುದ್ಧ | ೬೨ |
| ೧೨ | ರಾಜ್ಯವಿಸ್ತಾರ | ೭೦ |
| ೧೩ | ನಿರ್ಮಲೀ | ೭೬ |
| ೧೪ | ಮುಖವಾಲದ ಯುದ್ಧ | ೮೨ |
| ೧೫ | ಚಮಕೌಡಕೋಟೆ | ೯೩ |
| ೧೬ | ಕಠೋರ ಪರೀಕ್ಷೆ | ೯೮ |
| ೧೭ | ಮುಕ್ತಸರ | ೧೦೬ |
| ೧೮ | ರಾಜಧಾನಿಯ ಮಾರ್ಗದಲ್ಲಿ | ೧೧೨ |
| ೧೯ | ಜೀವನಸಂಧ್ಯಾ | ೧೧೬ |
| ೨೦ | ಉಪಸಂಹಾರ | ೧೨೬ |

# ಈ ಲೇಖಕರಿಂದ ಬರೆಯಲ್ಪಟ್ಟ ಪುಸ್ತಕಗಳು.

| | ಹೆಸರು | ಬೆಲೆ. |
|---|---|---|
| ೧ | ಮಹಾರಾಣಾ ಪ್ರತಾಪಸಿಂಹ | ೧-೪-೦ |
| ೨ | ಬೇಗಮ ಸಮರು | ೦-೬-೦ |
| ೩ | ಹರ್ಷಸಾಮ್ರಾಜ್ಯ | ೦-೮-೦ |
| ೪ | ಗುರುಗೋವಿಂದಸಿಂಹ | ೦-೧೨-೦ |
| ೫ | ಗಂಗಾಲಹರಿ | ೦-೫-೦ |
| ೬ | ಪನ್ನಾವತಿ | ೧-೬-೦ |
| ೭ | ವಿಕಾರವಿನಾಶ | ೦-೧೦-೦ |
| ೮ | ಕರ್ನಾಟಕಸಿಂಹಾಸನ ಸ್ಥಾಪನೆ | ೧-೦-೦ |
| ೯ | ಸಾಧ್ವೀ-ಹೃದಯ | ೧-೪-೦ |
| ೧೦ | ವಿಚಿತ್ರವಿವಾಹ | ೧-೦-೦ |
| ೧೧ | ಜಕಣಾಚಾರ್ಯ | ೦-೧೪-೦ |
| ೧೨ | ಜಯಪರಾಜಯ | ೦-೧೨-೦ |
| ೧೩ | ಭಯಂಕರ ಕೊಲೆ | ೦-೧೨-೦ |
| ೧೪ | ರಾಷ್ಟ್ರಸಭೆಯ ಇತಿಹಾಸ | ೨-೮-೦ |

ಪುಸ್ತಕಗಳು ಸಿಗುವ ಪತ್ತೆ:—ಮ್ಯಾನೇಜರ ಶ್ರೀ ಶೇಷಾಚಲ ಪ್ರೆಸ್, ಆನಂದವನ.

# ಗುರುಗೋವಿಂದಸಿಂಹ.

## ಅಧ್ಯಾಯ ೧—ಮುನ್ನುಡಿ.

ನಮ್ಮ ಈ ಹಿಂದುಸ್ಥಾನದ ಇತ್ತೀಚೆಯ ಇತಿಹಾಸದಲ್ಲಿ ಧರ್ಮವೀರರೂ ಯುದ್ಧವೀರರೂ ಹಾಗು ಸಾಹಸಿಗಳು ಹಲವರು ಆಗಿಹೋಗಿದ್ದಾರೆ. ಇವರಲ್ಲಿ ಮೂವರು ಒಳ್ಳೇ ಹೆಸರಾದವರು. ಇವರು ಯಾರೆಂದರೆ, ರಜಪೂತಸ್ಥಾನದ ಮಹಾರಾಣಾ ಪ್ರತಾಪಸಿಂಹ, ಛತ್ರಪತಿ ಶಿವಾಜಿ ಹಾಗು ಪಂಜಾಬದ ಶೀಖ ಧರ್ಮ ಗುರುಗೋವಿಂದಸಿಂಹ. ಈ ಮೂವರಲ್ಲಿ ಶ್ರೇಷ್ಠತಮನು ಯಾವನು? ಎಂಬುದನ್ನು ನಿರ್ಣಯಿಸುವುದು ಸುಲಭವಲ್ಲ; ಸಮಂಜಸವೂ ಅಲ್ಲ. ಯಾಕೆಂದರೆ, ಈ ಮೂವರೂ ಮಹನೀಯರು; ಉದಾರ ಹೃದಯರು; ಸ್ವದೇಶಪ್ರಾಣರು; ಸ್ವಜನರ ಹಾಗು ಸ್ವದೇಶದ ಗೌರವ ರಕ್ಷಣೆಗೋಸುಗ ತಮ್ಮ ಸರ್ವಸ್ವವನ್ನೂ ಸೂರೆಗೊಂಡವರು. ತಮ್ಮ ಅಚಲಧೈರ್ಯದಿಂದ, ಅತುಲ ಸ್ವಾರ್ಥತ್ಯಾಗದಿಂದ, ಉನ್ನತಬಾಹುಬಲದಿಂದ, ಅನುಪಮ ಸಾಹಸದಿಂದ ಕಾರ್ಯಮಾಡಿ, ಕೀರ್ತಿಶಾಲಿಗಳಾಗಿದ್ದ ಈ ಮೂವರೂ ಸಮಾನಯೋಗ್ಯತೆಯವರೆಂದೇ ಅನ್ನಬೇಕಾಗುತ್ತದೆ. ಆದರೆ ಕೆಲವರು ಇತಿಹಾಸಕಾರರು ಆಧುನಿಕಕಾಲದ ಈ ವೀರತ್ರಯರನ್ನು ಒರೆಹಚ್ಚಹೋಗಿ ಇಂಥವನು ಹಿರಿದು ಯೋಗ್ಯತೆಯವನು, ಇಂಥವನು ಕಿರಿದು ಯೋಗ್ಯತೆಯವನು ಎಂದು ನಿರ್ಣಯಿಸಲಿಕ್ಕೆ ಯತ್ನಿಸಿದ್ದಾರೆ. ಇದು ಅಪ್ರಯೋಜಕವೆಂದು ನಮಗೆ ಅನಿಸುತ್ತದೆ.

ಈ ಮೂವರಿಗೂ ಮುಸಲ್ಮಾನರು ವಿರೋಧಿಗಳಾಗಿದ್ದರು. ವಿಸ್ತಾರವಾದ ಹಿಂದುಸ್ಥಾನದ ಸಾಮ್ರಾಟ ಪದವಿಯನ್ನು ಪಡೆದಿದ್ದ ಮೊಗಲರು

ಪ್ರಬಲಪರಾಕ್ರಮಿಗಳು; ಅಧಿಕಾರ ಸಂಪನ್ನರು; ಬಲಶಾಲಿಗಳು; ವಿಜಯೋನ್ಮತ್ತರು. ಇವರನ್ನು ವಿರೋಧಿಸುವುದು ಸಾಮಾನ್ಯಕೆಲಸವಾಗಿರಲಿಲ್ಲ. ಭಾರತೀಯರು ಕಾಮಕ್ರೋಧಾದಿ ಅರಿಷಡ್ವರ್ಗಗಳ ವಶರಾಗಿ, ಆತ್ಮಕಲಹದಲ್ಲಿ ಮೈಮರೆದು, ಅವನತಿಯ ಮಾರ್ಗದಲ್ಲಿರುವಾಗ ಮಹಮ್ಮದೀಯರು ತಮ್ಮ ಸರ್ವಶಕ್ತಿಯನ್ನುಪಯೋಗಿಸಿ, ರಾಜ್ಯವನ್ನೂ ಧರ್ಮವನ್ನೂ ಬೆಳಿಸುವದಕ್ಕೆ [illegible] ಪ್ರಯತ್ನಿಸುತ್ತಿದ್ದರು. ಅಧೋಗತಿಯ ಹಾದಿಯಲ್ಲಿ ಅಟ್ಟಹಾಸದಿಂದ ನಾಗಿದ್ದ ಹಿಂದುಗಳಿಗೆ ಮುಸಲ್ಮಾನರನ್ನು ಎದುರಿಸುವ ಶಕ್ತಿಯು [illegible] ಅವರ ಕಡೆಗೆ ನೋಡುವ [illegible] ಸಹ ಉಳಿದಿರಲಿಲ್ಲ. ಇಂತಹ ವಿಷಮ ಸ್ಥಿತಿಯಲ್ಲಿ ಭಾರತೀಯರ ಉದ್ಧಾರಕ್ಕೋಸ್ಕರ ಲೋಕೋತ್ತರ ವ್ಯಕ್ತಿಗಳು ಅವಶ್ಯವಾಗಿ ಬೇಕಿದ್ದರು. ಮೇಲೆ ಹೇಳಿದ ಮೂವರು ಮಹನೀಯರು ಲೋಕೋತ್ತರ ವ್ಯಕ್ತಿಗಳಾಗಿದ್ದರೆಂಬುದನ್ನು ಹೇಳುವ ಕಾರಣವಿಲ್ಲ.

"ಅಧರ್ಮವು ಪ್ರಬಲಿಸಿ ಧರ್ಮವನ್ನು ಕುಗ್ಗಿಸುತ್ತಿರುವಾಗ, ಧರ್ಮವನ್ನು ಪುನರುಜ್ಜೀವನಗೊಳಿಸಿ ಅಧರ್ಮವನ್ನು ಹೊಡೆದೋಡಿಸುವದಕ್ಕೆ ಪ್ರತಿಯುಗದಲ್ಲೂ ನಾನು ಅವತಾರವೆತ್ತುತ್ತೇನೆ" ಎಂದು ಭಗವಂತನು ಗೀತೆಯಲ್ಲಿ ಅರ್ಜುನನಿಗೆ ಹೇಳಿದ್ದಾನೆ. ಭರತಖಂಡದ ಇತಿಹಾಸದಲ್ಲಿ ಈ ಮಾತಿನ ಸತ್ಯತೆಗೆ ಹಲವು ಪ್ರಮಾಣಗಳು ದೊರೆಯುತ್ತವೆ. ಭಾರತವರ್ಷವು ಧರ್ಮವನ್ನುಳಿದು ಅಧರ್ಮವನ್ನಾಶ್ರಯಿಸಿ ಅಧೋಗತಿಯ ಹಾದಿಯು ಹಿಡಿದಾಗ ಲೋಕೋತ್ತರ ವ್ಯಕ್ತಿಯನ್ನು ಹೊಂದಿ, ಅವನ ಪ್ರಯತ್ನಗಳಿಂದ ಉದ್ಧಾರವಾಗುತ್ತ ಬಂದುದಕ್ಕೆ ಇತಿಹಾಸದಲ್ಲಿ ಅನೇಕ ಆಧಾರಗಳಿವೆ. ಈ ಲೋಕೋತ್ತರ ವ್ಯಕ್ತಿಗಳಿಗೆ ಕೆಲವರು ಭಗವಂತನ ಅವತಾರವೆನ್ನುವರು. ಮತ್ತೆ ಹಲವರು ಶ್ರೇಷ್ಠತಮ ಮನುಷ್ಯನೆಂದೆನ್ನುವರು. ಇನ್ನು ಕೆಲವರು ದೇವದೂತನೆಂದೆನ್ನುವರು. ಯಾವ ಹೆಸರು ಕೊಟ್ಟರೂ ಅಡ್ಡಿಯಿಲ್ಲ. ಇಂತಹ ಲೋಕೋತ್ತರ ವ್ಯಕ್ತಿಗಳು

ನಮ್ಮೆಲ್ಲರಿಗೆ ಪೂಜ್ಯರೆಂಬುದರಲ್ಲಿ ತಿಲಪ್ರಾಯವಾದರೂ ಸಂದೇಹವಿಲ್ಲ.

ಲೋಕೋತ್ತರ ವ್ಯಕ್ತಿಗಳ ಪೂಜೆಯು ನಮ್ಮಲ್ಲಿ ಬಹುಕಾಲದಿಂದ ನಡೆದು ಬಂದಿದೆ. ಪುರಾಣಕಾಲದ ರಾಮ, ಕೃಷ್ಣ, ಆಂಜನೇಯ ಮೊದಲಾದವರು ಅವತಾರಿಕರೆಂದು ಪ್ರಸಿದ್ಧರಾಗಿ ಪೂಜೆಯನ್ನು ಹೊಂದುತ್ತಿದ್ದಾರೆ. ಇತಿಹಾಸಕಾಲದ ಬುದ್ಧ, ಬಸವೇಶ್ವರ ಮೊದಲಾದವರು ದೇವರಾಗಿದ್ದು ಪೂಜೆಯನ್ನು ಮಾಡಿಸಿಕೊಳ್ಳುತ್ತಿದ್ದಾರೆ. ಆದರೆ ಇತಿಹಾಸಕಾಲದ ಕೆಲವು ಲೋಕೋತ್ತರ ವ್ಯಕ್ತಿಗಳನ್ನು ನಮ್ಮವರು ದೇವರಲ್ಲಿ ಎಣಿಸಿಲ್ಲ. ಅದ್ವೈತಮತಸ್ಥಾಪಕರಾದ ಶಂಕರಾಚಾರ್ಯರು ಶಿವನ ಅವತಾರವೆಂದು ಹಲವರು ಹೇಳುತ್ತಿರುವರಾದರೂ, ರಾಮಕೃಷ್ಣರಂತೆ ಇವರ ಪೂಜೆಯು ನಡೆಯುವದಿಲ್ಲ. ಮರಾಟಿಗರಲ್ಲಿ ಕೆಲವರು ಶಿವಾಜಿಯು ಶಿವನ ಅವತಾರವೆಂದು ನಂಬುತ್ತಿರುವರಾದರೂ, ಶಿವಾಜಿಯ ಪ್ರತಿಮೆಯ ಪೂಜೆಯು ಪ್ರಚಾರದಲ್ಲಿಲ್ಲ. ಪೂಜೆಯು ನಡೆಯಲಿ-ನಡೆಯದಿರಲಿ, ಇವರೆಲ್ಲರು ಭಾರತೀಯರ ಉದ್ಧಾರಕರು. ಭಾರತೀಯರಿಗೆಲ್ಲ ವಂದ್ಯರು. ಹೇಗೆ ರಾಮಕೃಷ್ಣಾದಿಗಳು ಪೂಜ್ಯರೋ ಹಾಗೆಯೇ ಶಂಕರಾಚಾರ್ಯ ರಾಮಾನುಜಾಚಾರ್ಯ ವಿದ್ಯಾರಣ್ಯ ಮೊದಲಾದವರು ಪೂಜ್ಯರು. ಹಾಗೆಯೇ ಮಹಾರಾಣಾಪ್ರತಾಪಸಿಂಹ, ಗುರುಗೋವಿಂದಸಿಂಹ, ಛತ್ರಪತಿ ಶಿವಾಜಿ ಮೊದಲಾದವರೂ ವಂದ್ಯರು.

ಆಧುನಿಕಕಾಲದ ಈ ಮೂವರು ಮಹನೀಯರಲ್ಲಿಯ ಮೊದಲಿನವನ ಚರಿತ್ರವನ್ನು ಕುರಿತು ನಾವು ಈ ಮೊದಲೇ ಮಹಾರಾಣಾಪ್ರತಾಪಸಿಂಹ ಎಂಬ ಪುಸ್ತಕವನ್ನು ಬರೆದಿದ್ದೇವೆ. ಈಗ ನಾವು ಗುರುಗೋವಿಂದಸಿಂಹನ ಉಜ್ವಲವಾದ ಚರಿತ್ರೆಯನ್ನು ಕನ್ನಡಿಗರಿಗೆ ತಿಳುಹಿಕೊಡುವ ಉದ್ದೇಶದಿಂದ ಈ ಗ್ರಂಥವನ್ನು ಬರೆಯಲಿಕ್ಕೆ ಯತ್ನಿಸಿದ್ದೇವೆ.

# ಅಧ್ಯಾಯ ೨—ಶೀಖರು.

ನಮ್ಮ ಭರತಖಂಡದ ಉತ್ತರಭಾಗದಲ್ಲಿ ಪಂಜಾಬಪ್ರಾಂತವಿದೆ. ಪಂಜಾಬವೆಂದರೆ ಐದುಹೊಳೆಗಳ ಪ್ರದೇಶ. ಸಿಂಧು, ಜಹಲಮ್, ಚಿನಾಬ, ರಾವಿ, ಸತಲಜ ಎಂಬ ಐದು ದೊಡ್ಡ ನದಿಗಳು ಈ ಪ್ರಾಂತದಲ್ಲಿ ಹರಿದು, ನೀರಿನ ಸಮೃದ್ಧಿಯನ್ನುಂಟು ಮಾಡಿವೆ. ಈ ಪ್ರಾಂತದ ಉತ್ತರಕ್ಕೆ ಭೂಸ್ವರ್ಗವಾದ ಕಾಶ್ಮೀರರಾಜ್ಯ, ದಕ್ಷಿಣಕ್ಕೆ ರಾಜಸ್ಥಾನ, ಪೂರ್ವಕ್ಕೆ ಯಮುನಾ ನದಿ, ಪಶ್ಚಿಮಕ್ಕೆ ಸುಲೈಮಾನ ಪರ್ವತದ ಸಾಲುಗಳು.

ಹಿಂದುಸ್ಥಾನವು ಸ್ವಾಭಾವಿಕವಾಗಿ ಭದ್ರವಾದದ್ದು. ಪರಚಕ್ರಗಳ ಹಾವಳಿಗೆ ಅನುಕೂಲವಾದುದಲ್ಲ. ಉತ್ತರದಲ್ಲಿ ನಗಾಧಿರಾಜ ಹಿಮಾಲಯವು ತಲೆಯೆತ್ತಿಕೊಂಡಿದ್ದು, ಪರದೇಶಿಗರ ದಾಳಿಗಳಿಂದ ಹಿಂದುಸ್ಥಾನವನ್ನು ರಕ್ಷಿಸುತ್ತಿದೆ. ಉಳಿದ ಮೂರು ದಿಕ್ಕುಗಳಲ್ಲಿ ಸಮುದ್ರವು ವ್ಯಾಪಿಸಿದೆ. ವಾಯುವ್ಯದ ಮೂಲೆಯೊಂದರಲ್ಲಿ ಮಾತ್ರ ಒಂದೆರಡು ಘಟ್ಟದ ಮಾರ್ಗಗಳಿವೆ. ವಿದೇಶಿಗರೆಲ್ಲರು ಈ ಮಾರ್ಗಗಳಿಂದಲೆ ಹಿಂದುಸ್ಥಾನವನ್ನು ಹೊಕ್ಕಿದ್ದಾರೆ. ಆರ್ಯರು ಈ ದೇಶಕ್ಕೆ ಬಂದುದು ಈ ಮಾರ್ಗವಾಗಿಯೆ. ಗ್ರೀಕರು ಈ ದೇಶದಮೇಲೆ ದಂಡೆತ್ತಿ ಬಂದದ್ದು ಈ ದಾರಿಯಿಂದಲೆ. ಸಿಥಿಯನ್, ಶಕ, ಹೂಣ ಮೊದಲಾದವರು ಈ ಹಾದಿಯಿಂದಲೆ ಹಿಂದುಸ್ಥಾನವನ್ನು ಹೊಕ್ಕರು. ಅರಬರೂ, ತುರಕರೂ, ಟಾರ್ಟರರೂ, ಅಫಗಾಣರೂ ಈ ಮಾರ್ಗವಾಗಿಯೆ ಹಿಂದುಸ್ಥಾನದ ಮೇಲೆ ದಂಡೆತ್ತಿ ಬಂದರು. ಈ ಘಟ್ಟದ ಮಾರ್ಗವು ಹಿಂದುಸ್ಥಾನವೆಂಬ ಭದ್ರಗೃಹದ ತಲೆಬಾಗಿಲವಾಗಿದೆಯೆಂದು ಹೇಳಬಹುದು.

ಈ ಕಣಿವೆಯ ಮಾರ್ಗವಾಗಿ ಹಿಂದುಸ್ಥಾನವನ್ನು ಹೊಗುತ್ತಲೆ ಮೊದಲು ಪಂಜಾಬವು ಹತ್ತುವದು. ಆದುದರಿಂದ ಭರತಖಂಡದ ಇತರ

ಪ್ರಾಂತಗಳಿಗಿಂತ ಪಂಜಾಬವು ಪರದೇಶಿಗರ ದಾಳಿಗಳನ್ನು ವಿಶೇಷವಾಗಿ ಅನುಭವಿಸಿದೆ. ಪರಕೀಯರ ಭಯಂಕರ ಅತ್ಯಾಚಾರಗಳನ್ನು ಸಹಿಸಿದೆ. ವಿದೇಶಿಗರ ರಾಕ್ಷಸೀಮಹತ್ವಾಕಾಂಕ್ಷೆಗೆ ಬಹುಬಾರಿ ಬಲಿಯಾಗಿದೆ.

ಆರ್ಯರು ಹಿಂದುಸ್ಥಾನದಲ್ಲಿ ತಮ್ಮ ವಸತಿಯನ್ನೂ ಸುಧಾರಣೆಯನ್ನೂ ಪ್ರಾರಂಭಿಸಿದುದು ಮೊದಲು ಪಂಜಾಬದಲ್ಲಿಯೆ. ಪಂಜಾಬವು ಫಲವತ್ತಾದ ಭೂಮಿಯು; ಹಾಗು ಪಂಚನದಿಗಳಿಂದ ನೀರಿನ ಸೌಕರ್ಯವುಳ್ಳದ್ದು. ಆದ್ದರಿಂದ ಆರ್ಯರು ಈ ಪ್ರಾಂತವನ್ನು ಬಹಳವಾಗಿ ಪ್ರೀತಿಸಿದರು. ಹಾಗೆಯೆ ಪಂಜಾಬದ ಸೃಷ್ಟಿಸೌಂದರ್ಯವು ಆರ್ಯರ ಮನಸ್ಸನ್ನು ಚನ್ನಾಗಿ ಆಕರ್ಷಿಸಿಕೊಂಡಿತು. ಆದುದರಿಂದ ದೇಶತ್ಯಾಗಿಗಳಾಗಿ ಬಂದ ಆರ್ಯರು ಈ ಪ್ರದೇಶದಲ್ಲಿ ಸುಖ-ಸಮಾಧಾನದಿಂದಿದ್ದು, ತಮ್ಮ ಸುಧಾರಣೆಯನ್ನು ಒತ್ತರದಿಂದ ಮುಂದುವರಿಸಿದರು. ಈ ಸುಧಾರಣೆಯು ಬಹುಕಾಲ ನಡೆಯುತ್ತ ಬಂದುದರಿಂದ ಪಂಜಾಬವು ಶಿಲ್ಪ, ಸಾಹಿತ್ಯ ಮೊದಲಾದವುಗಳಿಂದ ಮಂಡಿತವಾಗಿ ಗೌರವವನ್ನು ಹೊಂದಿತು.

ಹಿಂದುಸ್ಥಾನದ ಮೇಲೆ ಹಲವರು ದಾಳಿಗಳನ್ನು ಮಾಡಿದ್ದಾರೆ. ಇವರಲ್ಲಿ ಹಿಂದುಸ್ಥಾನದ ಮೇಲೆ ಚಿರಕಾಲಿಕ ಪರಿಣಾಮವನ್ನುಂಟುಮಾಡಿದವರು ಮಹಮ್ಮದೀಯರು. ಇವರು ಈ ದೇಶವನ್ನು ಕೇವಲ ಸುಲಿಗೆ ಮಾಡುವದರಿಂದ ಸಂತುಷ್ಟರಾಗಲಿಲ್ಲ; ಈ ದೇಶದಲ್ಲಿ ರಾಜಕೀಯ ಸತ್ತೆಯನ್ನು ನೆಲೆಗೊಳಿಸಿ, ಈ ಅಧಿಕಾರದೊಡನೆ ಹಿಂದುಗಳ ಮೇಲೆ ಧಾರ್ಮಿಕ ಸತ್ತೆಯನ್ನೂ ಹೇರಬಯಸಿದರು. ಮೊದಲು ಮೊದಲು ಹಿಂದುಗಳು ತಮ್ಮ ಧರ್ಮವನ್ನು ಬಿಟ್ಟುಕೊಟ್ಟು ಮಹಮ್ಮದೀಯ ಧರ್ಮವನ್ನು ಸ್ವೀಕರಿಸಲಿಕ್ಕೆ ಎಷ್ಟು ಮಾತ್ರಕ್ಕೂ ಒಪ್ಪಲಿಲ್ಲ. ಆರ್ಯರಲ್ಲಿ ಸನಾತನ ಹಿಂದೂ ಧರ್ಮದ ಕಟ್ಟು ಜಾಗ್ರತವಿರುವವರೆಗೆ ಮುಸಲ್ಮಾನರ ಸಾಮ-ದಾನಾದಿ ಉಪಾಯಗಳು ನಿರರ್ಥಕವಾದವು; ಆದರೆ ಮುಸಲ್ಮಾನರ ಸಂಸರ್ಗದಿಂದ ಆರ್ಯರ ಹಿಂದೂತ್ವವು ಕ್ರಮಶಃ ಶಿಥಿಲವಾಗಹತ್ತಿತು. ಎಷ್ಟೋ ಜನರು

ಮುಸಲ್ಮಾನರ ನವಕರಿಯನ್ನು ವಹಿಸಿ, ಮುಹಮ್ಮದೀಯರ ಅನುಕರಣೆಗ ಳಾಗಿ, ಹೃದಯಸ್ಥಿತ ಸ್ವಧರ್ಮಜಾಗ್ರತೆಯನ್ನು ಕುಂದಿಸಿಕೊಳ್ಳಹತ್ತಿದರು. ಸಂಸ್ಕೃತಭಾಷೆಯು ವ್ಯವಹಾರದಲ್ಲಿ ಅಷ್ಟೊಂದು ಉಪಯುಕ್ತವಾಗಿರದ್ದ ರಿಂದ ರಾಜಭಾಷೆಗಳಾಗಿದ್ದ ಪಾರ್ಸೀ ಅರಬೀ ಭಾಷೆಗಳನ್ನು ಅಭ್ಯಾಸಿಸ ಹತ್ತಿದರು. ಇದರಿಂದ ವೇದಾದಿ ಪ್ರಾಚೀನ ಗ್ರಂಥಗಳ ಅಧ್ಯಯನವು ಕ್ರಮಶಃ ಕಡಿಮೆಯಾಗಹತ್ತಿತು. ಇದರಿಂದ ಹಲವರು ಸ್ವಧರ್ಮದ ನಿಜ ರಹಸ್ಯವನ್ನರಿಯದಾದರು. ಇಂಥವರು ಮುಸಲ್ಮಾನರ ಅತ್ಯಾಚಾರವನ್ನು ನಿರ್ಧಾರದಿಂದ ಎದುರಿಸುವ ತಮ್ಮ ನೈತಿಕ ಬಲವನ್ನು ಕಳಕೊಳ್ಳಹತ್ತಿ ದರು. ಕ್ರಮೇಣ ವಿಲಾಸಿಗಳಾಗುತ್ತ ನಡೆದಿದ್ದ ಹಿಂದುಗಳು ರಾಜಪುರು ಷರ ಕೋಪವನ್ನು ಎದುರಿಸಲಾರದವರಾಗಿ ಹೊಸ ಧರ್ಮಕ್ಕೆ ಅನಿಚ್ಛೆ ಯಿಂದಾದರೂ ಆಲಿಂಗನ ಕೊಡಹತ್ತಿದರು. ಮುಸಲ್ಮಾನರು ಸಾಮ- ದಾನ-ದಂಡ-ಭೇದ ಈ ಚತುರೋಪಾಯಗಳನ್ನು ಅವಲಂಬಿಸಿ, ಹಿಂದು ಗಳನ್ನು ಕುಲಗೆಡಿಸುವ ವಿಶ್ವಪ್ರಯತ್ನ ನಡಿಸಿದರು. ಒಂದು ಕೈಯಲ್ಲಿ ಕುರಾಣವನ್ನೂ, ಬೇರೊಂದು ಕೈಯಲ್ಲಿ ಖಡ್ಗವನ್ನೂ ಹಿಡಿದಿದ್ದ ಉದ್ದಾಮ ಮುಹಮ್ಮದೀಯರು ಇಸ್ಲಾಮೀ ಧರ್ಮಪ್ರಸಾರದ ಕಾರ್ಯವನ್ನು ಒತ್ತರ ದಿಂದ ಕಡೆಹಾಯಿಸುವದರಲ್ಲಿ ಮಗ್ನರಾಗಿದ್ದರು. ಇವರ ಉಪಾಯಚತು ಷ್ಟಯಗಳಿಗೆ ಬಹು ಜನ ಹಿಂದುಗಳು ಬಲಿಬಿದ್ದು ಧರ್ಮಾಂತರ ಮಾಡಿ ದರು. ನೈತಿಕ ಧೈರ್ಯವುಳ್ಳ ಹಲವರು ಮುಸಲ್ಮಾನರ ಖಡ್ಗಗಳಿಗೆ ಆಹುತಿಯಾದರು.

ಹೀಗೆ ಕೆಲವು ಶತಮಾನಗಳು ಕ್ರಮಿಸಿದುವು. ಮುಸಲ್ಮಾನರ ಕ್ರೂರಕೃತ್ಯಗಳಿಂದ ಹಿಂದೂ-ಮುಸಲ್ಮಾನರ ವೈರವು ಉತ್ತರೋತ್ತರ ಬಳೆ ಯುವುದರಲ್ಲಿತ್ತು. ಮೊಗಲ ಬಾದಶಹರಲ್ಲಿಯ ಅತಿ ಘನವಂತನಾದ ಅಕಬರ ನಿಗೆ ಈ ಸ್ಥಿತಿಯು ಸರಿದೋರಲಿಲ್ಲ. ಈ ವೈರವು ಒಂದಿಲ್ಲೊಂದು ದಿನ ಮೊಗಲ ರಾಜ್ಯದ ಅಳಿಗಾಲಕ್ಕೆ ಪ್ರಬಲ ಕಾರಣವಾಗುವುದೆಂಬದನ್ನು ಈ

ಧೂರ್ತ ಬಾದಶಹನು ಅರಿತಿದ್ದನು. ಆದುದರಿಂದ ಇವನು ಹಲವು ಉಪಾಯಗಳಿಂದ ಹಿಂದೂ-ಮುಸಲ್ಮಾನರ ಬಡಿದಾಟವನ್ನು ಶಾಂತಗೊಳಿಸಿ, ಈ ಎರಡು ಧರ್ಮಗಳಲ್ಲಿ ಐಕ್ಯವನ್ನುಂಟುಮಾಡಲು ಯತ್ನಿಸಿದನು. ಆದರೆ ಇವನ ಪ್ರಯತ್ನಕ್ಕೆ ಯಶಸ್ಸು ದೊರೆಯಲಿಲ್ಲ. ಇವನು ಸ್ಥಾಪಿಸಬೇಕೆಂದಿದ್ದ ಏಕೇಶ್ವರೀ ಪಂಥವನ್ನು ಧರ್ಮಾಂಧರಾದ ಮುಸಲ್ಮಾನರು ಮನ್ನಿಸಲಿಲ್ಲ. ಆದುದರಿಂದ ಅಕಬರನು ಸಾಯುತ್ತಲೆ ಐಕ್ಯದ ದಾರಿಯಾದ ಈ ಏಕೇಶ್ವರೀ ಪಂಥವೂ ನಿರ್ನಾಮವಾಗಿ ಹೋಯಿತು. ಅಕಬರನ ತರುವಾಯದ ಬಾದಶಹರು ಹಿಂದೂ-ಮುಸಲ್ಮಾನರ ಒಕ್ಕಟ್ಟಿಗೆ ತಕ್ಕಷ್ಟು ಲಕ್ಷಗೊಡಲಿಲ್ಲ. ಇವರಲ್ಲಿಯ ಔರಂಗಜೇಬನಂತೂ ಅನುದಾರಹೃದಯನಾಗಿ ಹಿಂದುಗಳನ್ನು ಬಹಳ ಕೆಟ್ಟರೀತಿಯಿಂದ ನಡಿಸಿಕೊಳ್ಳಹತ್ತಿದನು. ಇವನು ಧಾರ್ಮಿಕ ದುರಭಿಮಾನದಿಂದ ನಡಿಸಿದ ಕ್ರೂರ ಕೃತ್ಯಗಳಿಂದ ಹಿಂದುಗಳೆಲ್ಲರು ಬಹಳ ವ್ಯಥೆಗೊಂಡರು. ಮುಸಲ್ಮಾನರ ವಿಷಯದಲ್ಲಿಯ ಹಿಂದುಗಳ ದ್ವೇಷವು ಮತ್ತಷ್ಟು ಹೆಚ್ಚಿತು.

ಹದಿನೈದನೆಯ ಶತಮಾನದ ಮಧ್ಯಭಾಗದಲ್ಲಿದ್ದ ಕಬೀರನೆಂಬ ಸಾಧುವರ್ಯನು ಹಿಂದೂ-ಮುಸಲ್ಮಾನರ ಐಕ್ಯಕ್ಕೆ ಯತ್ನಿಸಿದನು. ಹಿಂದೂ ಮುಸಲ್ಮಾನರ ಮನಸ್ತಾಪವನ್ನೂ, ಇದರಿಂದುಂಟಾಗುತ್ತಿರುವ ಅನರ್ಥಗಳನ್ನೂ ನೋಡಿ, ಈ ಮಹನೀಯನಿಂದ ಸುಮ್ಮನಿರುವದಾಗಲಿಲ್ಲ. ಇವನು ರಾಮ-ರಹಿಮರಲ್ಲಿ ಭೇದವಿಲ್ಲೆಂದೂ, ರಾಮ-ರಹಿಮರ ಪೂಜೆಮಾಡುತ್ತಿರುವ ಹಿಂದೂ-ಮುಸಲ್ಮಾನರೆಲ್ಲರು ಸಮಾನರೆಂದೂ, ಸಹೋದರರಂತಿರಬೇಕೆಂದೂ ಜನರಿಗೆ ಬೋಧಿಸಿದನು. ಇವನ ಈ ಪ್ರಯತ್ನವು ಹಿಂದೂ-ಮುಸಲ್ಮಾನರ ಮಿಲನಕ್ಕೆ ಸಹಾಯ ಮಾಡಿತು. ಆದರೆ ಸಂಪೂರ್ಣ ಯಶಸ್ವೀಯಾಗಲಿಲ್ಲ.

ತರುವಾಯ ಹದಿನಾರನೆಯ ಶತಮಾನದ ಪ್ರಾರಂಭದಲ್ಲಿ ಬಾಬಾ ನಾನಕನು ಹಿಂದೂ-ಮುಸಲ್ಮಾನರ ಕಲಹವನ್ನು ನೋಡಿ ವ್ಯಥೆ ಹೊಂದಿ,

ಈ ಎರಡು ಧರ್ಮದವರಲ್ಲಿ ಐಕ್ಯವನ್ನುಂಟು ಮಾಡಲಿಕ್ಕೆ ಯತ್ನಿಸಿದನು. ಹಿಂದೂ-ಮುಸಲ್ಮಾನರನ್ನು ಒಂದೇ ಒಂದು ಧರ್ಮಸೂತ್ರದಿಂದ ಬಿಗಿದು, ಬಹುದಿನಗಳಿಂದ ನಡೆದುಬಂದ ದ್ವೇಷಾಗ್ನಿಯನ್ನು ನೊಂದಿಸಲಿಕ್ಕೆ ಮನಸ್ಸು ಮಾಡಿದನು. ಇವನು ತನ್ನ ಅಸಾಧಾರಣ ಜ್ಞಾನಬಲದಿಂದಲೂ, ಚರಿತ್ರ ಬಲದಿಂದಲೂ ಸಾಮಾನ್ಯ ಜನರ ಮನಸ್ಸಿನ ಮೇಲೆ ಒಳ್ಳೇ ಪರಿಣಾಮ ವನ್ನುಂಟುಮಾಡಿದನು. ಹಿಂದೂ-ಮುಸಲ್ಮಾನರಲ್ಲಿಯ ಹಲವರು ಭಕ್ತಿ ಭರದಿಂದ ಇವನು ಪ್ರಚಾರಪಡಿಸುತ್ತಿದ್ದ ಹೊಸ ಧರ್ಮವನ್ನು ಅಂಗೀಕರಿಸಿದರು. ಬರಬರುತ್ತ ನಾನಕನ ಶಿಷ್ಯರ ಸಂಖ್ಯೆಯು ಬೆಳೆಯುತ್ತ ನಡೆಯಿತು. ನಾನಕನ ಈ ಶಿಷ್ಯಸಮೂಹವು ಶೀಖ ಎಂಬ ಹೆಸರಿನಿಂದ ಕರೆಯಲ್ಪಡಹತ್ತಿತು. ನಾನಕನು ಹೊಸ ಧರ್ಮವನ್ನು ಸ್ವೀಕರಿಸಿದ ಇವರೆಲ್ಲರಿಗೆ ಗುರುವಾಗಿ, ಗುರುನಾನಕನೆಂದು ಹೆಸರಾದನು.

ಹಲವರು ಮುಸಲ್ಮಾನರು ಹೊಸದಾಗಿ ಸ್ಥಾಪಿತವಾದ ಈ ಶೀಖ ಧರ್ಮವನ್ನು ಸೇರಲಿಲ್ಲ. ಇವರು ಶೀಖಧರ್ಮವು ಹಿಂದೂಧರ್ಮದ ಒಂದು ಪಂಗಡವೆಂದು ಭಾವಿಸಿದರು ಹಿಂದುಗಳ ಮೇಲೆ ಅತ್ಯಾಚಾರ ಮಾಡು ವಂತೆ ಶೀಖರ ಮೇಲೂ ಬಲಾತ್ಕಾರ ನಡಿಸಹತ್ತಿದರು.

ಶೀಖಧರ್ಮವು ಹಿಂದೂಮುಸಲ್ಮಾನರ ಐಕ್ಯಕ್ಕೋಸುಗ ತಲೆಯೆತ್ತಿತಾದರೂ, ಇದರ ಈ ಉದ್ದೇಶವು ಸಫಲವಾಗಲಿಲ್ಲ. ನಾನಕನೂ ಇವನ ತರುವಾಯದಲ್ಲಿಯ ಕೆಲವರು ಗುರುಗಳೂ ಕೇವಲ ಧರ್ಮಪ್ರಾಣರಾಗಿದ್ದು ಹಿಂದೂ-ಮುಸಲ್ಮಾನರ ಒಕ್ಕಟ್ಟನ್ನೇ ತಮ್ಮ ಧರ್ಮದ ಧ್ಯೇಯವನ್ನಾಗಿ ಮಾಡಿಕೊಂಡಿದ್ದರು. ಆದರೆ ಮುಸಲ್ಮಾನರು ಇವರಿಗೆ ಸಹಾಯ ಮಾಡಲಿಲ್ಲವಿಷ್ಟೇ ಅಲ್ಲ; ಯುದ್ಧವಿದ್ಯೆಯ ವಿಷಯದಲ್ಲಿ ಉದಾಶೀನರಾಗಿದ್ದ ಶೀಖರ ದುರ್ಬಲತೆಯನ್ನರಿತು ತಮ್ಮ ಮೊದಲಿನ ಕ್ರೂರಕೃತಿಯನ್ನು ಮತ್ತಷ್ಟು ಒತ್ತರದಿಂದ ಸಾಗಿಸಿದರು. ಇದರಿಂದ ಶಾಂತಸ್ವಭಾವದ ಶೀಖರು ಅನಿರ್ವಾಹದಿಂದ ಶಸ್ತ್ರಾಸ್ತ್ರಗಳನ್ನು ಧರಿಸಿ, ಯುದ್ಧವಿದ್ಯೆಯನ್ನು

ಅಭ್ಯಾಸಿಸಬೇಕಾಯಿತು. ಧರ್ಮರಕ್ಷಣೆಗೋಸುಗ ಹಾಗು ಪ್ರಾಣರಕ್ಷಣೆಯ ಸಲುವಾಗಿ ಮುಸಲ್ಮಾನರನ್ನು ಎದುರಿಸಲಿಕ್ಕೆ ಸಿದ್ಧರಾಗಬೇಕಾಯಿತು. ಸದ್ಯಕ್ಕೆ ಶೀಖ ಧರ್ಮವು ಹಿಂದೂ-ಮುಸಲ್ಮಾನರ ಐಕ್ಯದ ಸ್ಥಳವಲ್ಲ; ಇದು ಹಿಂದೂಧರ್ಮದ ವಿಶಿಷ್ಟ ಸಾಂಪ್ರದಾಯವಾಗಿ ಪರಿಣಮಿಸಿದೆ.

ಶೀಖರ ಶಾರೀರಿಕ ರಚನೆಯು ಸುಂದರವಾದದ್ದು. ಇವರ ದೇಹವು ಎತ್ತರವಾದದ್ದು. ಬಲಿಷ್ಠವಾದದ್ದು. ತೇಜಸ್ಸಿನಿಂದ ಕೂಡಿದ್ದು. ಇವರ ಕೂದಲು ಉದ್ದ, ಎದೆಯು ಹರವಾದದ್ದು, ಕಣ್ಣುಗಳು ವಿಶೇಷ ಹೊಳಪುಳ್ಳವುಗಳು. ಇವರು ತಾವು ಸ್ವೀಕರಿಸಿದ ಕ್ಷಾತ್ರಧರ್ಮದ ಚಿಹ್ನ ಸ್ವರೂಪವಾಗಿ ಯಾವಾಗಲೂ ಒಂದು ಅಸ್ತ್ರವನ್ನು ಧರಿಸುತ್ತಾರೆ. ಇದಕ್ಕೆ ಕಿರಪಾಣವೆಂಬ ಹೆಸರು.

ಶೀಖರು ವಿನಯಯುತರೂ, ಶಕ್ತಿಸಂಪನ್ನರೂ, ಕಷ್ಟಸಹಿಷ್ಣುಗಳೂ ಆಗಿದ್ದಾರೆ. ಇವರು ವಿಪತ್ತುಗಳಿಗೆ ಹೆದರದೆ, ಎದೆಗೊಟ್ಟು ನಿಲ್ಲುವರು. ಮರಣಕ್ಕೆ ಹೆದರುವುದಿಲ್ಲ. ಇವರು ವಿಲಾಸಿಗಳಲ್ಲ. ವಿಲಾಸೋಪಭೋಗಗಳಲ್ಲಿ ಆಲಸ್ಯತನದಿಂದ ಕಾಲಕಳೆವುದು ಕಾಪುರುಷತೆಯ ಲಕ್ಷಣವೆಂದು ಇವರು ಭಾವಿಸುತ್ತಾರೆ. ಅನಾಹಾರ,-ಅನಿದ್ರೆಗಳಲ್ಲಿ ಅಭ್ಯಸ್ತರಾಗಿ ಪ್ರಸಂಗವಿಶೇಷದಲ್ಲಿ ವಿಶಿಷ್ಟವಾದ ನೈತಿಕಬಲವನ್ನು ತೋರಿಸುವುದಕ್ಕೆ ಇವರು ಹೆಸರಾದವರು.

ಶೀಖರು ಧರ್ಮಪ್ರಾಣರು. ಸ್ವಧರ್ಮವನ್ನು ಪಾಲಿಸುವದಕ್ಕೆ ಸದಾ ತತ್ಪರರು. ಧರ್ಮರಕ್ಷಣೆಗೋಸುಗ ಎಂತಹ ಸಂಕಟವನ್ನಾದರೂ ಸಂತೋಷದಿಂದ ಎದುರಿಸಬಲ್ಲರು. ಲೋಕಸೇವೆಯೂ, ದೇಶೋದ್ಧಾರವೂ ಇವರ ಧರ್ಮದ ಮುಖ್ಯ ಅಂಗಗಳು. ಇವರು ಪರನಾರಿಯರನ್ನು ಮಾತೆಯಂತೆ ಮನ್ನಿಸುವರು. ಸ್ತ್ರೀಯರ ಅವಮಾನವನ್ನು ಎಷ್ಟುಮಾತ್ರಕ್ಕೂ ಸಹಿಸರು. ಇವರು ಅತ್ಯಾಚಾರಿಗಳ ಕೈಯಲ್ಲಿ ಸಿಕ್ಕ ಪತಿ

ವ್ರತೆಯರ ಮರ್ಯಾದೆ ರಕ್ಷಣೆಗೆ ಬದ್ಧಕಂಕಣರು. ಇಂತಹ ವೇಳೆಯಲ್ಲಿ ಇವರು ಜೀವದ ಹಂಗುದೊರೆದು ಕಾದಾಡುವರು.

ಶೀಖಪುರುಷರಂತೆ ಶೀಖರಮಣಿಯರಾದರೂ ಸ್ವಧರ್ಮಪಾಲನೆಯಲ್ಲಿ ಆಸಕ್ತರು. ಶೀಖಸ್ತ್ರೀಯರ ವೀರತ್ವಪ್ರದರ್ಶನದ ಉದಾಹರಣೆಗಳಿಗೆ ಇತಿಹಾಸದಲ್ಲಿ ಅಭಾವವಿಲ್ಲ. ಇವರು ಮಹಾಪತಿವ್ರತೆಯರಾಗಿ, ಪತಿಯ ನಿಜವಾದ ಸಹಧರ್ಮಿಣಿಯರಾಗಿರುವರು. ಇವರು ಪತಿಪರಾಯಣೆಯರಾಗಿರುವಂತೆ ಗುರುಭಕ್ತೆಯರೂ ಆಗಿದ್ದಾರೆ. ಇವರು ಧರ್ಮರಕ್ಷಣೆಗಾಗಿ ತಮ್ಮನ್ನೂ ತಮ್ಮ ಮಕ್ಕಳನ್ನೂ ಬಲಿಗೊಡಲಿಕ್ಕೆ ಹಿಂಜರಿಯುವವರಲ್ಲ. ಮೊಗಲರು ಹಲವು ಸಾರೆ ಶೀಖರಮಣಿಯರನ್ನು ಬಂದಿನಿಗಳನ್ನಾಗಿ ಮಾಡಿಕೊಂಡೊಯ್ದು, ಧರ್ಮಚ್ಯುತಿಗಾಗಿ ಯತ್ನಿಸಿದ್ದಾರೆ. ವಿಲಾಸದ ಹಲವು ವಿಧಗಳಾದ ಆಶೆಗಳನ್ನು ತೋರಿದ್ದಾರೆ. ಮಕ್ಕಳು-ಮರಿಗಳನ್ನು ಕೊಲ್ಲುವ ಹೆದರಿಕೆ ಹಾಕಿದ್ದಾರೆ. ಕಡೆಯಲ್ಲಿ ಅವರನ್ನೇ ಸಾಯಹೊಡೆಯುವ ಭಯವನ್ನೂ ತೋರ್ಪಡಿಸಿದ್ದಾರೆ. ಆದರೂ ಆ ವೀರರಮಣಿಯರು ಮೊಗಲರ ಮಾತಿಗೆ ಒಡಂಬಡದೆ, ತಮ್ಮ ಧರ್ಮವನ್ನು ಕಾಯ್ದುಕೊಂಡು, ಶೀಖಧರ್ಮವು ಗೌರವಾನ್ವಿತವಾಗಿರುವುದಕ್ಕೆ ಕಾರಣೀಭೂತೆಯರಾಗಿದ್ದಾರೆ.

ಸತ್ಯಪ್ರಿಯತೆಯು ಶೀಖರ ಚರಿತ್ರೆಯ ಮುಖ್ಯ ಅಂಗವು. ಇವರು ಸುಳ್ಳಾಡುವದನ್ನು ಎಂದೂ ಪ್ರೀತಿಸುವುದಿಲ್ಲ. ಸತ್ಯಪಾಲನೆಗಾಗಿ ಶೀಖರು ಸ್ವದೇಹವನ್ನು ಬಲಿಗೊಳ್ಳಲು ಹಿಂದೆಗೆಯರು. ಇವರ ಚರಿತ್ರೆಯಲ್ಲಿ ನೀಚತೆಯು ತಿಲಪ್ರಾಯವೂ ದೊರೆಯದು. ಕಪಟಾಚರಣೆಯು ಅತೀವ ಹೇಯವಾದುದೆಂದು ಇವರ ದೃಢಭಾವನೆ. ಆದುದರಿಂದ ಇವರು ಪರರನ್ನು ವಂಚಿಸುವ ಕುಕಾರ್ಯವನ್ನೆಂದೂ ಮಾಡುವುದಿಲ್ಲ.

ಅತಿಥಿಸೇವೆಯು ಶೀಖರ ಪ್ರೀತಿಯ ಕೆಲಸವು. ಇವರು ಪ್ರಯಾಣಿಕರಿಗೆ ಅನ್ನ-ಪಾನಾದಿಗಳನ್ನು ಒದಗಿಸಿಕೊಡಲಿಕ್ಕೆ ಪಂಜಾಬದಲ್ಲೆಲ್ಲ

ಧರ್ಮಶಾಲೆಗಳನ್ನು ಕಟ್ಟಿಸಿದ್ದಾರೆ. ಇವರು ಅತಿಥಿಗಳನ್ನು ದೇವರಂತೆ ಪೂಜಿಸುತ್ತಾರೆ; ಅತಿಥಿಗಳ ಮನಸ್ತುಷ್ಟಿಗಾಗಿ ತಮ್ಮ ಸರ್ವಸ್ವವನ್ನು ಸೂರೆಗೊಳ್ಳುತ್ತಾರೆ. ಅತಿಥಿಯು ದೋಷಿಯಾಗಿದ್ದರೂ, ಕ್ಷಮಾರ್ಹ ನೆಂದು ಇವರು ಅನ್ನುತ್ತಾರೆ.

ಶೀಖರು ಯುದ್ಧಕಲಾ ಕುಶಲರು. ಯುದ್ಧದ ಪ್ರಸಂಗದಲ್ಲಿ ಮರಾಟಿಗರಂತೆ ಹೊತ್ತು ಬಂದತ್ತ ಕೊಡೆಹಿಡಿದು ಜಯಸಂಪಾದಿಸತಕ್ಕ ವರು. ಶತ್ರುಗಳ ಸೈನ್ಯವು ಅಪರಿಮಿತವಿದ್ದು, ತಮ್ಮ ಶಕ್ತಿಯು ಮರ್ಯಾದಿತವಿದ್ದಾಗ ಇವರು ವೈರಿಗಳನ್ನು ಎದುರಿಸಿ ನಿಂತು ಯುದ್ಧಮಾಡಬಯಸುತ್ತಿದ್ದಿಲ್ಲ; ಗುಡ್ಡಗಾಡು ಪ್ರದೇಶದಲ್ಲಿ ವಾಸಿಸಿ, ಅವ್ಯವಸ್ಥಿತರೀತಿಯಿಂದ ಯುದ್ಧಮಾಡಿ ಶತ್ರುಗಳನ್ನು ಹಣ್ಣಿಗೆ ತರುತ್ತಿದ್ದರು. ವೈರಿಗಳ ಶಕ್ತಿಯೂ ತಮ್ಮ ಸಾಮರ್ಥ್ಯವೂ ಸಮಾನವಿದ್ದಾಗ ಎದುರಿಗೆ ನಿಂತು ಯುದ್ಧಮಾಡಿ ಜಯಶಾಲಿಗಳಾಗುತ್ತಿದ್ದರು. ಹದಿನೆಂಟನೆಯ ಶತಮಾನದ ಪ್ರಾರಂಭ ದಲ್ಲಿ ಮೊಗಲರು ಅತ್ಯಾಚಾರವನ್ನಾರಂಭಿಸಲು, ಶೀಖರು ಅವರನ್ನು ಎದುರಿಸಲಾರದವರಾಗಿ, ಓಡಿಹೋಗಿ ಅರಣ್ಯವನ್ನಾಶ್ರಯಿಸಿದರು; ಮತ್ತೆ ಸಿದ್ಧತೆಯನ್ನು ಮಾಡಿಕೊಂಡು ಬಂದು ಮೊಗಲರೊಡನೆ ಹೋರಾಡಿ ಕಡೆಗೆ ಜಯಶಾಲಿಗಳಾದರು. ಇವರ ಯುದ್ಧಪ್ರಿಯತೆಯೂ, ಕುಶಲ ತೆಯೂ ಇಂದಿಗೂ ಸ್ಥಿರವಾಗಿ ಉಳಿದಿವೆ. ಬ್ರಿಟಿಶರ ಸೈನ್ಯದಲ್ಲಿ ಶೀಖರು ಪ್ರಬಲಯೋದ್ಧೃಗಳಾಗಿದ್ದು, ಬ್ರಿಟಿಶರ ದಕ್ಷಿಣಹಸ್ತಸ್ವರೂಪರಾಗಿದ್ದಾರೆ.

ಶೀಖರ ಇತಿಹಾಸವು ಮೊದಲಿನಿಂದ ಕೊನೆಯವರೆಗೆ ಆತ್ಮಯಜ್ಞ ದಿಂದ ಪೂರ್ಣವಾದದ್ದು. ಇವರಂತೆ ಆತ್ಮತ್ಯಾಗಮಾಡಿದವರು ರಜಪೂತರ ಹೊರತು ಬೇರೆ ಜನರಿಲ್ಲ. ಇವರು ಗುರುವಿನ ಅಪ್ಪಣೆಯನ್ನು ಅಲ್ಲಗಳೆದವರಲ್ಲ. ಇವರ ದೃಷ್ಟಿಯಿಂದ ಗುರುದ್ರೋಹವು ಅತ್ಯಂತ ಪಾಪ ಕೃತ್ಯವು. ಇವರು ಧರ್ಮಕ್ಕೋಸುಗ, ಗುರುವಿಗೋಸ್ಕರ, ದೇಶಹಿತ ಕ್ಕೋಸುಗ ಹಲವು ಸಾರೆ ಸ್ವಾರ್ಥತ್ಯಾಗ ಮಾಡಿದ್ದಾರೆ. ಈ ಆತ್ಮ

ಯಜ್ಞದ ಉಜ್ವಲವಾದ ಕತೆಯಿಂದ ಶೀಖರ ಇತಿಹಾಸದ ಪ್ರತಿಯೊಂದು ಪುಟವು ಪೂರ್ಣವಾದದ್ದು. ಇವರು ತಮ್ಮ ಈ ಸ್ವಾರ್ಥತ್ಯಾಗದ ಬಲದಿಂದಲೇ ಅಲ್ಪಾವಕಾಶದಲ್ಲಿ ಸಮಾಜವನ್ನು ವೃದ್ಧಿಗೊಳಿಸಿ ಗೌರವಾನ್ವಿತವಾಗಿರುವಂತೆ ಮಾಡಿಕೊಂಡಿದ್ದಾರೆ. ಜಗತ್ತಿನ ಇತಿಹಾಸದಲ್ಲಿ ಶೀಖರಂತೆ ಆತ್ಮಯಜ್ಞಮಾಡಬಲ್ಲ ಜನಾಂಗವು ದೊರೆವುದು ವಿರಳ.

## ಅಧ್ಯಾಯ ೩—ಪೂರ್ವೇತಿಹಾಸ.

ಶೀಖಧರ್ಮಪ್ರವರ್ತಕನಾದ ಬಾಬಾನಾನಕನು ಸನ್ ೧೪೬೯ ರಲ್ಲಿ ಆಗಿಯ ಹುಣ್ಣಿವೆಯ ದಿವಸ ಲಾಹೋರದ ಹತ್ತಿರವಿರುವ ತಾಲಬಂಡಿ ಗ್ರಾಮದಲ್ಲಿ ಹುಟ್ಟಿದನು. ಇವನು ಕ್ಷತ್ರಿಯನು. ಸೂರ್ಯಕುಲದ ಗೌರವಸ್ವರೂಪನು. ಬಾಲ್ಯಕಾಲದಲ್ಲಿಯೆ ಇವನ ಕೋಮಲ ಹೃದಯದಲ್ಲಿ ಧರ್ಮಪ್ರಸಾರದ ಬೀಜವು ಮೊಳೆಕೆಯೊಡೆದಿತ್ತು. ಅದು ವಯೋಮಾನದಂತೆ ಅಂಕುರಿತವಾಗಿ ವಿಕಸಿತವಾಯಿತು. ಅಧೋಗತಿಯನ್ನು ಹೊಂದಿ ಆತ್ಮಕಲಹದಲ್ಲಿ ಮೆಯ್ಮರೆದಿದ್ದ ದೇಶವಾಸಿಗಳ ಜೀವನ ಗತಿಯನ್ನು ಬೇರೆ ಮಾರ್ಗವಾಗಿ ತಿರುಗಿಸಲಿಕ್ಕೆ ಇವನ ಮನಸ್ಸು ಹಾತೊರೆಯಹತ್ತಿತು. ಇವನು ಈ ಸದಿಚ್ಛೆಯನ್ನು ಪೂರ್ಣಗೊಳಿಸುವುದಕ್ಕೋಸ್ಕರ ತನ್ನ ಮೂವತ್ತಾರನೆಯ ವರ್ಷದ ವಯಸ್ಸಿನಲ್ಲಿ ಪತಿವ್ರತೆಯಾದ ಹೆಂಡತಿಯನ್ನೂ ಇಬ್ಬರು ಮಕ್ಕಳನ್ನೂ ಬಿಟ್ಟು, ಸಂಸಾರದ ಮೋಹವನ್ನು ತೊರೆದು, ದೇಶಸಂಚಾರಕ್ಕೆ ಹೊರಟನು. ಹಿಂದುಸ್ಥಾನದ ಬಹುಭಾಗಗಳಲ್ಲಿ ಅಡ್ಡಾಡಿದನು. ಜನರಿಗೆ ಉಪದೇಶಮಾಡಹತ್ತಿದನು. ಇವನ ಜ್ಞಾನಕ್ಕೂ, ವಾಕ್ಪಟುತ್ವಕ್ಕೂ, ಸಚ್ಚರಿತ್ರಿಗೂ ಮನಸೋತ ಹಲವರು ಇವನ ಶಿಷ್ಯರಾದರು. ಇವನು ಸದಾ ಅನ್ನುತ್ತಿದ್ದುದೇನಂದರೆ, "ಹಿಂದೂ-ಮುಸ

ಲ್ಮಾನರೆಂಬ ಭೇದಗಳು ಅರ್ಥಹೀನವಾದವುಗಳು. ಈ ಎರಡು ಧರ್ಮಗಳಲ್ಲಿ ದ್ವಂದ್ವವನ್ನು ಕಲ್ಪಿಸುವುದು ಬುದ್ಧಿವಂತಿಕೆಯ ಕೆಲಸವಲ್ಲ. ಜಗತ್ತಿನಲ್ಲಿ ಎಲ್ಲರೂ ಸಮಾನರು; ಅನಂತಮಹಿಮನಾದ ಪರಮೇಶ್ವರನಿಂದ ಸೃಷ್ಟಿಸಲ್ಪಟ್ಟವರು. ಮನುಷ್ಯಮಾತ್ರರು ತಮ್ಮಲ್ಲಿಯ ಭಕ್ತಿಯ ಬಲದಿಂದ ಆ ಪರಮೇಶ್ವರನನ್ನು ಹೊಂದಬಲ್ಲರು. ಯಾವನು ಆ ಪರಮಾತ್ಮನ ಪೂಜೆಯನ್ನು ಮಾಡುವುದಿಲ್ಲವೊ ಅವನು ನರಾಧಮನು! ಅವನ ಬಾಳುವೆಯು ವ್ಯರ್ಥವಾದದ್ದು! ಅವನು ನರಕದ ಕೀಟಕ ಸ್ವರೂಪನು!''

ನಾನಕನ ಜೀವಿತಕಾಲದಲ್ಲಿಯೆ ಶೀಖರ ಸಂಖ್ಯೆಯು ಬಹಳವಾಗಿ ಬೆಳೆದಿತ್ತು. ಇವರ ಧರ್ಮಭಾವನೆಯನ್ನು ಸದಾ ಜಾಗ್ರತವಾಗಿರಿಸಲಿಕ್ಕೂ, ಅನುಯಾಯಿಗಳ ಸಂಖ್ಯೆಯನ್ನು ಮತ್ತಷ್ಟು ಹೆಚ್ಚಿಸಲಿಕ್ಕೂ ನಾನಕನು ಗುರುಪೀಠವನ್ನು ಸ್ಥಾಪಿಸಿದನು; ಹಾಗು ತಾನು ಶೀಖರ ಮೊದಲನೆಯ ಗುರುವಾದನು. ಈ ಗುರುಪೀಠದ ಅಧಿಕಾರವು ವಂಶಪರಂಪರೆಯನ್ನು ಅವಲಂಬಿಸಿರಕೂಡದೆಂಬದು ನಾನಕನ ಮತವಾಗಿತ್ತು. ಶೀಖರ ಧರ್ಮಸಿಂಹಾಸನವನ್ನೇರುವುದಕ್ಕೆ ವಂಶಪರಂಪರೆಗಿಂತ ಯೋಗ್ಯತೆಯು ಮಹತ್ವದ್ದೆಂದು ನಾನಕನು ಭಾವಿಸಿದ್ದನು. ಕಾರಣ ಇವನು ತನ್ನ ಅಂತ್ಯಕಾಲದಲ್ಲಿ ಮಗನನ್ನು ಈ ಪೀಠದ ಅಧಿಕಾರಿಯನ್ನಾಗಿಮಾಡದೆ, ಶಿಷ್ಯನಾಗಿದ್ದ ಲಹನಾ ಎಂಬವನನ್ನು ಈ ಗದ್ದುಗೆಯ ಮೇಲೆ ಕುಳ್ಳಿರಿಸಿದನು. ಲಹನಾನಾದರೂ ಗುರುವು ಒಪ್ಪಿಸಿಹೋಗಿದ್ದ ಕೆಲಸವನ್ನು ಸರಿಯಾಗಿ ಸಾಗಿಸಿದನು. ಇವನು ಕೆಲವು ವರುಷಗಳವರೆಗೆ ಶೀಖಧರ್ಮದ ಗುರುವಾಗಿದ್ದು, ತನ್ನ ಶಿಷ್ಯನಾದ ಅಮರದಾಸನನ್ನು ಗುರುಸ್ಥಾನದಲ್ಲಿರಿಸಿ ದೇಹವಿಟ್ಟನು. ಅಮರದಾಸನು ಪರಂಪರಾಗತ ಧರ್ಮಭಾವನೆಯನ್ನು ಜಾಗ್ರತವಾಗಿಟ್ಟದ್ದಲ್ಲದೆ, ಧರ್ಮಪ್ರಸಾರಕ್ಕೋಸುಗ ಶಿಷ್ಯಸಮೂಹವನ್ನು ಕಳುಹಿಕೊಟ್ಟನು. ಈ ಧರ್ಮಪ್ರಚಾರಕರ ಪ್ರಯತ್ನಗಳಿಂದ ಶೀಖರ ಸಂಖ್ಯೆಯು ಬರಬರುತ್ತ ಬೆಳೆಯಹತ್ತಿತು.

ನಾಲ್ಕನೆಯ ಗುರುವಾದ ರಾಮದಾಸನು ಹೆಚ್ಚು ಕರ್ತೃತ್ವಶಾಲಿಯಾಗಿದ್ದನು. ಇವನು ತನ್ನ ಯಾವತ್ತು ಆಯುಷ್ಯವನ್ನು ಶೀಖಧರ್ಮದ ಅಭಿವೃದ್ಧಿಗಾಗಿಯೆ ಕಳೆದನು. ಇವನ ತೇಜಸ್ಸಿಗೂ, ಸಚ್ಚರಿತ್ರೆಗೂ ಮನಸೋತ ಅಕಬರಬಾದಶಹನು ಇವನೊಡನೆ ಸ್ನೇಹಬಳೆಸಿದನು. ಹಾಗು ಈಗಿನ ಅಮೃತಸರ ಪಟ್ಟಣದ ಸುತ್ತಲಿನ ಕೆಲವು ಭೂಮಿಯನ್ನು ಇವನಿಗೆ ಜಾಗೀರ ಹಾಕಿಕೊಟ್ಟನು. ರಾಮದಾಸನು ಈ ಉಂಬಳಿಯ ಭೂಮಿಯಲ್ಲಿ ಅಮೃತಸರ ಪಟ್ಟಣವನ್ನು ಕಟ್ಟಿಸಲಾರಂಭಿಸಿದನು. ಆದರೆ ಈ ಕಾರ್ಯವು ಮುಗಿಯುವಷ್ಟರಲ್ಲಿಯೆ ಅಮರದಾಸನು ದೇಹವಿಟ್ಟನು.

ತರುವಾಯ ಅಮರದಾಸನ ಮಗನಾದ ಅರ್ಜುನಮಲ್ಲನು ಶೀಖರ ಗುರುವಾದನು. ಇವನು ತಂದೆಯು ಆರಂಭಿಸಿದ್ದ ಕಾರ್ಯವನ್ನು ಕೊನೆಗಾಣಿಸಿದನು. ಹೊಸದಾಗಿ ನಿರ್ಮಿತವಾದ ಅಮೃತಸರ ಪಟ್ಟಣವನ್ನು ಶೀಖರಿಂದ ತುಂಬಿದನು. ಅತ್ತಿತ್ತ ಹರವಿದ್ದ ಶೀಖರನ್ನು ಒಂದು ನಿಯಮದಿಂದ ಆಬದ್ಧಗೊಳಿಸುವುದಕ್ಕಾಗಿ ಕೆಲವು ಧಾರ್ಮಿಕ ವಿಧಿಗಳನ್ನು ರಚಿಸಿದನು; ಹಾಗು ಈ ನಿಯಮಗಳನ್ನು ಶಿಷ್ಯರಲ್ಲಿ ಪ್ರಚಾರಗೊಳಿಸಿದನು. ಪ್ರತಿಯೊಬ್ಬ ಶೀಖನ ಕಡೆಯಿಂದ ಗುರುದಕ್ಷಿಣೆಯ ರೂಪದಿಂದ ಕೆಲವು ಹಣವನ್ನೆತ್ತಿ, ಈ ಧನವನ್ನು ತೀರ್ಥ-ಯಾತ್ರಿಕರ ಸಹಾಯಕ್ಕಾಗಿಯೂ, ಅತಿಥಿಗಳ ಸೇವೆಗಾಗಿಯೂ ವೆಚ್ಚಮಾಡಹತ್ತಿದನು.

ಶೀಖರು ಧರ್ಮಪ್ರಾಣರಾಗಿ ಕ್ಷಾತ್ರವೃತ್ತಿಯಿಂದ ವಂಚಿತರಾಗುತ್ತ ನಡೆದಿರುವುದು ಅರ್ಜುನಮಲ್ಲನಿಗೆ ಸೇರಲಿಲ್ಲ. ಯಾಕೆಂದರೆ, ಇವನು ಧರ್ಮರಕ್ಷಣೆಗೆ ಬಾಹುಬಲದ ಸಹಾಯವು ಬೇಕೇ ಬೇಕೆಂಬದನ್ನು ಊಹಿಸಿದವನಾಗಿದ್ದನು. ಕಾರಣ, ಇವನು ತನ್ನ ಅನುಯಾಯಿಗಳು ಧರ್ಮದ ಆವರಣದಲ್ಲಿ ಕ್ರಮಶಃ ಹೇಡಿಗಳಾಗುತ್ತ ನಡೆದಿರುವುದನ್ನು ನೋಡಿ ವ್ಯಥೆಗೊಂಡನು. ಶೀಖರು ಧರ್ಮಸಂಪನ್ನರಾಗಿರುವಂತೆ ಶಕ್ತಿಯುತರೂ ಆಗಿರಬೇಕೆಂದು ಆಶಿಸಿದನು. ಇದಕ್ಕಾಗಿ ಇವನು ತನ್ನ ಅನುಯಾಯಿ

ಗಳಿಗೆ ಶಕ್ತಿಸಂಚಯ ಮಾಡಿಕೊಳ್ಳಲಿಕ್ಕೆ ಉಪದೇಶಿಸಹತ್ತಿದನು.

ಅರ್ಜುನಮಲ್ಲನಿಗೆ ಮೊಗಲರ ವಿಶ್ವಾಸವಿರಲಿಲ್ಲ. ಧರ್ಮಾಂಧರಾದ ಮುಹಮ್ಮದೀಯರು ಅನುಕೂಲ ಸಮಯ ಸಾಧಿಸಿ ಶೀಖರನ್ನು ಪೀಡಿಸದೆ ಬಿಡರೆಂಬದನ್ನು ಈ ದೂರದರ್ಶಿಯು ತರ್ಕಿಸಿದವನಾಗಿದ್ದನು. ಪ್ರಸಂಗ ವಿಶೇಷದಲ್ಲಿ ತನ್ನ ಅನುಯಾಯಿಗಳು ಹೇಡಿಗಳಾಗಿ ಹಿಂಜರಿಯದೆ, ಮುಸಲ್ಮಾನರನ್ನು ಧೈರ್ಯದಿಂದ ಎದುರಿಸುವಷ್ಟು ಸಬಲರಾಗಿರಬೇಕೆಂಬದು ಅರ್ಜುನಮಲ್ಲನ ಇಷ್ಟೆಯಾಗಿತ್ತು. ಹೀಗಾಗಬೇಕಾದರೆ, ಶೀಖರು ಧರ್ಮವೀರರಾಗಿರುವಂತೆ ಯುದ್ಧವೀರರೂ ಆಗಿರಬೇಕಾದದ್ದು ಅವಶ್ಯವಾಗಿತ್ತು. ಅರ್ಜುನಮಲ್ಲನು ಈ ಉದ್ದೇಶದಿಂದ ಶೀಖರ ಸೈನ್ಯನಿರ್ಮಾಣಕ್ಕೆ ಪ್ರಯತ್ನಿಸತೊಡಗಿದನು.

ಶೀಖರ ಧರ್ಮಪೀಠದ ಉತ್ತರಾಧಿಕಾರದ ವಿಷಯದಲ್ಲಿ ಅರ್ಜುನಮಲ್ಲನ ಮತವು ನಾನಕನ ಅಭಿಪ್ರಾಯಕ್ಕೆ ವಿರುದ್ಧವಾಗಿತ್ತು; ಅಂದರೆ ಅರ್ಜುನಮಲ್ಲನು ಶೀಖರ ಧರ್ಮಸಿಂಹಾಸನದ ಅಧಿಕಾರವು ವಂಶಪರಂಪರೆಯನ್ನವಲಂಬಿಸಿರಬೇಕೆಂಬ ಮತದವನಾಗಿದ್ದನು. ಇವನ ಆಶಯದಂತೆ ಕಾರ್ಯವಾಗುವುದಕ್ಕೆ ಶೀಖಧರ್ಮಗುರುವು ಸೈನ್ಯಬಲಯುತನಾಗಿರುವುದು ಅವಶ್ಯವಿತ್ತು. ಈ ದೃಷ್ಟಿಯಿಂದ ಅರ್ಜುನಮಲ್ಲನ ಕಾಲದಲ್ಲಿ ಕೇವಲ ಧಾರ್ಮಿಕ ಸಂಸ್ಥೆಯಾಗಿದ್ದ ಶೀಖಧರ್ಮಪೀಠವು ರಾಜಕೀಯ ವಿಷಯವನ್ನೂ ತನ್ನಲ್ಲಿ ಸೇರಿಸಿಕೊಳ್ಳಹತ್ತಿತು.

ಅರ್ಜುನಮಲ್ಲನು ತನ್ನ ಅಂತ್ಯಕಾಲದಲ್ಲಿ ವಿಪತ್ತಿಗೆ ಗುರಿಯಾಗಬೇಕಾಯಿತು. ಮೊಗಲಬಾದಶಹನಾದ ಅಕಬರನು ಮಡಿಯುತ್ತಲೆ ಇವನ ಮಗನು ಜಹಾಂಗೀರ (ಜಗತ್ತನ್ನು ಗೆಲ್ಲುವವ) ಎಂಬ ಹೆಸರಿನಿಂದ ದಿಲ್ಲಿಯ ಸಿಂಹಾಸನವೇರಿದನು. ಇವನ ಹಿರಿಯ ಮಗನಾದ ಖುಸರುವು ಬಂಡುಗಾರನಾಗಿ ಪಂಜಾಬದ ಕೆಲವು ಭಾಗವನ್ನು ಆಕ್ರಮಿಸಿದನು. ಅರ್ಜುನಮಲ್ಲನು ಇವನಿಗೆ ಸಹಾಯಮಾಡಿದ್ದಲ್ಲದೆ, ಖುಸರುವು ದಿಲ್ಲಿಯ ಬಾದಶಹ

ನೆಂದೊಪ್ಪಿ ಕರವನ್ನರ್ಪಿಸಿದನು. ಆದರೆ ದುರ್ಭಾಗ್ಯನಾದ ಖುಸರುವು ಮುಂದೆ ತಂದೆಯ ಕೋಪಕ್ಕೊಳಗಾಗಿ ಭಯಂಕರ ಶಿಕ್ಷೆಯನ್ನು ಹೊಂದಿದನು. ಜಹಾಂಗೀರನು ಕೇವಲ ಮಗನನ್ನು ಶಿಕ್ಷಿಸಿ ಸಮಾಧಾನ ಹೊಂದಲಿಲ್ಲ. ಮಗನ ಅನುಚರರನ್ನೂ, ಸಹಾಯಕರನ್ನೂ ಬಲವಾಗಿ ದಂಡಿಸಿದನು. ಅರ್ಜುನಮಲ್ಲನು ಬಾದಶಹನ ಕೋಪದೃಷ್ಟಿಯಿಂದ ಪಾರಾಗಲಿಲ್ಲ. ಬಾದಶಹನು ಅರ್ಜುನಮಲ್ಲನಿಗೆ ಅರ್ಥದಂಡವನ್ನೂ, ಕಾರಾದಂಡನೆಯನ್ನೂ ವಿಧಿಸಿದನು. ಅರ್ಜುನಮಲ್ಲನು ಲಾಹೋರದ ಕೋಟೆಯಲ್ಲಿ ಕಾರಾಗೃಹದಲ್ಲಿ ಕಾಲಕಳೆಯಬೇಕಾಯಿತು. ಮೊಗಲರು ಕಾರಾವಾಸದಲ್ಲಿ ಅರ್ಜುನಮಲ್ಲನನ್ನು ಬಹಳವಾಗಿ ಪೀಡಿಸಿದರು. ಅರ್ಜುನಮಲ್ಲನು ಸೆರೆಮನೆಯ ತಾಪವನ್ನು ಸಹಿಸಲಾರದವನಾಗಿ ಕಾರಾಗೃಹದಲ್ಲಿಯೆ ಮಡಿದನು.

ಬಳಿಕ ಅರ್ಜುನಮಲ್ಲನ ಮಗನಾದ ಹರಿಗೋವಿಂದನು ಆರನೆಯ ಗುರುವಾದನು. ಶಿಖಸಮಾಜದ ಉನ್ನತಿಗೆ ತೊಡಗಿದನು. ಗೋವಿಂದಪುರದಲ್ಲಿ ಬಲವಾದ ಕೋಟೆಯನ್ನು ಕಟ್ಟಿಸಿ, ದಂಡಾಳುಗಳನ್ನು ಸಂಗ್ರಹಿಸಿ, ಅವರಿಗೆ ಯುದ್ಧವಿದ್ಯೆಯ ಶಿಕ್ಷಣವನ್ನು ಕೊಡಿಸಹತ್ತಿದನು. ಮೊಗಲಸೈನ್ಯದ ಇಂಗಿತವನ್ನು ಅರಿಯುವದಕ್ಕಾಗಿ ಇವನು ಬಾದಶಾಹೀ ಸೈನ್ಯದಲ್ಲಿಯ ನವಕರಿಯನ್ನು ಸ್ವೀಕರಿಸಿದನು.

ಮುಂದೆ ತುಸು ದಿವಸಗಳಲ್ಲಿ ಬಾದಶಹನು ಕಾಶ್ಮೀರಕ್ಕೆ ಹೊರಟನು. ಹರಿಗೋವಿಂದನು ಬಾದಶಹನನ್ನು ಹಿಂಬಾಲಿಸಿ ಕಾಶ್ಮೀರಕ್ಕೆ ನಡೆದನು. ಆದರೆ ಬಾದಶಹನು ಕಾಶ್ಮೀರದಲ್ಲಿರುವಾಗ ಒಂದು ಸಾಮಾನ್ಯಕಾರಣದಿಂದ ಹರಿಗೋವಿಂದನ ಮೇಲೆ ಸಿಟ್ಟಾದನು. ಬಾದಶಹನು ಹಿಂದೆ ಅರ್ಜುನಮಲ್ಲನಿಗೆ ವಿಧಿಸಿದ ಅರ್ಥದಂಡವು ಇದುವರೆಗೆ ಬಾದಶಹನಿಗೆ ಸಲ್ಲಿದ್ದಿಲ್ಲ. ಬಾದಶಹನು ಈ ವೇಳೆಯಲ್ಲಿ ಹರಿಗೋವಿಂದನಿಗೆ ಕೂಡಲೆ ಆ ಹಣವನ್ನು ತಂದುಕೊಡುವಂತೆ ಆಜ್ಞಾಪಿಸಿದನು. ಆದರೆ ಹರಿ-

ಗೋವಿಂದನ ಬಳಿಯಲ್ಲಿ ಹಣವಿರಲಿಲ್ಲ. ಕಾರಣ ಇವನು ಬಾದಶಹನ ಅಪ್ಪಣೆಯಂತೆ ಹಣವನ್ನು ಸಲ್ಲಿಸಲಿಕ್ಕೆ ಸಮರ್ಥನಾಗಲಿಲ್ಲ. ಬಾದಶಹನು ಮತ್ತಷ್ಟು ಕೋಪಗೊಂಡು ಹರಿಗೋವಿಂದನನ್ನು ಗ್ವಾಲ್ಹೇರದ ಕೋಟೆಯಲ್ಲಿ ಕಾರಾಗೃಹದಲ್ಲಿರಿಸಲಿಕ್ಕೆ ಸೇವಕರಿಗೆ ಆಜ್ಞಾಪಿಸಿದನು. ಸೇವಕರು ಬಾದಶಹನ ಅನುಜ್ಞೆಯಂತೆ ಹರಿಗೋವಿಂದನನ್ನು ಸೆರೆಮನೆಯಲ್ಲಿರಿಸಿ ಪರಿಪರಿಯಿಂದ ಪೀಡಿಸಹತ್ತಿದರು. ಆದರೂ ಹರಿಗೋವಿಂದನು ಈ ಕಾಟಗಳನ್ನೆಲ್ಲ ಸಹಿಸಿಕೊಂಡು, ಹಂಚಿಕೆಯಿಂದ ಸೆರೆಮನೆಯಿಂದ ಪಾರಾಗಿ ಹೊರಬಿದ್ದನು.

ಜಹಾಂಗೀರನ ತರುವಾಯ ಶಹಾಜಹಾನನು ದಿಲ್ಲಿಯ ಬಾದಶಹನಾಗನು. ಇವನ ಹಿರಿಯ ಮಗನಾದ ದಾರಾನು ಪಂಜಾಬದ ಸುಭೇದಾರನಾದನು. ಇವನು ಸಮಬುದ್ಧಿಯುಳ್ಳವನೂ, ಉದಾರನೂ, ಪಂಡಿತನೂ, ಆಗಿದ್ದನು; ಹಾಗು ಹಿಂದೂ-ಮುಸಲ್ಮಾನರಲ್ಲಿ ಐಕ್ಯವಿರಬೇಕೆಂದು ಮನಃಪೂರ್ವಕ ಬಯಿಸುವವನಾಗಿದ್ದನು. ಕಾರಣ ಹರಿಗೋವಿಂದನಿಗೂ ದಾರಾನಿಗೂ ಸ್ನೇಹವುಂಟಾಯಿತು. ಆದರೆ ಈ ಸ್ನೇಹವು ಬಹುಕಾಲವಿರಲಿಲ್ಲ. ಮೊಗಲರ ಕ್ರೂರಾಚರಣೆಯಿಂದ ಶೀಖರು ಮನನೊಂದವರಾಗಿ, ಬಂಡಾಯ ಹೂಡಿದರು. ಮೊಗಲರಿಗೂ ಶೀಖರಿಗೂ ಕೆಲವು ಸಣ್ಣ ಸಣ್ಣ ಕಾಳಗಗಳಾದವು. ಈ ಬಡೆದಾಟಗಳಲ್ಲಿ ವಿಲಾಸಿಗಳಾದ ಮೊಗಲರು ಆತ್ಮಯಜ್ಞಕ್ಕೆ ಸಿದ್ಧರಾಗಿದ್ದ ಶೀಖರಿಂದ ಮೇಲಿಂದ ಮೇಲೆ ಪರಾಜಯ ಹೊಂದಿದರು.

ಶೀಖರಿಗೂ ಮೊಗಲರಿಗೂ ಆದ ಕಲಹದ ಕಾರಣವು ತೀರಸಾಮಾನ್ಯವಾದುದು. ಇದರಲ್ಲಿ ಮೊಗಲರು ದೋಷಿಗಳೆಂದು ಹೇಳಬಹುದಾಗಿದೆ. ಆ ಕಾರಣವು ಯಾವುದೆಂದರೆ, ಶೀಖಶಿಷ್ಯನೊಬ್ಬನು ದೂರದೇಶದಿಂದ ಕೆಲವು ಕುದುರೆಗಳನ್ನು ಕೊಂಡುತಂದು, ಅವುಗಳನ್ನು ಗುರುವಿಗೆ ಕಾಣಿಕೆ ಕೊಡಬೇಕೆಂದಿದ್ದನು. ಆದರೆ ಮೊಗಲ ಸೈನಿಕರು ಈ ಸುದ್ದಿ

ಯನ್ನರಿತು, ಆ ಶೀಖಶಿಷ್ಯನನ್ನು ದಾರಿಯಲ್ಲಿ ಅಡ್ಡಗಟ್ಟಿದರು. ಬಲಾತ್ಕಾರದಿಂದ ಎಲ್ಲ ಕುದುರೆಗಳನ್ನು ಅಪಹರಿಸಿ, ತಮ್ಮೊಳಗೆ ಹಂಚಿಕೊಂಡರು. ಇದರಲ್ಲಿಯ ಒಂದು ಕುದುರೆಯು ಲಾಹೋರದ ಕಾಜಿಗೆ ಉಪಹಾರವಾಗಿ ಸಿಕ್ಕಿತ್ತು. ಕಾಜಿಯು ಈ ಕುದುರೆಯನ್ನು ಶೀಖಗುರುವಿಗೆ ಸಾವಿರ ಮೊಹರುಗಳಿಗೆ ಮಾರಿದನು. ಮುಂದೆ ಶೀಖಗುರುವಿಗೆ ನಿಜಸಂಗತಿಯು ತಿಳಿಯಿತು. ಹರಿಗೋವಿಂದನು ಕುದುರೆಯನ್ನು ಕೊಂಡೊಯ್ದಿದ್ದರೂ, ಕುದುರೆಯ ಬೆಲೆಯನ್ನು ಕಾಜಿಗೆ ಸಲ್ಲಿಸಲಿಕ್ಕೆ ಅಲ್ಲಗಳೆದನು; ಮತ್ತು ಮೊಗಲ ಸೈನಿಕನೊಬ್ಬನು ಪ್ರೀತಿಯಿಂದ ಸಲುಹಿದ ಪಕ್ಷಿಯನ್ನು ಹಿಡಿದು ತರಿಸಿ ತನ್ನಲ್ಲಿಟ್ಟುಕೊಂಡನು. ಲಾಹೋರದ ಸುಭೇದಾರನು ಈ ಸಂಗತಿಗಳನ್ನರಿತು ಕೋಪಗೊಂಡನು. ಹರಿಗೋವಿಂದನೊಡನೆ ಯುದ್ಧಮಾಡಲಿಕ್ಕೆ ಏಳು ಸಾವಿರ ಸೈನಿಕರನ್ನು ಕಳುಹಿಕೊಟ್ಟನು. ಹರಿಗೋವಿಂದನು ಹೆದರಲಿಲ್ಲ. ತನ್ನ ಐದುಸಾವಿರ ಅನುಯಾಯಿಗಳನ್ನು ಕಟ್ಟಿಕೊಂಡು ಮೊಗಲರೊಡನೆ ಯುದ್ಧಮಾಡುವುದಕ್ಕೆ ಅಣಿಯಾದನು. ಈ ಯುದ್ಧದಲ್ಲಿ ಮೊಗಲರು ಪರಾಜಿತರಾಗಿ ಓಡಿಹೋದರು.

ಮೊಗಲರು ಈ ಅಪಜಯದ ಸೇಡು ತೀರಿಸಿಕೊಳ್ಳದೆ ಬಿಡರೆಂದು ಹರಿಗೋವಿಂದನು ಅರಿತಿದ್ದನು. ಕಾರಣ ಅವನು ಜಯದ ಉಬ್ಬಿನಲ್ಲಿ ಆಲಸ್ಯತನದಿಂದ ಕಾಲಕಳೆಯುವಂತಿರಲಿಲ್ಲ. ಅವನು ಹೊಸ ದಂಡಾಳುಗಳನ್ನು ಕೂಡಿಸುವ ಪ್ರಯತ್ನನಡಿಸಿ, ಯುದ್ಧದ ಸಿದ್ಧತೆಗೆ ತೊಡಗಿದನು. ಈ ಸಮಯದಲ್ಲಿ ಹರಿಗೋವಿಂದನ ಒಬ್ಬ ಶಿಷ್ಯನು ಮೊಗಲರ ಅಶ್ವಶಾಲೆಯಿಂದ ಎರಡು ಕುದುರೆಗಳನ್ನು ಕದ್ದುತಂದು ಗುರುವಿಗೆ ಕಾಣಿಕೆ ಕೊಟ್ಟನು. ಈ ಸುದ್ದಿಯು ಮೊಗಲ ಸುಭೇದಾರನಿಗೆ ತಿಳಿಯುತ್ತಲೆ ಅವನ ಕೋಪವು ಇಮ್ಮಡಿಸಿತು. ಅವನು ಹಿಂದಿನ ಅಪಜಯದ ಸೇಡು ತೀರಿಸಿಕೊಳ್ಳಲಿಕ್ಕೂ, ಸದ್ಯದ ಅಪರಾಧದ ದಂಡನೆಗೂ ಶೀಖರಮೇಲೆ ದಂಡೆತ್ತಿಹೊರಡುವ ಆಲೋಚನೆಯನ್ನು ಮಾಡಿದನು. ಇಬ್ಬರು ಸೇನಾ

ಪತಿಗಳ ಕೈಯಲ್ಲಿ ದೊಡ್ಡದಂಡುಕೊಟ್ಟು ಹರಿಗೋವಿಂದನಸಂಗಡ ಯುದ್ಧ ಮಾಡಲಿಕ್ಕೆ ಕಳುಹಿದನು. ಈ ಯುದ್ಧದಲ್ಲೂ ಶೀಖರು ಜಯಶಾಲಿಗಳಾದರು. ಮೊಗಲರು ಸೋತು ಓಡಿಹೋದರು. ಸೇನಾಪತಿಗಳಿಬ್ಬರೂ ರಣಭೂಮಿಯಲ್ಲಿ ಮಡಿದರು

ಗುರುವಿನ ದಾಸಿಯ ಮಗನಾದ ಪೈಂಡೀಖಾನನ ವಿಶ್ವಾಸಘಾತುಕತನದಿಂದ ಶೀಖರು ಮತ್ತೆ ಮೊಗಲರೊಡನೆ ಕಾದಬೇಕಾಯಿತು. ಪೈಂಡೀಖಾನನು ಪಠಾಣನು. ಇವನು ಗುರುವಿನ ಶಿಷ್ಯತ್ವವನ್ನು ವಹಿಸಿದ್ದರೂ, ಸ್ವಾಭಾವಿಕವಾಗಿದ್ದ ಉದ್ಧತವೃತ್ತಿಯನ್ನು ಬಿಟ್ಟಿರಲಿಲ್ಲ. ಒಂದು ದಿನ ಗುರುಪುತ್ರನ ಪಾರಿವಾಳವು ಹಾರಾಡುತ್ತ ಪೈಂಡೀಖಾನನ ಮನೆಗೆ ಬಂತು. ಪೈಂಡೀಖಾನನು ಅದನ್ನು ಹಿಡಿದಿಟ್ಟು. ತಿರುಗಿ ಕೊಡಲಿಕ್ಕೆ ಅಲ್ಲಗಳೆದನು. ಇದರಿಂದ ಗುರುವು ಕೋಪಗೊಂಡು, ಪೈಂಡೀಖಾನನಿಗೆ ಛೀ ಹಾಕಿದನು. ಅವಮಾನಗೊಂಡೆನೆಂದು ಭಾವಿಸಿದ ಪೈಂಡೀಖಾನನು ಸಿಟ್ಟಿಗೆದ್ದನು. ಗುರುವಿನ ಸೇಡು ತೀರಿಸಿಕೊಳ್ಳಲಿಕ್ಕೆ ಸಿದ್ಧನಾಗಿ ದಿಲ್ಲಿಗೆ ಪ್ರಯಾಣಬೆಳಸಿದನು. ದಿಲ್ಲಿಗೆ ಹೋಗಿ ಬಾದಶಹನ ದರ್ಶನವನ್ನು ತಕ್ಕೊಂಡು, ತನ್ನ ಉದ್ದೇಶವನ್ನು ಬಿನ್ನಯಿಸಿಕೊಂಡನು. ಮೊಗಲರು ಶೀಖರ ಸೇಡುತೀರಿಸಿಕೊಳ್ಳಲಿಕ್ಕೆ ಹಾತೊರೆಯುತ್ತಿದ್ದರು. ವಿಶ್ವಾಸಘಾತಕನಾದ ಪೈಂಡೀಖಾನನ ಬಿನ್ನಹದಿಂದ ಅವರಿಗೆ ಹರ್ಷವಾದಂತಾಯಿತು. ಬಾದಶಹನು ಪೈಂಡೀಖಾನನನ್ನು ಸೇನಾಪತಿಯನ್ನಾಗಿ ನೇಮಿಸಿಕೊಂಡು, ಅವನ ಕೈಯಲ್ಲಿ ದೊಡ್ಡ ದಂಡುಕೊಟ್ಟು, ಹರಿಗೋವಿಂದನ ಮೇಲೇರಿ ಹೋಗಲಿಕ್ಕೆ ಅವನಿಗೆ ಅಪ್ಪಣೆಯನ್ನು ಕೊಟ್ಟನು. ಬಾದಶಹನ ಸಹಾಯದಿಂದ ಬಲಿಷ್ಠನಾದ ಪೈಂಡೀಖಾನನು ಗುರುವಿನಮೇಲೆ ಸಾಗಿಬಂದನು. ಇಬ್ಬರಿಗೂ ಯುದ್ಧವಾಯಿತು. ಈ ಕಾಳಗದಲ್ಲೂ ಮೊಗಲರು ಸೋತರು. ಪೈಂಡೀಖಾನನು ಮರಣಹೊಂದಿದನು.

ಶೀಖರ ಸೈನ್ಯಶಕ್ತಿಯನ್ನು ಬೆಳಸಿದ ಹರಿಗೋವಿಂದನ ತರುವಾಯ

ಇವನ ಮಗನಾದ ಹರಿರಾಯನು ಏಳನೆಯ ಗುರುವಾದನು. ಇವನು ಶಾಂತಸ್ವಭಾವದವನು. ಇವನ ಕಾಲಕೀರ್ದಿಯಲ್ಲಿ ಶೀಖರ ಸಾಮರಿಕ ಶಕ್ತಿಯು ಮುಂದಡಿಯನ್ನಿಡಲಿಲ್ಲವೆಂಬದರಲ್ಲಿ ಸಂದೇಹವಿಲ್ಲ. ಆದರೂ ಶೀಖರು ತಮ್ಮ ಕ್ಷಾತ್ರತೇಜವನ್ನು ಕಳಕೊಳ್ಳದ್ದರಿಂದ ಪ್ರಸಂಗವಿಶೇಷದಲ್ಲಿ ಶೂರತ್ವವನ್ನು ತೋರಿಸಲು ಹಿಂದೆಗೆಯುತ್ತಿದ್ದಿಲ್ಲ. ಈ ಸಮಯದಲ್ಲಿ ಶಹಾಜಹಾನನ ನಾಲ್ವರು ಮಕ್ಕಳಲ್ಲಿ ದಿಲ್ಲಿಯ ಮಯೂರಾಸನದ ಸಲುವಾಗಿ ಭಯಂಕರ ಕಲಹವೆದ್ದಿತು. ಈ ಗೃಹಕಲಹದಲ್ಲಿ ಶೀಖರು ತಮ್ಮ ಕೈವಾಚಿ ಯುವರಾಜನಾದ ದಾರಾನಿಗೆ ಹಲವು ರೀತಿಗಳಿಂದ ಸಹಾಯ ಮಾಡಿದರು. ಆದರೆ ಈ ಒಳಜಗಳದಲ್ಲಿ ದಾರಾನು ಗೆದಿಯಲಿಲ್ಲ. ಧರ್ಮಾಂಧನಾದ ಔರಂಗಜೇಬನು ಜಯಶಾಲಿಯಾಗಿ, ಸಹೋದರರ ನೆತ್ತರದಿಂದ ಮುಳುಗಿದ್ದ ಮಯೂರಾಸನವನ್ನು ಆಕ್ರಮಿಸಿದನು. ಶೀಖರು ಈ ವೇಳೆಯಲ್ಲಿ ಔರಂಗಜೇಬನಿಗೆ ವಿರುದ್ಧರಾಗಲಿಕ್ಕೆ ಬಯಿಸಲಿಲ್ಲ. ಔರಂಗಜೇಬನ ಆಧೀನತೆಯನ್ನೊಪ್ಪಿಕೊಂಡು, ತಮ್ಮ ಅಲ್ಪಶಕ್ತಿಯನ್ನು ಹೆಚ್ಚಿಸಿಕೊಳ್ಳಲಿಕ್ಕೆ ಪ್ರಯತ್ನ ನಡಿಸಿದರು.

ಹರಿರಾಯನ ತರುವಾಯ ಇವನ ಕಿರಿಯಮಗನಾದ ಹರಿಕೃಷ್ಣನು ಎಂಟನೆಯ ಗುರುವಾದನು; ಇವನ ಕಾಲದಲ್ಲಿ ವಿಶೇಷ ಸಂಗತಿಯೇನೂ ನಡೆಯಲಿಲ್ಲ. ಇವನು ಒಂದೇ ವರುಷ ಗುರುಪೀಠದಲ್ಲಿದ್ದು ಅಕಾಲದಲ್ಲಿಯೆ ಮಡಿದನು.

## ಅಧ್ಯಾಯ ೪—ಜನನ.

ಆರನೆಯ ಗುರುವಾದ ಹರಿಗೋವಿಂದನಿಗೆ ಐವರು ಮಕ್ಕಳಿದ್ದರು. ಹಿರಿಯಮಗನ ಹೆಸರು ಗುರುದಿತ್ಯ. ಮಧ್ಯಮನ ಹೆಸರು ತೇಗಬಹದ್ದೂರ.

ಗುರುದಿತ್ಯನು ತಂದೆಯ ಮರಣದ ಮೊದಲೇ ತನ್ನಿಬ್ಬರು ಮಕ್ಕಳನ್ನಿರಿಸಿ, ಸತ್ತು ಹೋಗಿದ್ದನು. ಶೀಖಧರ್ಮಸಿಂಹಾಸನಕ್ಕೆ ಹಿರಿಯ ಮಗನು ಮಾತ್ರ ಹಕ್ಕುದಾರನಾದುದರಿಂದ ತೇಗಬಹದ್ದೂರನಿಗೆ ಗುರುಪೀಠವು ದೊರೆಯುವಂತಿರಲಿಲ್ಲ. ಕಾರಣ ಹರಿಗೋವಿಂದನ ತರುವಾಯ ಗುರುದಿತ್ಯನ ಹಿರಿಯ ಮಗನಾದ ಹರಿರಾಯನೂ, ಬಳಿಕ ಹರಿರಾಯನ ಮಗನಾದ ಹರಿಕೃಷ್ಣನೂ ಸಿಂಹಾಸನವೇರಿದರು. ಆದರೆ ಹರಿಕೃಷ್ಣನು ಮಕ್ಕಳಿಲ್ಲದೆ ತೀರಿಕೊಂಡದ್ದರಿಂದ ತೇಗಬಹದ್ದೂರನು ಸಿಂಹಾಸನವೇರಬೇಕಾದ ಪ್ರಸಂಗ ಬಂತು. ಹರಿಕೃಷ್ಣನು ಸಾಯುವ ಕಾಲಕ್ಕೆ ತೇಗಬಹದ್ದೂರನನ್ನು ಅನುಲಕ್ಷಿಸಿ ಹೇಳಿದ್ದೇನಂದರೆ:—"ಇನ್ನು ಮುಂದೆ ಬಾಬಾ ವಕಾಲಾನು ಗುರುವಾಗಬೇಕು."

ವಕಾಲಾ ಎಂಬದು ತೇಗಬಹದ್ದೂರನ ನಾಮಾಂತರವಲ್ಲ. ಇದು ವಿಪಾಶಾನದಿಯ ದಂಡೆಯಲ್ಲಿ, ಗೋವಿಂದವಾಲದ ಸನಿಯದಲ್ಲಿ ಇರುವದೊಂದು ಹಳ್ಳಿಯ ಹೆಸರು. ಹರಿಗೋವಿಂದನು ಶಕ್ತಿಸಂಚಯಕ್ಕೋಸುಗ ಅನುಚರರೊಡನೆ ಅರಣ್ಯವನ್ನು ಸೇರಹೊರಟಾಗ ತನ್ನ ಆತ್ಮೀಯರಲ್ಲಿಯ ಕೆಲವರನ್ನು ಈ ವಕಾಲಾಗ್ರಾಮದಲ್ಲಿರಿಸಿ ಹೋಗಿದ್ದನು. ಅಂದಿನಿಂದ ತೇಗಬಹದ್ದೂರನು ಈ ಹಳ್ಳಿಯಲ್ಲಿಯೆ ವಾಸವಾಗಿದ್ದನು.

ಎಂಟನೆಯ ಗುರುವಾದ ಹರಿಕೃಷ್ಣನ ಗುರುಪೀಠದ ಉತ್ತರಾಧಿಕಾರದ ವಿಷಯದಲ್ಲಿಯ ಆಶಯವೇನಿತ್ತೆಂಬುದು ಎಲ್ಲರಿಗೂ ಗೊತ್ತಿತ್ತು. ಆದರೆ ಆತ್ಮೀಯರಲ್ಲಿಯ ಹಲವರು ಹರಿಕೃಷ್ಣನ ಈ ಆಶೆಯನ್ನು ಕಡೆಹಾಯಿಸುವ ಮನಸ್ಸುಳ್ಳವರಾಗಿದ್ದರು. ಸಿಂಹಾಸನದ ಲೋಭವುಳ್ಳ ಕೆಲವರು ಹರಿಕೃಷ್ಣನ ಮರಣವಾರ್ತೆಯನ್ನು ಕೇಳುತ್ತಲೆ ಬಣಗಟ್ಟಿಕೊಂಡು ಸಿಂಹಾಸನಪ್ರಾಪ್ತಿಗೆ ಮುಂದುವರಿದರು. ತೇಜಸ್ವಿಯೂ ತ್ಯಾಗಿಯೂ ಆದ ತೇಗಬಹದ್ದೂರನು ಆತ್ಮೀಯರ ಈ ಅನ್ಯಾಯದ ಆಶೆಗೆ ಅಡ್ಡಿಯನ್ನೊಡ್ಡಲಿಲ್ಲ. ಇವನಿಗೆ ಗುರುಪದದ ಹವ್ಯಾಸವಿರಲಿಲ್ಲ. ಕೀರ್ತಿಯ

ಆಕಾಂಕ್ಷೆಯಿರಲಿಲ್ಲ. ಕೇವಲ ಧಾರ್ಮಿಕನಾಗಿದ್ದು ಏಕಾಂತವಾಸದಲ್ಲಿ ಈಶ್ವರಭಜನೆಯಲ್ಲಿ ಕಾಲಕಳೆಯಬೇಕೆಂಬುದು ಇವನ ಮಾನಸವಾಗಿತ್ತು. ಆದರೆ ಇವನ ಈ ಆಶೆಯು ವಿಧಿಲಿಪಿಗೆ ವಿಪರೀತವಾಗಿತ್ತು. ದೈವವು ತೇಗಬಹದ್ದೂರನನ್ನು ಏಕಾಂತವಾಸದಲ್ಲಿರಗೊಡಲಿಲ್ಲ. ತೇಗಬಹದ್ದೂರನು ಶೀಖಧರ್ಮಪೀಠವನ್ನು ಅಲ್ಲಗಳೆದರೂ, ಅದು ತಾನೇ ತಾನಾಗಿ ತೇಗಬಹದ್ದೂರನ ಸ್ವಾಗತಕ್ಕೆ ಉದ್ಯುಕ್ತವಾಯಿತು. ಮಾಖನಸಾಹಾ ಎಂಬವನು ಶೀಖಸಮಾಜದ ಮುಖಪಾತ್ರನಾಗಿ ತೇಗಬಹದ್ದೂರನೆ ಗುರುವಿನ ಗದ್ದುಗೆಯನ್ನೇರಬೇಕೆಂದು ಹಟತೊಟ್ಟನು. ತೇಗಬಹದ್ದೂರನು ಒಲ್ಲೆನೆಂದು ಹಲವು ವಿಧಗಳಾಗಿ ಹೇಳಿಕೊಂಡರೂ, ಮಾಖನಸಾಹಾನು ಕೇಳಲಿಲ್ಲ. ತೇಗಬಹದ್ದೂರನು ಸಮಾಜದ ಇಚ್ಛೆಯನ್ನು ಅಲ್ಲಗಳೆಯಲಾರದವನಾಗಿ ಕಡೆಗೆ ಗುರುಪದವನ್ನು ಗ್ರಹಿಸಲೊಪ್ಪಿದನು. ಶೀಖರು ತೇಗಬಹದ್ದೂರನ ಸಿಂಹಾಸನಾರೋಹಣ ಸಮಾರಂಭವನ್ನು ಸಡಗರದಿಂದ ಕಡೆಗಾಣಿಸಿದರು.

ಆತ್ಮೀಯರಲ್ಲಿಯು ಕೆಲವರಿಗೆ ತೇಗಬಹದ್ದೂರನ ಪಟ್ಟವೇರುವಿಕೆಯು ಸೇರಲಿಲ್ಲ. ಇವರು ಮೊದಲಿನಿಂದಲೂ ತೇಗಬಹದ್ದೂರನ ವಿರೋಧಿಗಳಾಗಿದ್ದರು. ಇವರು ತೇಗಬಹದ್ದೂರನ ವಿನಾಶಕ್ಕಾಗಿ ಹಲವು ಕಾರಸ್ಥಾನಗಳನ್ನು ನಡಿಸಿದರು. ತೇಗಬಹದ್ದೂರನು ಈ ತೊಂದರೆಗಳಿಂದ ಕೋಪಗೊಂಡು, ವೈರಿಗಳಾದ ಸ್ವಜನರನ್ನು ವಕಾಲಾಗ್ರಾಮದಿಂದ ಹೊಡೆದೋಡಿಸುವ ಸಂಕಲ್ಪ ಮಾಡಿಕೊಂಡನು. ಆದರೆ ಇದು ಮಾಖನಸಾಹಾನಿಗೆ ಸರಿದೋರಲಿಲ್ಲ. ತೇಗಬಹದ್ದೂರನು ಮಾಖನಸಾಹಾನ ಪರಾಮರ್ಶದಂತೆ ತಾನೇ ವಕಾಲಾ ಗ್ರಾಮವನ್ನು ತ್ಯಜಿಸಿ, ದೇಶಸಂಚಾರಕ್ಕೆ ಹೊರಟನು. ಪಂಜಾಬದ ಬಹುಭಾಗಗಳಲ್ಲಿ ಸಂಚರಿಸಿ, ಕಡೆಗೆ ದಿಲ್ಲಿಗೆ ಹೊರಟನು.

ತೇಗಬಹದ್ದೂರನು ದಿಲ್ಲಿಗೆ ಬರುತ್ತಲೆ ಹೊಸದೊಂದು ವಿಪತ್ತಿನಲ್ಲಿ ಬೀಳಬೇಕಾಯಿತು. ಹರಿರಾಯನ ಹಿರಿಯ ಮಗನ ಹೆಸರು ರಾಮರಾಯ.

ಇವನು ಮೊಗಲರ ಸಂಗದೋಷದಿಂದ ವಿಲಾಸಿಯೂ ದುರಾಚಾರಿಯೂ ಆಗಿದ್ದುದರಿಂದ ಹರಿರಾಯನ ತರುವಾಯ ಅವನ ಕಿರಿಯ ಮಗನಾದ ಹರಿಕೃಷ್ಣನು ಗುರುಪೀಠವನ್ನಲಂಕರಿಸಿದ್ದನು. ಆದರೆ ರಾಮರಾಯನ ಗುರುಪದಾಭಿಲಾಷೆಯು ಅಳಿದಿರಲಿಲ್ಲ. ಇವನು ತಮ್ಮನ ತರುವಾಯ ತಾನೇ ಗುರುವಾಗಬೇಕೆಂದು ಆಶಿಸಿದ್ದನು. ಅದು ಸಾಧಿಸದಿರಲು, ಇವನು ತೇಗಬಹದ್ದೂರನ ವಿಷಯದಲ್ಲಿ ಮತ್ಸರಗ್ರಸ್ತನಾಗಿ ವೈರತೊಟ್ಟಿದ್ದನು. ತೇಗಬಹದ್ದೂರನು ತುಸ ದಿವಸಗಳ ಹಿಂದೆ ಕರ್ತಾರಪುರದಲ್ಲಿ ಒಂದು ಕೋಟೆಯನ್ನು ಕಟ್ಟಿಸಿದ್ದನು. ರಾಮರಾಯನು ಈ ಸಂಗತಿಯನ್ನು ಮುಂದೆ ಮಾಡಿ, ತೇಗಬಹದ್ದೂರನು ಬಂಡಾಯ ಹೂಡುವ ಎತ್ತುಗಡೆಯಲ್ಲಿರುವನೆಂಬ ಭಾವನೆಯನ್ನು ಬಾದಶಹನ ಮನಸ್ಸಿನಲ್ಲಿ ಬಿಂಬಿಸುವಂತೆ ಮಾಡಿದನು. ಇದರಿಂದ ಬಾದಶಹನು ತೇಗಬಹದ್ದೂರನನ್ನು ಹಿಡಿಸಿತರಿಸಿ ಕಾರಾಗೃಹದಲ್ಲಿರಿಸಿದನು. ಆದರೆ ಅಂಬರದ ಅಧಿಪತಿಯಾದ ರಾಮಸಿಂಹನ ಪ್ರಯತ್ನದಿಂದ ತೇಗಬಹದ್ದೂರನು ತುಸ ದಿವಸಗಳಲ್ಲಿಯೆ ಕಾರಾವಾಸದಿಂದ ಪಾರಾದನು.

ಬಳಿಕ ತೇಗಬಹದ್ದೂರನು ದಿಲ್ಲಿಯನ್ನು ಬಿಟ್ಟು, ಗಂಗೆಯ ದಡದಲ್ಲಿರುವ ಪಾಟಣಾ ಪಟ್ಟಣವನ್ನು ಸೇರಿದನು. ಅಲ್ಲಿಯೆ ತನ್ನ ಪರಿವಾರದೊಡನೆ ಇರಹತ್ತಿದನು. ತೇಗಬಹದ್ದೂರನು ಈ ಪಟ್ಟಣದಲ್ಲಿರುವಾಗ ಕೆಲವರು ತಾಂತ್ರಿಕ ಪಂಡಿತರೊಡನೆ ಪರಿಚಿತನಾದನು. ಇವರ ಮುಖದಿಂದ ಕಾಮರೂಪದೇಶದ ಮಹತಿಯನ್ನು ಕೇಳಿಕೊಂಡನು. ಆ ದೇಶವನ್ನು ಕಣ್ಮುಟ್ಟ ನೋಡಿ ಬರುವ ಇಚ್ಛೆಯನ್ನು ತಳೆದನು. ಇದೇ ಸಮಯದಲ್ಲಿ ಅಂಬರಾಧಿಪತಿಯು ಆಸಾಮಪ್ರಾಂತದ ಪ್ರವಾಸಕ್ಕೆ ಹೊರಡತಕ್ಕವನಿದ್ದನು. ಇವನು ತೇಗಬಹದ್ದೂರನನ್ನು ತನ್ನೊಡನೆ ಕರೆದೊಯ್ಯಲಿಕ್ಕೆ ಸಂತೋಷದಿಂದ ಒಪ್ಪಿಕೊಂಡನು. ತೇಗಬಹದ್ದೂರನು ಈ ಸುಯೋಗವನ್ನು ವ್ಯರ್ಥ ಕಳಕೊಳ್ಳಲಿಲ್ಲ. ತನ್ನ ಪರಿವಾರವನ್ನು ಶಾಲಕ ಕೃಪಾಲನ

ಸಂರಕ್ಷಣೆಯಲ್ಲಿರಿಸಿ, ರಾಮಸಿಂಹನ ಸಂಗಡ ಕಾಮರೂಪಕ್ಕೆ ಪ್ರಯಾಣ ಬೆಳೆಸಿದನು. ಕಾಮರೂಪದಲ್ಲಿಯ ಹಲವು ತೀರ್ಥ-ಕ್ಷೇತ್ರಗಳ ದರ್ಶನ ತಕ್ಕೊಂಡು ಸಂತೋಷಿತನಾದನು. ಆಸಾಮದ ಅರಸನ ದರ್ಶನವನ್ನು ತಕ್ಕೊಂಡು, ಅವನೊಡನೆ ಮಾತುಕತೆಗಳನ್ನಾಡಿ ಹರ್ಷಿತನಾದನು. ಹೀಗೆ ಕೆಲವು ದಿವಸಗಳನ್ನು ಆನಂದದಿಂದ ಕಳೆದು ತಿರುಗಿ ಪಾಟಣಾ ನಗರಕ್ಕೆ ಬಂದನು. ಮುಂದೆ ತುಸು ದಿವಸಗಳಲ್ಲಿ ಪಾಟಣಾದಲ್ಲಿ ಶೀಖರಿಗೋಸುಗ ಒಂದು ವಿದ್ಯಾಲಯವನ್ನೂ, ಧರ್ಮಶಾಲೆಯನ್ನೂ ಕಟ್ಟಿಸಿದನು. ತೇಗ ಬಹದ್ದೂರನು ಈ ಪಟ್ಟಣದಲ್ಲಿರುವಾಗ ಅಂದರೆ ವಿಕ್ರಮಸಂವತ್ ೧೭೨೩ ಪುಷ್ಯಮಾಸದ ಶುದ್ಧ ಸಪ್ತಮಿಯ ದಿವಸ ರಾತ್ರಿಯ ಕಡೆಯ ಪ್ರಹರದಲ್ಲಿ ಧನಿಷ್ಠಾ ನಕ್ಷತ್ರದಲ್ಲಿ ಗೋವಿಂದರಾಯನು ಜನಿಸಿದನು. †

---

# ಅಧ್ಯಾಯ ೫—ಬಾಲ್ಯ.

ಬಾಲಕನ ಆಟಗಳಿಂದ ಅವನ ಉತ್ತರಕಾಲದ ಸ್ಥಿತಿಯನ್ನು ಊಹಿಸಬಹುದಿದೆ. ಮುಂದೆ ಘನವಂತನಾಗುವ ಬಾಲಕನ ಬಾಲಲೀಲೆ ಬೇರೆ. ಮುಂದೆ ಸಾಮಾನ್ಯ ಮನುಷ್ಯನಾಗುವ ಹುಡುಗನ ಆಟಬೇರೆ. ಭವಿಷ್ಯತ್ಕಾಲದಲ್ಲಿ ನೀಚಕೋಟಿಯಲ್ಲಿ ಸೇರತಕ್ಕವನ ಬಾಲಕ್ರೀಡೆ ಬೇರೆ. ಆದುದರಿಂದ ಈ ಆಟಗಳ ತಾರತಮ್ಯದಿಂದ ಬಾಲಕನ ಭವಿಷ್ಯತ್ಕಾಲದ ಉಚ್ಚ-ನೀಚತೆಗಳನ್ನು ಕಂಡುಹಿಡಿಯಲಿಕ್ಕೆ ತುಂಬ ಅವಕಾಶವಿದೆ. ಉತ್ತರಕಾಲದಲ್ಲಿ ಸಂಸಾರತ್ಯಾಗಿಯಾಗಿ ಭಗವಾನ್ ಬುದ್ಧನೆಂದು ಖ್ಯಾತಿಗೊಂಡ ಗೌತಮನು ಬಾಲ್ಯಕಾಲದಲ್ಲಿಯೆ ಪರದುಃಖಕಾತರತೆಯ ಗುಣ

---

† ಗೋವಿಂದಸಿಂಹನ ಜನ್ಮವತ್ಸರದ ಬಗ್ಗೆ ಐತಿಹಾಸಿಕರಲ್ಲಿ ಮತಭೇದವಿದೆ. ಗೋವಿಂದಸಿಂಹನು ಕ್ರಿ. ಶ ದ ೧೬೬೫ ರ ಕಡೆಯ ಭಾಗದಲ್ಲಿ ಇಲ್ಲವೆ ೧೬೬೬ರ ಪ್ರಾರಂಭದಲ್ಲಿ ಜನಿಸಿರಬೇಕೆಂದು ನನ್ನ ಮತವಿದೆ.

ವನ್ನು ತೋರಿದವನಾಗಿದ್ದನು. ಸಾಹಸಿಕನೂ, ಧರ್ಮಪ್ರಾಣನೂ ಆಗಿ ಧರ್ಮಪ್ರಚಾರಕ್ಕೆಂದು ಪ್ರವಾಸಮಾಡಿದ ಚೀನದೇಶದ ಹುವೆನ್‌ತ್ಸಾಂಗನು ಬಾಲ್ಯದಲ್ಲಿಯೆ ತನ್ನ ಮಹದ್ಗುಣಗಳನ್ನು ಮಂಡಿಸಿದವನಾಗಿದ್ದನು. ಇವನು ಹುಡುಗನಿರುವಾಗ ತಂದೆಯು ಬಳಿಯಲ್ಲಿ ಕುಳಿತು, "ಮನುಷ್ಯನು ಮನುಷ್ಯನೆಂದೆನಿಸಿಕೊಳ್ಳಲು ಯಾವ ಕೃತ್ಯಗಳಿಂದ ತಕ್ಕವನಾಗುವನು? ಮಾನವೀಯ ಜೀವಿತದ ಶ್ರೇಷ್ಠತೆಯು ಎಲ್ಲಿ?'' ಎಂಬುದನ್ನು ಭಕ್ತಿಯಿಂದಲೂ ಸಂಯಮದಿಂದಲೂ ಅಭ್ಯಾಸಿಸಿದವನಾಗಿದ್ದನು. ರಾಜಸ್ಥಾನದಲ್ಲಿ ತನ್ನ ಅನುಪಮ ಆತ್ಮಯಜ್ಞದಿಂದ ರಾಜಯೋಗಿಯೆಂದು ಹೆಸರುಗೊಂಡ ಮಹಾರಾಣಾ ಪ್ರತಾಪಸಿಂಹನು ಬಾಲ್ಯದಲ್ಲಿಯೆ ನಿರ್ಭಯತೆ, ಸ್ವದೇಶ ಪ್ರೀತಿ ಮೊದಲಾದ ಉತ್ತಮೋತ್ತಮ ಗುಣಗಳ ಪ್ರದರ್ಶನ ಮಾಡಿದ್ದನು.

ಬಾಲ್ಯಕಾಲದಲ್ಲಿ ಅಂಕುರ ರೂಪವಾಗಿದ್ದ ಸದ್ಗುಣಗಳ ವಿಕಾಸಕ್ಕೆ ಸತ್‌ಶಿಕ್ಷಣದ ಹಾಗು ಸತ್ಸಂಗದ ಜೋಡು ಅವಶ್ಯವಾಗಿಬೇಕು. ಇಲ್ಲವಾದರೆ ವಿಪರೀತ ಪರಿಸ್ಥಿತಿಯಲ್ಲಿ ಆ ಅಂಕುರ ರೂಪವಾಗಿದ್ದ ಗುಣಗಳು ಅಳಿದುಹೋಗಿ ಆ ಬಾಲಕನನ್ನು ಅಡ್ಡದಾರಿಗೆ ಒಯ್ಯುವವು. ಹೂವು ಅರಳು ಅರಳುವಾಗಲೆ ಪ್ರಖರವಾದ ಬಿಸಲಿನಿಂದ ಕಂದಿಹೋಗುವಂತೆ, ಇಲ್ಲವೆ ಹುಳಗಳ ಪೀಡೆಗೆ ಸಿಕ್ಕು ಬಾಡಿಹೋಗುವಂತೆ ಆ ಬಾಲಕನು ಮುಂದೆ ಕರ್ತವ್ಯತತ್ಪರನಾಗದೆ ಗೌರವಹೀನನಾಗುವನು. ಉದಾಹರಣಸ್ವರೂಪವಾಗಿ ಶಿವಾಜಿಯ ಚರಿತ್ರವನ್ನು ಅವಲೋಕಿಸಬಹುದು. ಶಿವಾಜಿಯು ಮೂಲತಃ ಚುರುಕುಬುದ್ಧಿಯುವನೂ, ಶಕ್ತಿಸಂಪನ್ನನೂ ಆಗಿದ್ದರೂ ಅವನ ಈ ಗುಣಗಳ ವಿಕಾಸಕ್ಕೆ ತಾಯಿಯ ಉತ್ತೇಜನವೂ, ಗುರುವಾದ ದಾದೋಜಿಕೊಂಡದೇವನ ಶಿಕ್ಷಣವೂ ತುಂಬ ನೆರವಾದವು. ಮುಂದೆ ರಾಮದಾಸ ಸ್ವಾಮಿಗಳ ಸತ್ಸಂಗವೂ, ಸದುಪದೇಶವೂ ಶಿವಾಜಿಯನ್ನು ಮತ್ತಷ್ಟು ಮಹಿಮಾನ್ವಿತನನ್ನಾಗಿ ಮಾಡಿದುವು. ಶಿವಾಜಿಯು ಇವರೆಲ್ಲರ ಸಹಾಯದಿಂದ ಕ್ರಮವಾಗಿ ಗೌರವಾನ್ವಿತನಾಗುತ್ತ ಕಡೆಗೆ

ಗೋಬ್ರಾಹ್ಮಣ ಪ್ರತಿಪಾಲಕ ಛತ್ರಪತಿಯೆಂದು ಹೆಸರಾದನು.

ಬಾಲಕ ಗೋವಿಂದರಾಯನೂ ತನ್ನ ಬಾಲಲೀಲೆಗಳಲ್ಲಿ ಭವಿಷ್ಯತ್ಕಾಲದಲ್ಲಿ ಪ್ರಕಟವಾಗಬೇಕಿದ್ದ ಶ್ರೇಷ್ಠಗುಣಗಳ ಆಭಾಸವನ್ನು ತೋರಿಸುತ್ತಿದ್ದನು. ಇವನು ಭವಿಷ್ಯತ್ಕಾಲದಲ್ಲಿ ಯಾವ ವಿರಾಟಯಜ್ಞದ ಸಿದ್ಧತೆ ಮಾಡಬೇಕಿತ್ತೊ, ಆ ಯಜ್ಞಕ್ಕೆ ಅನುರೂಪವಾಗಿಯೆ ಆಟಗಳನ್ನಾಡುತ್ತಿದ್ದನು. ಬಾಲಕ ನೆಪೋಲಿಯನ್ ಬೊನಾಪಾರ್ಟನು ಬರ್ಫದ ಗುಂಡುಗಳನ್ನು ಇಲ್ಲವೆ ಹಿತ್ತಾಳಿಯ ಸಣ್ಣ ತೋಫುಗಳನ್ನು ತಕ್ಕೊಂಡು ಆಟವಾಡಿ, ಮುಂದಿನಕಾಲದ ದಿಗ್ವಿಜಯದ ತಯಾರಿಯನ್ನು ನಡಿಸಿದಂತೆ, ಗೋವಿಂದರಾಯನು ಬಾಲ್ಯಕಾಲದ ಆಟಗಳಲ್ಲಿ ಭವಿಷ್ಯತ್ಕಾಲದ ಗುರುಗಿರಿಯ ಸಿದ್ಧತೆಯನ್ನು ಮಾಡಿಕೊಳ್ಳುತಲಿದ್ದನು. ಇವನು ಸಾಮಾನ್ಯ ಬಾಲಕರಂತೆ ಅಂಥಿಂಥ ಆಟಗಳನ್ನಾಡಿ ಎಂದೂ ತೃಪ್ತನಾದವನಲ್ಲ. ಇವನು ತನ್ನ ಸಂಗಡಿಗರನ್ನು ಕರಕೊಂಡು ಬಾದಶಾಹೀ ಆಟವನ್ನಾಡುವುದರಲ್ಲಿ ಬಹಳ ಆನಂದಪಡುತ್ತಿದ್ದನು. ತಾನು ಬಾದಶಹನಾಗುತ್ತಿದ್ದನು. ಸಹಚರರಲ್ಲಿಯ ಒಬ್ಬನನ್ನು ಮಂತ್ರಿಯನ್ನಾಗಿ ಮಾಡುತ್ತಿದ್ದನು. ಬೇರೊಬ್ಬನನ್ನು ಸೇನಾಪತಿಯನ್ನು ಮಾಡುತ್ತಿದ್ದನು. ಉಳಿದವರನ್ನು ಅಮೀರ-ಉಮರಾವರನ್ನಾಗಿ ಮಾಡುತ್ತಿದ್ದನು. ತರುವಾಯ ಬಾದಶಾಹೀ ದರಬಾರವು ನಡೆದು ರಾಜಕಾರ್ಯಕ್ಕೆ ಆರಂಭವಾಗುತ್ತಿತ್ತು. ಮತ್ತೊಮ್ಮೆ ಗೋವಿಂದರಾಯನು ಸೇನಾಪತಿಯಾಗುತ್ತಿದ್ದನು. ಗೆಳೆಯರು ಸೈನಿಕರಾಗುತ್ತಿದ್ದರು. ಗೋವಿಂದರಾಯನು ತನ್ನ ಈ ಸಹಚರರಿಗೆ ಯುದ್ಧವಿದ್ಯೆಯನ್ನು ಕಲಿಸತೊಡಗುತ್ತಿದ್ದನು. ಎದಿರುನಿಂತು ಹೇಗೆ ಯುದ್ಧ ಮಾಡಬೇಕು? ಶತ್ರುಗಳ ಸೈನ್ಯವು ಹೆಚ್ಚು ಇದ್ದಾಗ ಹೇಗೆ ಅಡಗಿಕೊಳ್ಳಬೇಕು? ಇವೇ ಮೊದಲಾದ ವಿಷಯಗಳನ್ನು ಗೆಳೆಯರ ಗುಂಪಿಗೆ ಹೇಳಿಕೊಡುತ್ತಿದ್ದನು. ಇನ್ನೊಮ್ಮೆ ಗೋವಿಂದರಾಯನು ಶೀಖಧರ್ಮಗುರುವಿನ ದರಬಾರ ನೆರಿಸಿ ಶಾಸ್ತ್ರಾಲೋಚನೆಗೆ ತೊಡಗುತ್ತಿದ್ದನು; ಓರಿಗೆಯ ಗೆಳೆಯರಿಗೆ ಧರ್ಮೋ

ಪದೇಶ ಮಾಡುತ್ತಿದ್ದನು.

ಗೋವಿಂದರಾಯನಿಗೆ ಗುರಿಹೊಡೆಯುವುದು ಬಹಳವಾಗಿ ಸೇರು ತ್ತಿತ್ತು. ಕವಣೆಗಲ್ಲನ್ನೆಸೆದು ಗುರಿಯನ್ನು ಸಾಧಿಸುವುದೂ, ಪಕ್ಷಿಗಳ ಬೇಟೆ ಯಾಡುವುದೂ ಇವನ ನಿತ್ಯದ ಕೆಲಸವಾಗಿತ್ತು. ಒಮ್ಮೊಮ್ಮೆ ಸಣ್ಣ ಬಂದೂಕವನ್ನು ತಕ್ಕೊಂಡು ಗುರಿಹೊಡಿಯುತ್ತಿದ್ದನು. ಇವನು ಬಾಲ್ಯ ಕಾಲದಲ್ಲಿಯೆ ಗುರಿಹೊಡೆಯುವದರಲ್ಲಿ ನಿಪುಣತೆಯನ್ನು ತೋರಿ, ಜನರನ್ನು ದಂಗುಗೊಳಿಸಿದ್ದನು.

ಗೋವಿಂದರಾಯನು ಚಪಲನಾಗಿದ್ದನು. ಕಿಡಿಗೇಡಿತನದ ಆಟಗಳ ಸಲುವಾಗಿ ಇವನು ಹಲವು ಸಾರೆ ಪಶ್ಚಾತ್ತಾಪಪಟ್ಟಿದ್ದರೂ, ಆ ಆಟಗ ಳನ್ನು ಬಿಟ್ಟಿರಲಿಲ್ಲ. ಯಾರಾದರೂ ಎದುರಿನಲ್ಲಿ ಮಣ್ಣುಕೊಡದಲ್ಲಿ ನೀರು ತುಂಬಿ ತರುವದನ್ನು ನೋಡಿದರೆ, ಇವನು ಸುಮ್ಮನಿರುತ್ತಿರಲಿಲ್ಲ. ಗುರಿ ಹೊಡೆದು ಕೊಡವನ್ನೊಡೆದು ಬಿಡುತ್ತಿದ್ದನು. ಕೊಡವು ಒಡೆದದ್ದರಿಂದ ಮೈಮೇಲೆ ನೀರು ಕೆಡವಿಕೊಂಡು ವಾಹಕನು ಪೇಚಾಡುತ್ತಿದ್ದಾಗ ಗೋವಿಂದರಾಯನು ಹುಡುಗಾಟಿಕೆ ಮಾಡಿ ನಗುತ್ತಿದ್ದನು. ನೀರು ತರು ವವನು ಸಿಟ್ಟಿಗೆದ್ದು ಗೋವಿಂದರಾಯನ ತಾಯಿಯ ಮುಂದೆ ದೂರು ಹೇಳುತ್ತಿದ್ದನು. ತಾಯಿಯು ಮಗನಿಗೆ ಸಿಟ್ಟುಮಾಡಿ, ಕೊಡದ ಬೆಲೆ ಕೊಟ್ಟು, ಆ ಮನುಷ್ಯನನ್ನು ಸಮಾಧಾನ ಮಾಡಿ ಕಳುಹುತ್ತಿದ್ದಳು. ಇಷ್ಟಾದರೂ ಗೋವಿಂದಸಿಂಹನು ತನ್ನ ಕಿಡಿಗೇಡಿತನದ ಆಟವನ್ನು ಬಿಡು ತ್ತಿರಲಿಲ್ಲ.

ಒಂದು ದಿನ ಗೋವಿಂದರಾಯನು ಕೊಡಕ್ಕೆ ಗುರಿಯಿಟ್ಟು ಕಲ್ಲನ್ನೆ ಸೆದನು. ಆದರೆ ಗುರಿಯು ತಪ್ಪಿತು. ಕಲ್ಲು ಕೊಡಕ್ಕೆ ಬಡಿಯದೆ, ಕೊಡ ವನ್ನು ಹೊತ್ತಿದ್ದ ಹೆಂಗಸಿನ ಹಣೆಗೆ ಬಡೆಯಿತು. ಹಣೆಯಿಂದ ರಕ್ತವು ಸುರಿಯಹತ್ತಿತು. ಗೋವಿಂದರಾಯನು ಗುರಿತಪ್ಪಿದ್ದಕ್ಕೆ ನಾಚಿಕೊಂಡನು; ಹೆಂಗಸಿನ ಅವಸ್ಥೆಯನ್ನು ನೋಡಿ ಭಯಗೊಂಡನು. ಓಡಿ ಹೋಗಿ

ಮನೆಯ ಅಟ್ಟದಲ್ಲಿ ಅಡಗಿಕೊಂಡನು. ಆ ಹೆಂಗಸು ಅಳುತ್ತ ಹೋಗಿ, ಗೋವಿಂದರಾಯನ ತಾಯಿಗೆ ದೂರುಹೇಳಿಕೊಂಡಳು. ಗೋವಿಂದರಾಯನ ತಾಯಿಯು ಕಾತರಳಾಗಿ, ಆ ಹೆಂಗಸಿನ ಶುಶ್ರೂಷೆ ಮಾಡಿದಳು. ಅವಳು ಕೆಲಮಟ್ಟಿಗೆ ಶಾಂತವಾದ ಬಳಿಕ ಹಣವನ್ನು ಕೊಟ್ಟು ಸಮಾಧಾನಪಡಿಸಿ, ಅವಳನ್ನು ಮನೆಗೆ ಕಳುಹಿಕೊಟ್ಟಳು.

ಆ ಹೆಂಗಸು ಮುಸಲ್ಮಾನಳು. ಆ ಕಾಲದಲ್ಲಿ ಮೊಗಲಕಾಜಿಗಳ ಪ್ರಭಾವವು ಅಖಂಡವಾಗಿತ್ತು. ಕಾಜಿಗಳು ಮನದಂದರೆ, ಯಾವನೇ ಒಬ್ಬ ಹಿಂದುವನ್ನು ನಾನಾತರದ ಸಂಕಟಗಳಿಗೆ ಗುರಿಮಾಡಿ, ಮನಬಂದಂತೆ ಪೀಡಿಸಬಲ್ಲವರಾಗಿದ್ದರು. ಕಾರಣ ಗೋವಿಂದರಾಯನ ತಾಯಿಯು ಪ್ರಕೃತಸಂಗತಿಯಿಂದ ಬಹಳ ಭಯಗೊಂಡಳು. ಅವಳು ಆ ಹೆಂಗಸನ್ನು ಕಳುಹಿಕೊಟ್ಟ ಬಳಿಕ ಗೋವಿಂದರಾಯನನ್ನು ಕುರಿತು— "ಮುಸಲ್ಮಾನರ ರಾಜ್ಯದಲ್ಲಿದ್ದು, ಮುಸಲ್ಮಾನಳಿಗೆ ಗಾಯಪಡಿಸುವದೇ? ಇದೇನು ಸಾಮಾನ್ಯಕೆಲಸವೆ? ಈ ತರದ ಸಾಹಸಕ್ಕೆ ತೊಡಗುವುದು ತುಂಬ ಅಪಾಯಕರವು! ಈ ಸಂಗತಿ ಹೊರಬಿದ್ದರೆ ನಮ್ಮ ಅವಸ್ಥೆಯು ನೆಟ್ಟಗಾಗದು! ತುರಕರ ಕೋಪದಿಂದ ಪಾರಾಗುವುದು ಸಾಧ್ಯವಲ್ಲ!"

ಅಟ್ಟದಮೇಲೆ ಅಡಗಿದ್ದ ಗೋವಿಂದರಾಯನು ತಾಯಿಯ ಮಾತನ್ನು ಕೇಳಿದನು. ಈ ಮಾತಿನಲ್ಲಿ ಮೊಗಲರ ಶಕ್ತಿಯ ಗರಿಮೆಯಿರುವದನ್ನು ತಿಳಿದ ಅವನಿಂದ ಸಹಿಸುವುದಕ್ಕಾಗಲಿಲ್ಲ. ಅವನು ತನ್ನ ಭಯವನ್ನೆಲ್ಲ ಹೊಡೆದೋಡಿಸಿದನು. ಕ್ರೋಧದಿಂದ ಅವನ ಕಣ್ಣುಗಳಿಗೆ ಕೆಂಪಡರಿತು. ಅವನು ಅಟ್ಟದಿಂದಿಳಿದು ಬಂದು ಅಂದದ್ದು—"ಅವ್ವಾ, ತುರ್ಕರೇನು ಹೆಚ್ಚಿನವರೇನು? ನಾನು ತುರ್ಕರಿಗೆ ಹೆದರಲಿಯಾ? ಎಂದಿಗೂ ಆಗದು!"

ಮತ್ತೊಂದು ದಿವಸ ಒಬ್ಬ ಅಮೀರನು ಪಾಟಣಾ ನಗರವನ್ನು ನೋಡುವುದಕ್ಕೆ ಸಡಗರದಿಂದ ಹೊರಟಿದ್ದನು. ಇವನು ಹೋಗುತ್ತಿದ್ದ

ದಾರಿಯ ಪಕ್ಕದಲ್ಲಿ ಗೋವಿಂದರಾಯನು ತನ್ನ ಗೆಳೆಯರೊಡನೆ ಆಟವಾಡು ತ್ತಿದ್ದನು. ಅಮೀರನನ್ನು ನೋಡಿ, ದಾರಿಯೊಳಗಿನ ಜನರು ವಿನಯದಿಂದ ನಮಸ್ಕಾರ ಮಾಡಿದರು. ಜನರ ಈ ವರ್ತನವನ್ನೂ, ಅಮೀರನ ಡಾಂಭಿಕ ತನವನ್ನೂ ನೋಡಿ, ಗೋವಿಂದರಾಯನು ಗಟ್ಟಿಯಾಗಿ ನಕ್ಕುಬಿಟ್ಟನು. ಇವನ ಅನುಕರಣ ಮಾಡಿ ಉಳಿದ ಹುಡುಗರೂ ನಕ್ಕರು. ಬಾಲಕರ ಈ ಪರಿಹಾಸವನ್ನು ನೋಡಿ ಅಮೀರನು ಕೋಪಗೊಂಡನು. ಅವನು ತನ್ನ ಹತ್ತಿರಿದ್ದವರನ್ನು ಕುರಿತು "ಈ ಮಂಗಗಳು ಏನನ್ನುತ್ತಿವೆ?" ಎಂದು ಕೇಳಿದನು. ಗೋವಿಂದರಾಯನು ಅಮೀರನ ಮಾತು ಕೇಳಿದನು. ಅಪ ಮಾನವನ್ನು ಸಹಿಸದವನಾಗಿ ಅಂದದ್ದೇನಂದರೆ:"ಇಲ್ಲಿ ನೋಡು. ಮಂಗ ಗಳಲ್ಲ. ಮನುಷ್ಯರಿದ್ದೇವೆ. ಇಂದು ಗರ್ವಾಂಧನಾದ ನೀನು ಮಂಗಗ ಳೆಂದು ತಿರಸ್ಕರಿಸುತ್ತಿರುವ ಈ ಮನುಷ್ಯರೇ ಮುಂದೆ ವೀರರಾಗಿ ನಿನ್ನ ಸೊಕ್ಕನ್ನಡಗಿಸುವರು!" ಅಮೀರನು ಬಹಳವಾಗಿ ಕೋಪಗೊಂಡನು. ಆದರೆ ಹತ್ತಿರಿದ್ದವರು ಹುಡುಗರ ಹುಡುಗಾಟಿಕೆಯ ಮಾತುಗಳೆಂದು ಹೇಳಿ ಅಮೀರನನ್ನು ಸಮಾಧಾನಗೊಳಿಸಿದರು.

ಈ ಸಂಗತಿಗಳಿಂದ ಗೋವಿಂದರಾಯನು ಬಾಲ್ಯದಲ್ಲಿ ಚಪಲನಿದ್ದಂತೆ ತೇಜಸ್ವಿಯೂ ಆಗಿದ್ದನೆಂಬುದು ಸ್ಪಷ್ಟವಾಗುತ್ತಿದೆ. ಗೋವಿಂದರಾಯನ ಪಿತಾಮಹಿಯೂ, ಹರಿಗೋವಿಂದನ ಹೆಂಡತಿಯೂ ಆದ ನಾನಕಿಯು ಮೊಮ್ಮಗನ ಈ ಮಾನಸಿಕ ತೇಜವನ್ನು ನೋಡಿ ಅನ್ನುತ್ತಿದ್ದುದೇನಂದರೆ: "ಗೋವಿಂದನು ನಮ್ಮ ಕುಲದೀಪಕನು. ಇವನಿಂದ ನಮ್ಮ ಮನೆತನವು ಗೌರವಮಂಡಿತವಾಗುವುದು." ಇವಳು ಗೋವಿಂದರಾಯನ ಗುರು-ಸ್ವರೂಪಿಣಿಯಾಗಿದ್ದಳೆಂದು ಹೇಳಿದರೆ ತಪ್ಪಾಗದು. ಇವಳ ಶಿಕ್ಷಣದಿಂ ದಲೂ, ಹುರುಪಿನಿಂದಲೂ ಗೋವಿಂದರಾಯನ ತೇಜಸ್ವಿತೆಯೂ, ಆತ್ಮ ವಿಶ್ವಾಸವೂ ಕ್ರಮೇಣ ಹೆಚ್ಚುತ್ತ ನಡೆದಿದ್ದುವು. ಇವಳು ದಿನಾಲು ಮೊಮ್ಮಗನನ್ನು ಹತ್ತಿರಕುಳ್ಳಿರಿಸಿಕೊಂಡು, ಪ್ರಾಚೀನಪುರುಷರ ವೀರತ್ವ,

ಧಾರ್ಮಿಕತೆ, ಸ್ವಾರ್ಥತ್ಯಾಗ, ಅತಿಥಿವಾತ್ಸಲ್ಯ ಮೊದಲಾದ ಸದ್ಗುಣಗಳನ್ನು ಹೃದಯಂಗಮವಾಗುವಂತೆ ವರ್ಣಿಸಿ ಹೇಳುತ್ತಿದ್ದಳು. ಈ ಕತೆಗಳನ್ನು ಕೇಳುತ್ತಿರುವಾಗಲೆ ಗೋವಿಂದರಾಯನ ಮನಸ್ಸಿನಲ್ಲಿ ಒಂದು ಪ್ರಬಲವಾದ ಆಕಾಂಕ್ಷೆಯು ಒಡಮೂಡುತ್ತಿತ್ತು. ಪ್ರಾಚೀನ ಮಹನೀಯರಂತೆ ತಾನೂ ಕೀರ್ತಿಶಾಲಿಯಾಗಬೇಕೆಂಬ ಭಾವನೆಯು ಅವನಲ್ಲಿ ಸದಾ ಜಾಗ್ರತವಿರುತ್ತಿತ್ತು.

ಗೋವಿಂದರಾಯನು ಅಜ್ಜಿಯ ಕತೆಗಳನ್ನು ಕೇಳಿ ಉತ್ತೇಜಿತನಾಗಿ ತನ್ನ ಆಕಾಂಕ್ಷೆಗಳನ್ನು ಆಡಿ ತೋರಿಸುತ್ತಿದ್ದನು. ಅಜ್ಜಿಯು ಮೊಮ್ಮಗನ ಈ ಮಹತ್ವಾಕಾಂಕ್ಷೆಗಳನ್ನು ಕೇಳಿ ಆನಂದಿತಳಾಗುತ್ತಿದ್ದಳು. ಮೊಮ್ಮಗನಿಗೆ ಮತ್ತಷ್ಟು ಹುರುಪುಗೊಡುತ್ತಿದ್ದಳು. ಯಾಕೆಂದರೆ ತನ್ನ ಮೊಮ್ಮಗನು ಶೂರನೂ, ಸಾಹಸಿಯೂ ಆಗಿ ಕೀರ್ತಿಮಂಡಿತನಾಗಬೇಕೆಂಬುದು, ಆ ಮುದುಕೆಯ ಉತ್ಕಟೇಚ್ಛೆಯಾಗಿತ್ತು. ಗೋವಿಂದರಾಯನ ಭವಿಷ್ಯತ್ಕಾಲದ ಸಾಹಸದ ಕಾರ್ಯಗಳಿಗೆ ಸಾನಕಿಯ ಈ ತರಹದ ಶಿಕ್ಷಣವು ತುಂಬ ಸಾಧನೀಭೂತವಾಗಿತ್ತೆಂದು ಹೇಳಿದರೆ ತಪ್ಪಾಗದು.

---

## ಅಧ್ಯಾಯ ೬—ತೇಗಬಹದ್ದೂರನ ಆತ್ಮಯಜ್ಞ

ತೇಗಬಹದ್ದೂರನು ಪುತ್ರೋತ್ಸವದ ತರುವಾಯ ತುಸು ದಿವಸಗಳಲ್ಲಿಯೆ ಪಾಟಣಾನಗರವನ್ನು ಬಿಟ್ಟು ಪಂಜಾಬದ ಕಡೆಗೆ ಪ್ರಯಾಣ ಬೆಳಿಸಿದನು. ಹಾದಿಯಲ್ಲಿ ದಿಲ್ಲಿನಗರವು ಹತ್ತಿತು. ದುಷ್ಟಬುದ್ಧಿಯ ರಾಮರಾಯನು ಈ ಸಮಯದಲ್ಲೂ ತೇಗಬಹದ್ದೂರನನ್ನು ಸಂಕಟದಲ್ಲಿ ಕೆಡಹುವದಕ್ಕೆ ಪ್ರಯತ್ನಿಸಿದನು. ಆದರೆ ತೇಗಬಹದ್ದೂರನು ರಾಮರಾಯನ ಈ

ದುರಾಲೋಚನೆಯನ್ನು ತಿಳಿದು, ತೀವ್ರವೇ ದಿಲ್ಲಿಯನ್ನು ಬಿಟ್ಟು ಮುಂದೆ ಸಾಗಿದನು. ಇದರಿಂದ ರಾಮರಾಯನ ಪ್ರಯತ್ನವು ವ್ಯರ್ಥವಾಯಿತು.

ತೇಗಬಹದ್ದೂರನು ಪಂಜಾಬಕ್ಕೆ ಬಂದಬಳಿಕ ಕಹಲೂರ ಸಂಸ್ಥಾನಿಕನಿಗೆ ಐದುನೂರು ಮೊಹರುಗಳನ್ನು ಕೊಟ್ಟು ಕೆಲವು ಭೂಮಿಯನ್ನು ಕೊಂಡುಕೊಂಡನು. ಈ ಸ್ಥಳದಲ್ಲಿ ಮುಖವಾಲವೆಂಬ ಪಟ್ಟಣವನ್ನು ಕಟ್ಟಿಸಿದನು. ಮುಂದೆ ಇದಕ್ಕೆ ಆನಂದಪುರವೆಂದೂ ಹೆಸರುಂಟಾಯಿತು. ಈ ಪಟ್ಟಣವು ಶೀಖರ ಮುಖ್ಯಸ್ಥಳವಾಯಿತು. ತೇಗಬಹದ್ದೂರನು ಈ ಪಟ್ಟಣದಲ್ಲಿ ಭದ್ರವಾದ ಕೋಟೆಯನ್ನು ಕಟ್ಟಿಸಿದನು.

ತೇಗಬಹದ್ದೂರನು ಮೊಗಲರ ಪೀಡೆಗಳಿಂದ ಬಹಳವಾಗಿ ನೊಂದಿದ್ದನು. ಮೊಗಲರ ಆಳಿಗಾಲದ ಹೊರತು ಶೀಖರ ಉನ್ನತಿಯಾಗದೆಂದು ನಂಬಿದ್ದನು. ಹೀಗಾಗಬೇಕಾದರೆ ಶೀಖರು ಪ್ರಬಲಜನಾಂಗವಾಗಬೇಕಿತ್ತು. ಮೊಗಲರನ್ನು ಎದುರಿಸಿ ಸೋಲಿಸಿ ನಾಶಗೊಳಿಸಬೇಕಿತ್ತು. ಇಂತಹ ಶಕ್ತಿಯು ಸದ್ಯಕ್ಕೆ ಶೀಖರಲ್ಲಿರಲಿಲ್ಲ. ತೇಗಬಹದ್ದೂರನು ಈ ಪ್ರಯತ್ನಕ್ಕೆ ತೊಡಗಿದನು. ತರುಣರನ್ನು ಸೈನ್ಯದಲ್ಲಿ ಸೇರಿಸಿಕೊಂಡು, ಅವರಿಗೆ ಯುದ್ಧವಿದ್ಯೆಯನ್ನು ಕಲಿಸಹತ್ತಿದನು. ಲೋಕೋಪಕಾರದ ಕಾರ್ಯಗಳನ್ನು ಕೈಗೊಂಡು, ಜನಸಾಮಾನ್ಯರ ಪ್ರೀತಿಯನ್ನು ಹೊಂದಲಿಕ್ಕೆ ಯತ್ನಿಸಿದನು. ಈ ಮಹತ್ಕಾರ್ಯಗಳಿಗೆ ಹಣವು ಅವಶ್ಯವಾಗಿ ಬೇಕಿತ್ತು. ಆದರೆ ತೇಗಬಹದ್ದೂರನಲ್ಲಿ ಧನವಿರಲಿಲ್ಲ. ಇವನು ಯಾವ ರೀತಿಯಿಂದ ಧನಸಂಗ್ರಹ ಮಾಡಬೇಕೆಂಬ ಆಲೋಚನೆಯಲ್ಲಿ ಬಿದ್ದನು.

ಈ ಸಮಯದಲ್ಲಿ ಒಬ್ಬ ಫಕೀರನು ಮೊಗಲರಿಂದ ರಾಜದ್ರೋಹಿಯೆಂದು ನಿರ್ಣಿತನಾಗಿ ತೇಗಬಹದ್ದೂರನ ಆಶ್ರಯವನ್ನು ಬಯಸಿದನು. ತೇಗಬಹದ್ದೂರನು ಇವನಿಗೆ ಸಂತೋಷದಿಂದ ಆಶ್ರಯವಿತ್ತನು. ಈ ಫಕೀರನ ಸಹಾಯದಿಂದ ತೇಗಬಹದ್ದೂರನಿಗೆ ಕೆಲವರು ಮುಸಲ್ಮಾನರು ಅನುಕೂಲರಾದರು. ತೇಗಬಹದ್ದೂರನ ಅನುಯಾಯಿಗಳ ಸಂಖ್ಯೆಯು

ಹೆಚ್ಚುತ್ತ ನಡೆಯಿತು. ತೇಗಬಹದ್ದೂರನು ಪಂಜಾಬದ ಧನಿಕರಿಂದ ತೆರಿಗೆಯನ್ನು ಎತ್ತಹತ್ತಿದನು. ಪಂಜಾಬದ ಶ್ರೀಮಂತರಿಗೆ ಈ ತೆರಿಗೆಯನ್ನು ಕೊಡುವ ಮನಸ್ಸಿರಲಿಲ್ಲ. ಆದರೆ ತೇಗಬಹದ್ದೂರನ ಶಕ್ತಿಗೆ ಅಳುಕಿದವರಾದ ಅವರು ಅನಿವಾರ್ಯಹದಿಂದ ಈ ಕರವನ್ನು ಕೊಡಲೇಬೇಕಾಯಿತು. ತೇಗಬಹದ್ದೂರನು ಈ ಹಣದ ಬಲದಿಂದ ಲೋಕೋಪಕಾರದ ಹಲವು ಕಾರ್ಯಗಳನ್ನು ಕೈಗೊಂಡು ಕೊನೆಗಾಣಿಸಿದನು. ಇದರಿಂದ ಸಾಮಾನ್ಯ ಜನರು ತೇಗಬಹದ್ದೂರನನ್ನು ಕೊಂಡಾಡಹತ್ತಿದರು. ಆದರೆ ಇದು ಪಂಜಾಬದ ಶ್ರೀಮಂತರಿಗೆ ಸೇರಲಿಲ್ಲ. ಮೊಗಲ ಅಧಿಕಾರಿಗಳಂತೂ ತೇಗಬಹದ್ದೂರನ ಈ ಕಾರ್ಯವನ್ನು ಪ್ರೀತಿಸುವ ಸಂಭವವಿರಲಿಲ್ಲ. ಸಾವುಕಾರರು ತೇಗಬಹದ್ದೂರನ ವಿರುದ್ಧ ಮೊಗಲ ಸರಕಾರಕ್ಕೆ ದೂರು ಹೇಳಿಕೊಂಡರು. ಮೊಗಲರಾದರೂ ತೇಗಬಹದ್ದೂರನನ್ನು ಬಗ್ಗುಬಡಿಯುವ ದಾರಿಯನ್ನು ಕಾಯುತ್ತ ಕುಳಿತಿದ್ದರು. ಮೊಗಲರು ಶ್ರೀಮಂತರ ದೂರಿನ ನೆವವನ್ನಿಟ್ಟುಕೊಂಡು ತೇಗಬಹದ್ದೂರನ ಮೇಲೆ ದಂಡುಕಳುಹಿದರು. ಶೀಖರಿಗೂ ಮೊಗಲರಿಗೂ ಯುದ್ಧವಾಯಿತು. ಈ ಕಾಳಗದಲ್ಲಿ ಶೀಖರು ಸೋತರು. ಶೀಖಸೈನಿಕರಲ್ಲಿಯ ಕೆಲವರು ಯುದ್ಧಭೂಮಿಯಲ್ಲಿ ಮಡಿದರು. ಬೇರೆ ಕೆಲವರು ಬಂದಿಗಳಾದರು. ಹಲವರು ಪಲಾಯನಮಾಡಿ ಪಾರಾದರು. ತೇಗಬಹದ್ದೂರನಾದರೂ ಓಡಿಹೋಗಿ ಮೊಗಲರ ವಿಷದೃಷ್ಟಿಯಿಂದ ಪಾರಾದನು. ಫಕೀರನು ಮೊಗಲರ ಕೈಯಲ್ಲಿ ಸಿಕ್ಕು ದೇಶಾಂತರ ಶಿಕ್ಷೆಗೆ ಗುರಿಯಾದನು.

ಈ ಸಮಯದಲ್ಲಿ ಬಾದಶಹನು ಕಾಶ್ಮೀರದಲ್ಲಿ ಹಿಂದುಗಳನ್ನು ಕುಲಗೆಡಿಸುವ ಕೆಲಸವನ್ನು ಒತ್ತರದಿಂದ ಸಾಗಿಸಿದ್ದನು. ಶಕ್ಯವಿರುವ ಎಲ್ಲ ಉಪಾಯಗಳನ್ನು ಅವಲಂಬಿಸಲಿಕ್ಕೆ ಬಾದಶಹನಿಂದ ಅನುಮತಿಯನ್ನು ಹೊಂದಿದ ಅಧಿಕಾರಿಗಳು ಇಡಿ ಕಾಶ್ಮೀರವನ್ನೇ ಮುಸಲ್ಮಾನಮಯವಾಗಿ ಮಾಡಿಬಿಡುವ ಸಂಕಲ್ಪ ಮಾಡಿಕೊಂಡಿದ್ದರು. ಇವರು ಮೊದಲು

ಹಿಂದೂಧರ್ಮದ ಮುಖ್ಯಸ್ಥರಾದ ಬ್ರಾಹ್ಮಣರನ್ನು ಕರಿಸಿಕೊಂಡು, ಮಹಮ್ಮದೀಯ ಧರ್ಮದ ಮಹತಿಯನ್ನು ವರ್ಣಿಸಿ ಹೇಳಿದರು. ಬ್ರಾಹ್ಮಣರು ಇವರ ಉಪದೇಶಕ್ಕೆ ಮನಸೋಲಲಿಲ್ಲ. ಕೋಪಗೊಂಡ ಅಧಿಕಾರಿಗಳು ಹಿಂದುಗಳ ಮೇಲೆ ಭಾರವಾದ ಕರಗಳನ್ನು ಹೇರಿದರು. ಇದರಿಂದ ಹಿಂದುಗಳ ಆರ್ಥಿಕ ಸ್ಥಿತಿಯು ಶೋಚನೀಯವಾಗುತ್ತ ನಡೆಯಿತು. ಹಿಂದುಗಳು ತೆರಿಗೆಯನ್ನು ತೆತ್ತಲಾರದೆ ಚಟಪಡಿಸಹತ್ತಿದರು. ಇಂತಹ ಸ್ಥಿತಿಯಲ್ಲಿ ಮೊಗಲರು ಹಿಂದುಗಳಿಗೆ ಧನದಾಶೆಯನ್ನು ತೋರಿ, ತಮ್ಮ ಕೆಲಸವನ್ನು ಸಾಧಿಸಬೇಕೆಂದಿದ್ದರು. ಆದರೆ ಹಿಂದುಗಳು ಅಧಿಕಾರಿಗಳ ಈ ದಾನೋಪಾಯಕ್ಕೂ ಹಣಿಯಲಿಲ್ಲ. ಕಡೆಗೆ ಅಧಿಕಾರಿಗಳು ಕಡೆಯದಾದ ದಂಡೋಪಾಯವನ್ನು ಸ್ವೀಕರಿಸಿದರು. ಇವರ ಭಯಂಕರ ಅತ್ಯಾಚಾರದಿಂದ ಹಿಂದುಗಳು ಗೋಳಿಡಹತ್ತಿದರು. ಇವರಲ್ಲಿಯ ಕೆಲವರು ಸ್ವಧರ್ಮರಕ್ಷಣೆಗೋಸುಗ ತೇಗಬಹದ್ದೂರನಿಗೆ ಶರಣುಹೋದರು. ತೇಗಬಹದ್ದೂರನು ಇವರಿಗೆ ಹೇಳಿ ಕಳುಹಿದ್ದೇನಂದರೆ:“ನೀವು ಬಾದಶಹನ ಬಳಿಗೆ ಹೋಗಿರಿ. ಮೊದಲು ತೇಗಬಹದ್ದೂರನನ್ನು ಇಲ್ಲಿಗೆ ಕರಿಸಿಕೊಂಡು ಅವನು ಮುಸಲ್ಮಾನನಾಗುವಂತೆ ಮಾಡಿರಿ, ಅವನು ಮುಸಲ್ಮಾನನಾದರೆ ನಾವೂ ನಮ್ಮ ಅನುಯಾಯಿಗಳೂ ಸಂತೋಷದಿಂದ ಧರ್ಮಾಂತರಮಾಡುವೆವು, ಎಂದು ಬಾದಶಹನಿಗೆ ಬಿನ್ನಹ ಮಾಡಿಕೊಳ್ಳಿರಿ. ಮುಂದೆ ಏನಾಗುವುದೋ ನೋಡೋಣವಂತೆ!”

ತೇಗಬಹದ್ದೂರನ ಹೇಳಿಕೆಯಂತೆ ಬ್ರಾಹ್ಮಣರು ಬಾದಶಹನ ದರಬಾರಕ್ಕೆ ಹೋದರು; ವಿಜ್ಞಾಪನೆ ಮಾಡಿಕೊಂಡರು. ಬಾದಶಹನು ಬ್ರಾಹ್ಮಣರ ಬಿನ್ನಹವನ್ನು ಅಲ್ಲಗಳೆಯಲಿಲ್ಲ; ತೇಗಬಹದ್ದೂರನಿಗೆ ಆಮಂತ್ರಣ ಪತ್ರವನ್ನು ಕಳುಹಿಕೊಟ್ಟನು. ತೇಗಬಹದ್ದೂರನು ಬಾದಶಹನ ಆಮಂತ್ರಣವನ್ನು ಸ್ವೀಕರಿಸಿ, ದಿಲ್ಲಿಗೆ ಹೊರಡುವುದನ್ನು ನಿಶ್ಚಯಿಸಿಕೊಂಡನು.

ತೇಗಬಹದ್ದೂರನು ದಿಲ್ಲಿಗೆ ಹೊರಡುವ ಮೊದಲು ತನ್ನ ವಿಶ್ವಾಸುಕ ಸೇವಕರನ್ನು ಗೋವಿಂದರಾಯನನ್ನು ಕರೆತರುವುದಕ್ಕೆ ಪಾಟಣಾಕ್ಕೆ ಕಳುಹಿಕೊಟ್ಟನು. ಗೋವಿಂದರಾಯನು ತಂದೆಯ ಅಪ್ಪಣೆಯಂತೆ ಪಂಜಾಬದ ಕಡೆಗೆ ಹೊರಟನು. ತೇಗಬಹದ್ದೂರನು ಪತಿಯಾಲಾದಿಂದ ದಿಲ್ಲಿಗೆ ಹೋಗುತ್ತಿರುವಾಗ ದಾರಿಯಲ್ಲಿ ತಂದೆ-ಮಕ್ಕಳ ದರ್ಶನವಾಯಿತು. ಈ ಸಮಯದಲ್ಲಿ ತೇಗಬಹದ್ದೂರನು ಮಗನಿಗೆ ಹೇಳಿದ್ದೇನಂದರೆ:— "ಮಗು, ಬಾದಶಹನು ನನಗೆ ಮರಣದ ಔತಣವನ್ನು ಕೊಟ್ಟಿದ್ದಾನೆ! ನಾನದನ್ನು ಸಂತೋಷದಿಂದ ಸ್ವೀಕರಿಸಿ ದರಬಾರಕ್ಕೆ ಹೊರಟಿದ್ದೇನೆ! ಅಲ್ಲಿ ಒದಗಬಹುದಿದ್ದ ನನ್ನ ಮರಣಕ್ಕೋಸುಗ ನೀನು ದುಃಖಿಸ ದಿರು! ನನ್ನ ತರುವಾಯ ನೀನೇ ಶೀಖಧರ್ಮಪೀಠದ ಹಕ್ಕುದಾರನು ನೀನೇ ಗುರುಪದವನ್ನಲಂಕರಿಸುವೆ. ಈ ಪ್ರಸಂಗದಲ್ಲಿ ನಾನು ನಿನಗೆ ನಿನ್ನ ಕರ್ತವ್ಯದ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ನನ್ನ ಈ ದೇಹವು ಕಾಗೆ-ಹದ್ದುಗಳ ಆಹಾರವಾಗಬಾರದೆಂದು ನನ್ನ ಇಚ್ಛೆಯಿದೆ. ನೀನು ಈ ಕಾರ್ಯವನ್ನು ಸಾಹಸದಿಂದ ನೆರವೇರಿಸ ಬೇಕು! ಹಾಗು ನೀನು ನಿನ್ನ ಈ ತಂದೆಯ ಕೊಲೆಯ ಸಂಗತಿಯನ್ನು ಎಂದೂ ಮರೆಯಲಾಗದು! ಬಾದಶಹನ ಅತ್ಯಾಚಾರದಿಂದ ಒದಗಬಹುದಿದ್ದ ನನ್ನ ಅಪಮೃತ್ಯುವಿನ ಸೇಡನ್ನು ನೀನು ಯೋಗ್ಯರೀತಿಯಿಂದ ತೀರಿಸಲೇ ಬೇಕು! ನೀನು ವೀರನು. ನಿನ್ನ ಕರ್ತೃತ್ವದ ವಿಷಯದಲ್ಲಿ ನನಗೆ ತುಂಬ ನಂಬಿಗೆಯಿದೆ. ಅಂತೆಯೇ ನಾನು ಆತ್ಮಯಜ್ಞಕ್ಕೆ ಸಿದ್ಧನಾಗಿ, ಬಾದಶಹನ ಬಳಿಯಲ್ಲಿ ಶೀಖರ ಆತ್ಮಿಕತೇಜದ ಪ್ರದರ್ಶನಕ್ಕೋಸುಗ ಹೊರಟಿದ್ದೇನೆ!" ಬಳಿಕ ತೇಗಬಹದ್ದೂರನು ಮಗನನ್ನು ಗುರುವಿನ ವಸ್ತ್ರಭೂಷಣಗಳಿಂದಲೂ, ಶಸ್ತ್ರಾಸ್ತ್ರಗಳಿಂದಲೂ ಅಲಂಕರಿಸಿ ಮುದ್ದಿಟ್ಟು ಆಶೀರ್ವದಿಸಿದನು. ಮಗನನ್ನು ಮುಂದೆ ಕಳುಹಿಕೊಟ್ಟು ತಾನು ದಿಲ್ಲಿಯ ಕಡೆಗೆ ನಡೆದನು.

ತೇಗಬಹದ್ದೂರನು ದಿಲ್ಲಿಗೆ ಹೋದಬಳಿಕ ಬಾದಶಹನಿಂದ ಆದರ ಸತ್ಕಾರಗಳನ್ನು ಹೊಂದಿದನು. ಬಾದಶಹನು ಸಾಮೋಪಚಾರದಿಂದಲೇ ತೇಗಬಹದ್ದೂರನನ್ನು ಕುಲಗೆಡಿಸಬೇಕೆಂದು ಮಾಡಿದ್ದನು. ಆದರೆ ತೇಗಬಹದ್ದೂರನು ಬಾದಶಹನ ಮೋಸಕ್ಕೆ ಬಲಿಬೀಳತಕ್ಕವನಾಗಿರಲಿಲ್ಲ. ಬಾದಶಹನು ಕೆಲವು ದಿವಸ ದಾರಿಯುಕಾಯ್ದರೂ, ತೇಗಬಹದ್ದೂರನು ಹಾದಿಗೆ ಬಾರದಿರುವುದನ್ನು ನೋಡಿ ಕೋಪಗೊಂಡನು. ತೇಗಬಹದ್ದೂರನನ್ನು ಸೆರೆಮನೆಯಲ್ಲಿರಿಸಲಿಕ್ಕೆ ಆಜ್ಞಾಪಿಸಿದನು. ಧರ್ಮಾಂತರ ಮಾಡಿದ ಹೊರತು ಕಾರಾಗಾರದಿಂದ ಮುಕ್ತನಾಗಲಾರೆಯೆಂದು ನಿರ್ಧಾರದಿಂದ ಹೇಳಿದನು. ಹಾಗು ಕಾರಾಗೃಹದ ಕಾವಲುಗಾರರಿಗೆ ತೇಗಬಹದ್ದೂರನನ್ನು ಪರಿಪರಿಯಿಂದ ಪೀಡಿಸಲಿಕ್ಕೆ ಸೂಚಿಸಿದನು. ತೇಗಬಹದ್ದೂರನು ಸೆರೆಮನೆಯ ಸೋಬತಿಯಾಗಿ, ಕಾವಲುಗಾರರ ಅತ್ಯಾಚಾರಗಳನ್ನು ತಡೆಕೊಂಡು ಕೆಲವು ದಿವಸಗಳನ್ನು ಕಳೆದನು. ಇಷ್ಟಾದರೂ ಅವನು ಸ್ವಧರ್ಮವನ್ನು ಬಿಟ್ಟು ಅನ್ಯಧರ್ಮವನ್ನು ಅಂಗೀಕರಿಸಲಿಕ್ಕೆ ಒಪ್ಪಲಿಲ್ಲ. ಬಾದಶಹನ ಕೋಪವು ಅನಿವಾರವಾಯಿತು. ಅವನು ತೇಗಬಹದ್ದೂರನನ್ನು ದರಬಾರಕ್ಕೆ ಕರಿಸಿಕೊಂಡನು. ಕೂಡಿದ ಜನರಲ್ಲಿ ತೇಗಬಹದ್ದೂರನ ಉಪಹಾಸ ಮಾಡಹತ್ತಿದನು. ತೇಗಬಹದ್ದೂರನಿಗೆ ಜಾದುಗಾರನೆಂದು ಹೆಸರು ಕೊಟ್ಟು, ಕೆಲವು ಕೈಚಮತದ ಆಟಗಳನ್ನಾಡಿ ತೋರಿಸಬೇಕೆಂದು ಆಜ್ಞಾಪಿಸಿದನು. ಪಂಜರದೊಳಗಿನ ಸಿಂಹದಂತಿದ್ದ ತೇಗಬಹದ್ದೂರನು ಅತ್ಯಂತ ಕೋಪಗೊಂಡನಾದರೂ, ಪ್ರತೀಕಾರ ಮಾಡುವಂತಿರಲಿಲ್ಲ. ಅವನು ಶಾಂತಚಿತ್ತದಿಂದ ಉತ್ತರಕೊಟ್ಟದ್ದೇನಂದರೆ: "ನಾನು ಸಾಧು. ಸಾಧುಗಳು ಜಾದುಗಾರರಂತೆ ಮೋಸದ ಕೃತ್ಯಗಳನ್ನೆಂದೂ ಆಚರಿಸರು. ಸಾಧುಗಳು ಮೋಸಗಾರಿಕೆಯನ್ನು ಮನಃಪೂರ್ವಕ ತಿರಸ್ಕರಿಸುವರು."

ಶೀಖಧರ್ಮವು ಹಿಂದೂ-ಮುಸಲ್ಮಾನರ ಐಕ್ಯಕ್ಕೋಸುಗ ಅವತರಿ

ಸಿದ್ಧಾಂಬದನ್ನು ಔರಂಗಜೇಬನು ನಂಬಿದವನಲ್ಲ. ಇದು ಮುಸಲ್ಮಾನರ ಧರ್ಮಪ್ರಸಾರದ ಕಾರ್ಯಕ್ಕೆ ಅಡ್ಡಿಯನ್ನುಂಟು ಮಾಡಲಿಕ್ಕೆ ತಲೆಯೆತ್ತಿದ ಅಸ್ತ್ರವೆಂದು ಅವನ ಭಾವನೆ. ಕಾರಣ ಕಪಟಿಯಾದ ಬಾದಶಹನು ತನ್ನಂತೆಯೇ ತೇಗಬಹದ್ದೂರನು ಕಪಟಿಯಾಗಿರಬೇಕೆಂದೂ, ಮೊಗಲರ ನಾಶಕ್ಕೋಸುಗ ಒಳಸಂಚು ನಡಿಸಿರಬೇಕೆಂದೂ ತಿಳಿದವನಾಗಿದ್ದನು. ಬಾದಶಹನು ಈ ವಿಷಯದಲ್ಲಿ ತೇಗಬಹದ್ದೂರನಿಗೆ ಹಲವು ಪ್ರಶ್ನೆಗಳನ್ನು ಮಾಡಿದನು. ತೇಗಬಹದ್ದೂರನು ಉತ್ತರಕೊಡದೆ ಸುಮ್ಮನಿದ್ದನು. ಬಾದಶಹನು ಬಹಳವಾಗಿ ಪೀಡಿಸಹತ್ತಿದನು. ಆಗ ತೇಗಬಹದ್ದೂರನು ಕ್ರೋಧಭರದಿಂದ ಅಂದದ್ದೇನಂದರೆ:"ಬಾದಶಹನೆ, ನೀನು ನನ್ನನ್ನು ಕೊಲ್ಲಿಸಬಯಸಿರುವೆ! ನಾನಿದನ್ನು ಮೊದಲೇ ತಿಳಿದಿದ್ದರೂ, ನಿನ್ನ ಆಮಂತ್ರಣವನ್ನು ಅಲ್ಲಗಳೆಯದೆ ಇಲ್ಲಿಗೆ ಬಂದಿದ್ದೇನೆ. ಯಾಕೆಂದರೆ, ನಿನ್ನ ಅತ್ಯಾಚಾರಕ್ಕೆ ನಮ್ಮಂಥ ಸಾಧುಗಳು ಬಲಿಯಾಗುವುದರಿಂದಲೇ ನಿನ್ನ ಧರ್ಮದ ಅಳಿಗಾಲವೂ ನನ್ನ ಧರ್ಮದ ಏರಿಕೆಯೂ ಆಗುವುದೆಂದು ನನ್ನ ದೃಢಭಾವನೆ. ಅಂತೆಯೇ ನಾನು ಮರಣವನ್ನು ತೃಣೀಕರಿಸಿ, ನಿನ್ನೆದುರಿಗೆ ನಿಂತಿದ್ದೇನೆ! ನಾನು ಮರಣಕ್ಕೆ ಹೆದರಿದವನಲ್ಲ! ಹುಟ್ಟಿದ ಮನುಷ್ಯನು ಸಾಯಲೇಬೇಕಿರುವಾಗ ನಶ್ವರದೇಹಕ್ಕಾಗಿ ಶಾಶ್ವತಧರ್ಮವನ್ನು ಬಿಟ್ಟುಕೊಡುವವನು ನಾನಲ್ಲ! ನೀನು ನಿನ್ನ ಮನಸ್ಸಿನಲ್ಲಿರುವಂತೆ, ನನ್ನನ್ನು ಕೊಲ್ಲಿಸಿ ತೃಪ್ತಿಗೊಳ್ಳು! ಹೆಚ್ಚಿನ ಸಂಗತಿಯನ್ನು ಈ ಕಾಗದದಲ್ಲಿ ಬರೆದಿದ್ದೇನೆ. ನನ್ನ ಮರಣದ ತರುವಾಯ ನೀನಿದನ್ನು ಓದಿಕೊಳ್ಳು." ತೇಗಬಹದ್ದೂರನು ತನ್ನ ಕೊರಳಲ್ಲಿಯ ಚೀಟಿಯನ್ನು ತೋರಿದನು.

ಬಾದಶಹನು ಸಾಧುವಿನ ಕೊಲೆಗೆ ಅಳುಕಲಿಲ್ಲ. ತೇಗಬಹದ್ದೂರನಿಗೆ ಮರಣದ ದಂಡನೆಯನ್ನು ವಿಧಿಸಿದನು. ಬಾದಶಹನ ಅಪ್ಪಣೆಯಂತೆ ಕೊಲೆಗಡಕರು ಪೇಟೆಯಲ್ಲಿ ಶೀಖಗುರುವಿನ ಶಿರಚ್ಛೇದ ಮಾಡಿದರು. (೧೬೭೫) ಸಂತುಷ್ಟನಾದ ಬಾದಶಹನು ಶೀಖಗುರುವಿನ ಕೊರಳಲ್ಲಿಯ

ಚೀಟಿಯನ್ನು ಉತ್ಸುಕತೆಯಿಂದ ಓದಿಕೊಂಡನು. ಅದರಲ್ಲಿ ಹೀಗೆ ಬರೆದಿತ್ತು: ಶಿರ ದಿಯಾ ಪರ ಸಾರ ನ ದಿಯಾ. (ಶಿರವನ್ನು ಧಾರೆಯೆರೆದೆನಲ್ಲದೆ ಧರ್ಮವನ್ನು ಬಿಡಲಿಲ್ಲ.)

---

## ಅಧ್ಯಾಯ ೭—ಅಭಿಷೇಕ.

ತೇಗಬಹದ್ದೂರನು ಮರಣದ ಪೂರ್ವದಲ್ಲಿ ತನ್ನೊಬ್ಬ ಸೇವಕನ ಕೈಯಲ್ಲಿ ಐದುದುಡ್ಡು ರೊಕ್ಕವನ್ನೂ, ಒಂದು ಟೆಂಗಿನಕಾಯಿಯನ್ನೂ ಕೊಟ್ಟು ಗೋವಿಂದರಾಯನ ಒಳಿಗೆ ಕಳುಹಿದ್ದನು. ಶೀಖರ ಧರ್ಮ-ಸಿಂಹಾಸನಾರೋಹಣ ಸಮಾರಂಭಕ್ಕೆ ಬೇಕಿರುವ ಸಾಮಾನುಗಳಲ್ಲಿ ಟೆಂಗಿನಕಾಯಿಯೂ, ಐದುದುಡ್ಡು ರೊಕ್ಕವೂ ಮುಖ್ಯವಾದವುಗಳು. ಅಭಿಷೇಕ ಮಾಡುವವನು ಅಭಿಷೇಕ ಹೊಂದುವವನಿಗೆ ಈ ವಸ್ತುಗಳನ್ನು ಕೊಡಲೇ ಬೇಕಿತ್ತು. ಇಲ್ಲವಾದರೆ ಅಭಿಷೇಕಕಾರ್ಯವು ಸಾಂಗವಾಗಿ ಸಾಗಿತೆಂದು ಶೀಖರು ಭಾವಿಸುತ್ತಿರಲಿಲ್ಲ.

ತೇಗಬಹದ್ದೂರನಿಂದ ಕಳುಹಲ್ಪಟ್ಟ ಈ ಸಾಮಾನುಗಳು ಗೋವಿಂದರಾಯನಿಗೆ ಮುಟ್ಟುವ ಮೊದಲೆ ತೇಗಬಹದ್ದೂರನ ಮರಣವಾರ್ತೆಯು ಮುಟ್ಟಿತ್ತು. ತಂದೆಯ ಈ ದುರ್ಮರಣದಿಂದ ಗೋವಿಂದರಾಯನು ಅತಿಶಯ ವ್ಯಥೆಗೊಂಡನು. ಅವನು ಕ್ರೋಧಕಂಪಿತನಾಗಿ ಇಂತು ನುಡಿದನು: "ಪೂರ್ವದ ಶೀಖ ಗುರುಗಳ ಭವಿಷ್ಯದ್ವಾಣಿಯು ನಿಶ್ಚಯವಾಗಿ ಫಲಿಸುವದು! ನಾನು ಗುರು-ಘಾತಕಿಗಳ ಸೇಡು ತೀರಿಸಿಕೊಳ್ಳದೆ ಬಿಡೆನು! ನಾನು ತುರ್ಕರನ್ನು ಸಮೂಲ ನಾಶಗೊಳಿಸುವೆನು!"

ನಾನಕನೂ ಅವನ ತರುವಾಯದ ಗುರುಗಳೂ ಸದಾ ಅನ್ನುತ್ತಿದ್ದುದೇನಂದರೆ: "ಸಾಧುಗಳಿಗೆ ಅನ್ಯಾಯದಿಂದ ದುಃಖಕೊಡುವುದರಿಂದ

ತುರ್ಕರ ಶಕ್ತಿಯು ಕ್ಷೀಣಿಸುವುದು; ಹಾಗು ಏಳು ಜನ ಸಾಧುಗಳನ್ನು ಸಂಹರಿಸುವದರಿಂದ ಮೊಗಲರಾಜ್ಯಕ್ಕೆ ಅಳಿಗಾಲವೊದಗುವುದು. ಮೊಗಲರ ದುರ್ವ್ಯವಹಾರಗಳಿಂದ ಇದುವರೆಗೆ ಎಷ್ಟೋ ಸಾಧುಗಳು ದುಃಖಿತರಾಗಿದ್ದರು; ಎಷ್ಟೋ ಜನರು ಮರಣಕ್ಕೆ ಗುರಿಯಾಗಿದ್ದರು. ಶೀಖಧರ್ಮಗುರುಗಳಲ್ಲಿಯ ಇಬ್ಬರು ಮೊಗಲರ ಅತ್ಯಾಚಾರಕ್ಕೆ ಗುರಿಯಾಗಿ ಮರಣಹೊಂದಿದ್ದರು.

ಮಾಖನಸಾಹಾನ ವಿಶೇಷ ಪ್ರಯತ್ನದಿಂದ ತೇಗಬಹದ್ದೂರನ ಹೆಣವು ನರಿ-ನಾಯಿಗಳ ತುತ್ತಿನಿಂದ ಪಾರಾಯಿತು. ಔರಂಗಜೇಬನು ತೇಗಬಹದ್ದೂರನ ಶವವನ್ನು ಚಾಂದಣೀಚೌಕದ ಬೀದಿಯಲ್ಲಿ ಬಿಸಾಟಿಸಿದನು. ಹಾಗು ಶವದ ಉತ್ತರಕ್ರಿಯೆಯನ್ನು ಯಾರೂ ಮಾಡಕೂಡದೆಂದು ಕಟ್ಟಪ್ಪಣೆಮಾಡಿದನು. ಮಾಖನಸಾಹಾನು ವಿಶ್ವಾಸುಕ ಅನುಚರರಿಂದ ಆ ಹೆಣವನ್ನು ರಾತ್ರಿಯಲ್ಲಿ ತನ್ನ ಹತ್ತಿರ ತರಿಸಿಕೊಂಡನು. ಶಿರವನ್ನು ಗೋವಿಂದರಾಯನ ಬಳಿಗೆ ಕಳುಹಿಕೊಟ್ಟನು. ಹೆಣದ ಉಳಿದ ಭಾಗವನ್ನು ಒಬ್ಬ ಶಿಷ್ಯನ ಮನೆಯಲ್ಲಿ ದಹನಮಾಡಿದನು. ಬಾದಶಹನ ಅಪ್ಪಣೆಯಂತೆ ಶವವನ್ನು ಪ್ರಕಾಶಸ್ಥಳದಲ್ಲಿ ದಹನಮಾಡುವಂತಿರಲಿಲ್ಲ. ಬಾದಶಹನ ಸೈನಿಕರ ಹೆದರಿಕೆಯು ಎಲ್ಲರಿಗೂ ಇದ್ದೇ ಇತ್ತು. ಕಾರಣ ದಿಲ್ಲಿಯೊಳಗಿನ ಒಬ್ಬ ಶೀಖಶಿಷ್ಯನು ಮಾಖನಸಾಹಾನ ಹೇಳಿಕೆಯ ಮೇರೆಗೆ ತನ್ನ ಮನೆಯಲ್ಲಿ ಚಿತೆಯನ್ನು ರಚಿಸಿ, ಅದರ ಮೇಲೆ ಶವವನ್ನು ಇರಿಸಿ, ಮನೆಗೆ ಬೆಂಕಿಯ ಹಚ್ಚಿಕೊಂಡನು. ಮನೆಯೊಡನೆ ತೇಗಬಹದ್ದೂರನ ಶವದ ದಹನವೂ ಆಯಿತು. ಮುಂದೆ ಶೀಖರು ಈ ಸಂಗತಿಯ ಸ್ಮರಣೆಗಾಗಿ ಈ ಸ್ಥಳದಲ್ಲಿ ಒಂದು ಮಂದಿರವನ್ನು ಕಟ್ಟಿಸಿ, ಅದಕ್ಕೆ ರಿಕಾಬಗಂಜ ಎಂದು ಹೆಸರಿಟ್ಟರು.

ತಂದೆಯ ಮುಂಡವು ಗೋವಿಂದರಾಯನ ಬಳಿಗೆ ತರಲ್ಪಟ್ಟಿತು. ಗೋವಿಂದರಾಯನು ತಂದೆಯ ಮುಖವನ್ನು ನೋಡಿ ಅತ್ತಿ ಬರಹತ್ತಿದ್ದ

ಶೋಕವನ್ನು ತಡೆಯಲಾರದೆ, ಬಹಳವಾಗಿ ಅತ್ತನು. ಕೆಲ ಹೊತ್ತಿನ ಮೇಲೆ ತುಸುಮಟ್ಟಿಗೆ ಶಾಂತಿಯನ್ನು ಹೊಂದಿದನು. ಶೋಕದ ಸ್ಥಳ ವನ್ನು ಕ್ರೋಧವು ಆಕ್ರಮಿಸಿತು. ಗೋವಿಂದರಾಯನು ಹಲ್ಲುಕಟಿಯುತ್ತ ವಜ್ರಮುಷ್ಟಿಯನ್ನೆತ್ತಿ ಇಂತು ಎಂದನು:"ಸಾಧುಗಳು ತಮ್ಮ ಮಹದು ದ್ದೇಶದ ಸಾಧನೆಗಾಗಿ ದೇಹವನ್ನು ಬಲಿಗೊಡಲು ದುಃಖಿಸುವದಿಲ್ಲ. ಯಾಕೆಂದರೆ ಅವರು ಧರ್ಮರಕ್ಷಣೆಗೋಸುಗ ಎಂತಹ ಆತ್ಮಯಜ್ಞವನ್ನಾ ದರೂ ಸಂತೋಷದಿಂದ ಮಾಡಬಲ್ಲರು! ಅಪ್ಪಾ, ನೀನು ಪುಣ್ಯಾತ್ಮನು! ಶಿರವನ್ನು ಕೊಟ್ಟೆಯಲ್ಲದೆ, ಧರ್ಮವನ್ನು ತ್ಯಜಿಸಲಿಲ್ಲ! ನಿನ್ನ ಈ ಉದಾ ಹರಣೆಯು ನಮ್ಮೆಲ್ಲರಿಗೂ ಅನುಕರಣೀಯವಾದದ್ದು. ಅಪ್ಪಾ, ನಾನು ಇಂದು ನಿನ್ನ ಈ ಪವಿತ್ರ ಶಿರದ ಸಾಕ್ಷಿಯಾಗಿ ಈ ನಶ್ವರ ದೇಹದ ಮೋಹ ವನ್ನು ಬಿಟ್ಟು ಪ್ರತೀಕಾರಕ್ಕೋಸುಗ ಪ್ರಯತ್ನಿಸುವೆನೆಂದು ಪಣಮಾಡು ತ್ತೇನೆ. ನಿನ್ನ ಈ ದುರ್ಮರಣದ ಸಂಗತಿಯನ್ನು ಸದಾ ಸ್ಮರಣೆಯಲ್ಲಿ ಟ್ಟುಕೊಂಡು ತುರ್ಕರ ಸಂಹಾರಕ್ಕೆ ಉದ್ಯುಕ್ತನಾಗುತ್ತೇನೆ. ಸ್ವರ್ಗದಲ್ಲಿ ರುವ ನೀನು ಈ ಪವಿತ್ರ ಕಾರ್ಯದಲ್ಲಿ ನಾನು ಜಯಶಾಲಿಯಾಗುವಂತೆ ಆಶೀರ್ವದಿಸು!!"

ಬಳಿಕ ಗೋವಿಂದರಾಯನು ತಂದೆಯ ಉತ್ತರಕ್ರಿಯೆಯನ್ನು ಸಾಂಗವಾಗಿ ನೆರವೇರಿಸಿದನು. ಇವನು ತಂದೆಯ ಶಿರವು ದಹನವಾದ ಸ್ಥಳದಲ್ಲಿ ಒಂದು ಮಂದಿರವನ್ನು ಕಟ್ಟಿಸಿದನು. ಈ ಸ್ಥಳವು ಶೀಖರಿಗೆ ಇಂದಿಗೂ ಪವಿತ್ರವಾದ ಧಾರ್ಮಿಕ ಕ್ಷೇತ್ರವಾಗಿದೆ.

ತರುವಾಯ ಗೋವಿಂದರಾಯನು ಶೀಖಸಮಾಜದ ಆಗ್ರಹದಿಂ ದಲೂ, ತಾಯಿ ಹಾಗು ಅಜ್ಜಿಯ ಅಪ್ಪಣೆಯಿಂದಲೂ ಶೀಖಧರ್ಮಸಿಂಹಾ ಸನವೇರಲಿಕ್ಕೆ ಸಿದ್ಧನಾದನು. ಈ ಶುಭಸಂವಾದವು ಪ್ರಚಾರವಾಗುತ್ತಲೆ, ಬೇರೆಬೇರೆ ಕಡೆಗಳಲ್ಲಿರುವ ಶೀಖರು ಕಾಣಿಕೆಗಳನ್ನು ತಕ್ಕೊಂಡು ಆನಂದ ಪುರಕ್ಕೆ ಒಕಹತ್ತಿದರು. ಗೋವಿಂದರಾಯನು ಈ ಸಮಯದಲ್ಲಿ ತನ್ನ

ಶಿಷ್ಯರಿಗೆ ಹೇಳಿದ್ದೇನಂದರೆ:"ನಿಮ್ಮ ಗುರುಗಳಿಗೆ ಈಗ ಉಳಿದ ಕಾಣಿಕೆಗಳ ಪ್ರಯೋಜನವಿಲ್ಲ. ಅವರಿಗೆ ಅಶ್ವಗಳೂ ಶಸ್ತ್ರಾಸ್ತ್ರಗಳೂ ಬಹಳವಾಗಿ ಬೇಕಿವೆ. ಭಕ್ತರು ಡೌಲಿನ ಪದಾರ್ಥಗಳನ್ನು ಉಪಹಾರವಾಗಿ ಕೊಡಬಯಿಸದೆ, ಯುದ್ಧೋಪಯುಕ್ತವಾದ ಕುದುರೆಗಳನ್ನೂ, ತೀಕ್ಷ್ಣವಾದ ಆಯುಧಗಳನ್ನೂ ತಂದುಕೊಡಬೇಕು."

ಶಿಷ್ಯವೃಂದವು ಗುರುವಿನ ಆಶಯದಂತೆ ತನ್ನ ಶಕ್ತ್ಯಾನುಸಾರವಾಗಿ ಕಾಣಿಕೆಗಳನ್ನು ಅರ್ಪಿಸಿತು. ಗೋವಿಂದರಾಯನು ಆಗತಜನರ ಸ್ವಾಗತವನ್ನು ಉತ್ತಮರೀತಿಯಿಂದ ಮಾಡಿ, ಅವರಿತ್ತ ಕಾಣಿಕೆಗಳನ್ನು ಸಂತೋಷದಿಂದ ಸ್ವೀಕರಿಸಿ, ತನ್ನ ಉತ್ತಮ ಗುಣಗಳಿಂದ ಶೀಖಸಮಾಜದ ಹೃದಯವನ್ನು ಆಕರ್ಷಿಸಿಕೊಂಡನು. ಶೀಖರು ಗೋವಿಂದರಾಯನಂತಹ ತೇಜಸ್ವಿಯು ತಮ್ಮ ಗುರುವಾದುದಕ್ಕೆ ಬಹಳ ಆನಂದಬಟ್ಟು, ಪಟ್ಟಾಭಿಷೇಕಕಾರ್ಯವನ್ನು ಬಹು ವಿಜೃಂಭಣೆಯಿಂದ ಕಡೆಗಾಣಿಸಿದರು. ಹೀಗಾಗಿ ಗೋವಿಂದರಾಯನು ತನ್ನ ಹತ್ತನೇ ವರ್ಷದ ವಯಸ್ಸಿನಲ್ಲಿ ಶೀಖಧರ್ಮದ ಗುರುವಿನ ಗದ್ದುಗೆಯನ್ನಲಂಕರಿಸಿದನು.

---

## ಅಧ್ಯಾಯ ೮-ಸಾಧನೆ.

ತಂದೆಯ ಮರಣದ ಆಘಾತದಿಂದ ಗೋವಿಂದರಾಯನ ಸ್ವಭಾವದಲ್ಲಿ ಪರಿವರ್ತನೆಯುಂಟಾಯಿತು. ಈ ಚಿಕ್ಕ ವಯಸ್ಸಿನಲ್ಲಿಯೆ ಬಾಲಸುಲಭವಾದ ಚಂಚಲತೆಯೂ ಉಡಾಳತನವೂ ಅಳಿದುಹೋಗಿ, ಆ ಸ್ಥಳದಲ್ಲಿ ಶಾಂತತೆಯೂ ವಿಚಾರಶೀಲತೆಯೂ ಉಂಟಾಯಿತು. ಯಾವ ಕಾಲವನ್ನು ಬಾಲಕ್ರೀಡೆಯಲ್ಲಿ ಕಳೆಯಬೇಕಿತ್ತೊ, ಆ ಕಾಲದಲ್ಲಿ ಗೋವಿಂದರಾಯನು ತಂದೆಯ ಅಕಾಲಿಕ ಹಾಗು ಶೋಚನೀಯ ಮರಣದಿಂದ ಅತ್ಯಂತ

ದುಃಖಿತನಾಗಿ ಪ್ರತೀಕಾರಕ್ಕಾಗಿ ಪ್ರಯತ್ನಿಸಬೇಕಾಯಿತು. ವೈರಿಗಳು ಸಾಮಾನ್ಯರಲ್ಲ. ಸ್ವಂತದ ಬಲವು ವಿಶೇಷವಾಗಿರಲಿಲ್ಲ. ಮೊಗಲರೊಡನೆ ಪ್ರತಿಭಟಿಸಿ ಜಯಶಾಲಿಯಾಗಲಿಕ್ಕೆ ಅತಿಶಯ ಬಲವು ಬೇಕಿತ್ತು. ಗೋವಿಂದರಾಯನು ಏಕಾಗ್ರಚಿತ್ತದಿಂದ ಶಕ್ತಿಸಂಚಯಕ್ಕೆ ತೊಡಗಿ, ತಂದೆಯ ಮರಣದ ದುಃಖವನ್ನು ಮರೆದುಬಿಟ್ಟನು.

ಮುಖವಾಲನಗರದ ಮೇಲೆ ಮೊಗಲರ ಕಣ್ಣಿತ್ತು. ಗೋವಿಂದರಾಯನು ಈ ನಗರದಲ್ಲಿದ್ದೇ ಬಲಸಂಚಯಕ್ಕೆ ತೊಡಗಿದ್ದರೆ, ಈ ಸಂಗತಿಯು ಮೊಗಲರಿಗೆ ತಿಳಿಯದಿರುತ್ತಿರಲಿಲ್ಲ. ಹೀಗೆ ಆಗಗೊಡುವುದು ಯೋಗ್ಯವಲ್ಲವೆಂದು ಗೋವಿಂದರಾಯನು ಭಾವಿಸಿದನು. ಕಾರಣ ಇವನು ಮುಖವಾಲನಗರವನ್ನು ಬಿಟ್ಟು ಯಮುನಾನದಿಯ ತೀರದಲ್ಲಿರುವ ಅರಣ್ಯವನ್ನು ಸೇರಿದನು. ಸಾಧನೆಯಲ್ಲೂ ಲೋಕಸಂಗ್ರಹದಲ್ಲೂ ಕಾಲಕಳೆಯಹತ್ತಿದನು.

ಹೀಗೆ ಅರಣ್ಯವಾಸಿಯಾಗಿರುವಾಗ ಗೋವಿಂದರಾಯನ ಮದುವೆಯಾಯಿತು.* ಗೋವಿಂದರಾಯನು ತನ್ನ ವಿವಾಹದ ಉತ್ಸವಕ್ಕೆ ಬಹುಜನ ಭಕ್ತರನ್ನು ಬರಮಾಡಿಕೊಂಡನು. ಊಟ-ಉಪಚಾರಗಳಿಂದ ಅವರನ್ನು ಚನ್ನಾಗಿ ಸತ್ಕರಿಸಿದನು. ದೀನರಿಗೂ ದರಿದ್ರರಿಗೂ ಹಲವು ವಿಧಗಳಾದ ದಾನಗಳನ್ನು ಮಾಡಿದನು. ಗೋವಿಂದರಾಯನ ಈ ವೃತ್ತಿಯಿಂದ ಜನರ ಪ್ರೀತಿಯು ಹೆಚ್ಚುತ್ತ ನಡೆಯಿತು. ಅನುಯಾಯಿಗಳ ಸಂಖ್ಯೆಯು ದಿನಾಲು ಬೆಳೆಯುವುದರಲ್ಲಿತ್ತು. ಈ ಸಂಗತಿಯು ಔರಂಗಜೇಬನಿಗೆ ತಿಳಿಯದಿರಲಿಲ್ಲ. ಗೋವಿಂದರಾಯನ ಉನ್ನತಿಯನ್ನು ಕೇಳಿ, ಬಾದಶಹನಿಂದ ಸಹಿಸುವುದಕ್ಕಾಗಲಿಲ್ಲ. ಬಾದಶಹನೂ ರಾಮರಾಯನೂ ಕೂಡಿ ಗೋವಿಂದರಾಯನನ್ನು ಬಹಳವಾಗಿ ಕಾಡಿದರು. ಆದರೆ ಗೋವಿಂದರಾಯನು ಕುಶಲತೆಯಿಂದ ಕಾರ್ಯಮಾಡಿ ಒದಗಿದ ಸಕಲ ವಿಪತ್ತುಗ

* ಗೋವಿಂದರಾಯನಿಗೆ ಮೂವರು ಹೆಂಡಂದಿರು.

ಳಿಂದ ಪಾರಾದನು.

ಗೋವಿಂದರಾಯನಿಗೆ ತನ್ನ ಅನುಚರರು ಕೊಲೆಸುಲಿಗೆಗಳನ್ನು ಮಾಡುವುದು ಸೇರುತ್ತಿರಲಿಲ್ಲ. ತನ್ನ ಅನುಯಾಯಿಗಳು ಶೂರರೂ, ಸಾಹಸಿಗಳೂ ಆಗಿರಬೇಕೆಂದು ಅವನು ಇಚ್ಛಿಸುತ್ತಿದ್ದನು. ಆದರೆ ಅನುಚರರು ತಮ್ಮ ಈ ಗುಣಗಳನ್ನು ಕೆಟ್ಟಕೆಲಸಗಳಲ್ಲಿ ಉಪಯೋಗಿಸಕೂಡದೆಂದು ಅವನು ಸದಾ ಅನ್ನುತ್ತಿದ್ದನು. ಕಾರಣ ಅವನು ಮೊದಲು ಪ್ರಯತ್ನಪೂರ್ವಕವಾಗಿ ಅನುಯಾಯಿಗಳ ದುರ್ವ್ಯವಹಾರವನ್ನು ನಿಲ್ಲಿಸಿದನು. ಸೈನಿಕರು ಬೇರೆ ಹೋರೆಯಿಲ್ಲವಿರಲು ಕೊಲೆ-ಸುಲಿಗೆಗಳ ಕಡೆಗೆ ಮನಸ್ಸು ಹಾಕುತ್ತಿದ್ದರು. ಗೋವಿಂದರಾಯನು ತನ್ನ ಸೈನಿಕರಿಗೆ ಉದ್ಯೋಗವನ್ನು ಹಚ್ಚಿಕೊಡುವುದಕ್ಕೆ ಯತ್ನಿಸಿದನು.

ಗೋವಿಂದರಾಯನು ಮೃಗಯಾವಿಹಾರವನ್ನು ಬಹಳವಾಗಿ ಪ್ರೀತಿಸುತ್ತಿದ್ದನು. ಕಾರಣ ಇವನು ಸೈನಿಕರನ್ನು ಕಟ್ಟಿಕೊಂಡು ಮೇಲಿಂದ ಮೇಲೆ ಬೇಟೆಯಾಡಲಿಕ್ಕೆ ಹೋಗುತ್ತಿದ್ದನು. ಹಾಗು ಆ ವೇಳೆಯಲ್ಲಿ ತನ್ನ ದಂಡಾಳುಗಳಿಗೆ ಯುದ್ಧವಿದ್ಯೆಯ ಉಪಯುಕ್ತವಾದ ಶಿಕ್ಷಣವನ್ನು ಕೊಡುತ್ತಿದ್ದನು. ಒಮ್ಮೊಮ್ಮೆ ಗುಡ್ಡದ ಅಂಚಿನಲ್ಲಿರುವ ಸಂಸ್ಥಾನಿಕರ ಮೇಲೆ ಸಾಗಿಹೋಗಿ ಅವರೊಡನೆ ಯುದ್ಧಮಾಡುತ್ತಿದ್ದನು. ಜಯಶಾಲಿಯಾಗಿ ಅವರಿಂದ ಕಪ್ಪಕಾಣಿಕೆಗಳನ್ನು ಎತ್ತುತ್ತಿದ್ದನು.

ಗೋವಿಂದರಾಯನು ಶೂರನಾಗಿದ್ದಂತೆ ವಿದ್ಯಾವ್ಯಾಸಂಗಿಯೂ ಆಗಿದ್ದನು. ಇವನು ಸಂಸ್ಕೃತ, ಪಾರಸಿ ಹಾಗೂ ಪಂಜಾಬೀ ಭಾಷೆಗಳನ್ನು ಅಭ್ಯಾಸಿಸಿದ್ದನು. ಹಿಂದೂಧರ್ಮಶಾಸ್ತ್ರವನ್ನು ಮನಮುಟ್ಟಿ ಅಭ್ಯಾಸಮಾಡಿದ್ದನು. ಶತ್ರುಗಳಾದ ತುರ್ಕರ ಧರ್ಮಶಾಸ್ತ್ರವನ್ನು ಓದಿಕೊಳ್ಳಲಿಕ್ಕೆ ಸಹ ಇವನು ಹಿಂದೆಗೆದಿರಲಿಲ್ಲ ಪ್ರಾಚೀನಹಿಂದುಸ್ಥಾನದ ಗೌರವಮಯ ಇತಿಹಾಸವು ಇವನಿಗೆ ಹೆಚ್ಚು ಪ್ರಿಯಕರವಾಗಿತ್ತು. ಪ್ರಾಚೀನ ವೀರರ ವೀರರಸಪ್ರಧಾನವಾದ ಕಥೆಗಳನ್ನು ಕೇಳುತ್ತಲೇ ಇವನ ಹೃದ

ಯವು ಉಕ್ಕೇರಿ ಬಾಹುಗಳು ಸ್ಫುರಣಹೊಂದುತ್ತಿದ್ದವು.

ಗೋವಿಂದರಾಯನಿಗೆ ಸ್ವಜನಾಂಗದ ಹೀನಸ್ಥಿತಿಯನ್ನು ನೋಡಿ ಬಹಳ ಕಳವಳವಾಗುತ್ತಿತ್ತು. ಆ ಕಾಲದ ಪಂಜಾಬದ ಸ್ಥಿತಿಯು ಶೋಚನೀಯವಾಗಿತ್ತು. ಹಲವು ಜಾತಿಗಳು. ಹಲವು ಪಂಥಗಳು. ಪರಸ್ಪರರಲ್ಲಿ ವಿಶ್ವಾಸವಿರಲಿಲ್ಲ. ಆತ್ಮಕಲಹಾಸಕ್ತರು. ಅಲ್ಲಲ್ಲಿದ್ದ ಸಂಸ್ಥಾನಿಕರು ವಿಲಾಸದಲ್ಲಿ ಮೈಮ್ಮರೆದವರು. ತಮ್ಮ ಧನವನ್ನೆಲ್ಲ ವ್ಯಸನಕ್ಕಾಗಿ ವೆಚ್ಚಮಾಡತಕ್ಕವರು. ಪ್ರಜೆಗಳ ಹಿತದ ಕಡೆಗೆ ಕೊಂಚಮಾತ್ರವೂ ಲಕ್ಷ್ಯವಿರಿಸದವರು. ಇವರಿಂದ ಗೋವಿಂದರಾಯನಿಗೆ ಸಹಾಯವಾಗುವಂತಿರಲಿಲ್ಲವಿಷ್ಟೇ ಅಲ್ಲ; ವಿರೋಧವಾಗುವ ಸಂಭವವಿತ್ತು. ಮೇಲೆ ಮೊಗಲರ ಕಾಟವಂತೂ ಇದ್ದೇ ಇತ್ತು. ಮೊಗಲರು ವಿಲಾಸಾಸಕ್ತರಾದ ಸಂಸ್ಥಾನಿಕರನ್ನು ತಮ್ಮ ಕೈಯಲ್ಲಿಟ್ಟುಕೊಂಡು, ಹೊಸದಾಗಿ ಜಾಗ್ರತವಾಗುತ್ತಿರುವ ಶೀಖಸಮಾಜವನ್ನು ಮುರಿಬಡಿಯಬೇಕೆಂದು ಮಾಡಿಕೊಂಡಿದ್ದರು. ದೇಶದ ಪರಿಸ್ಥಿತಿಯು ಹೀಗೆ ವಿಪರೀತವಾಗಿದ್ದರೂ, ಗೋವಿಂದರಾಯನು ನಿರಾಶನಾಗಲಿಲ್ಲ. ವಿಶಿಷ್ಟಪ್ರಯತ್ನಮಾಡಿದರೆ, ಸಾಮಾನ್ಯಜನರಲ್ಲಿ ಜಾಗ್ರತೆಯನ್ನುಂಟುಮಾಡಿ, ಸ್ವಸಮಾಜ ಹಾಗು ಸ್ವದೇಶಗಳ ಉದ್ಧಾರ ಮಾಡಲಿಕ್ಕೆ ಶಕ್ಯವಿದೆಯೆಂದು ಅವನು ದೃಢವಾಗಿ ನಂಬಿದ್ದನು.

ಗೋವಿಂದರಾಯನು ಮೊಗಲರನ್ನು ಎದುರಿಸುವ ಶಕ್ತಿಯುಳ್ಳ ಶೀಖಸೈನ್ಯವನ್ನು ತಯಾರಿಸುವ ಸಿದ್ಧತಿಯಲ್ಲಿದ್ದನು. ಇವನು ಪ್ರತಿಯೊಬ್ಬ ಶಿಖನು ಶೂರನೂ ಸಾಹಸಿಯೂ ಆಗಿರಬೇಕೆಂದೂ, ಇದಕ್ಕೋಸುಗ ಯುದ್ಧಶಿಕ್ಷಣವನ್ನು ಹೊಂದಲೇಬೇಕೆಂದೂ ಪ್ರತಿಪಾದಿಸಿದನು. ಪ್ರತಿಷ್ಠಿತರೆಂದೆನಿಸಿಕೊಂಡ ಕೆಲವರು ಶೀಖರಿಗೆ ಗೋವಿಂದರಾಯನ ಈ ಮತವು ಸೇರಲಿಲ್ಲ. ಶೀಖರು ಧರ್ಮಪ್ರಾಣರಾಗಿರಬೇಕೆಂದೂ, ಯುದ್ಧವಿದ್ಯೆಯು ಶೀಖರಿಗೆ ಅನವಶ್ಯವೆಂದೂ ಇವರು ಅನ್ನುತ್ತಿದ್ದರು. ಗೋವಿಂದರಾಯನು ಇವರ ಮಾತಿನ ಕಡೆಗೆ ಲಕ್ಷ್ಯಗೊಡಲಿಲ್ಲ. ಇಂತಹರನ್ನು

ತನ್ನಿಂದ ದೂರವಿರಸಿದನು. ಹೀನಕುಲದಲ್ಲಿ ಹುಟ್ಟಿದ ಕೆಲವರನ್ನು ತನ್ನ ಧರ್ಮದಲ್ಲಿ ಸೇರಿಸಿಕೊಂಡು, ಅವರನ್ನು ತನ್ನ ವಿಶ್ವಾಸುಕ ಶಿಷ್ಯರನ್ನಾಗಿ ಮಾಡಿಕೊಂಡನು. ಹಾಗು ಅವರನ್ನು ತನ್ನ ಸೈನ್ಯದಲ್ಲಿ ಸೇರಿಸಿಕೊಂಡು, ಅವರಿಗೆ ಯುದ್ಧವಿದ್ಯೆಯನ್ನು ಕಲಿಸಹತ್ತಿದನು. ಶೀಖರೆಲ್ಲರು ಕ್ಷಾತ್ರ ಶಕ್ತಿಸಂಪನ್ನರಾಗಬೇಕೆಂಬ ತನ್ನ ಮತದ ಸಿದ್ಧಿಗಾಗಿ ಗೋವಿಂದರಾಯನು ಬಹು ದಿವಸಗಳ ವರೆಗೆ ಏಕಪ್ರಕಾರವಾಗಿ ಕಾರ್ಯವನ್ನು ನಡಿಸಿದ್ದನು.

ಗೋವಿಂದರಾಯನು ಶಕ್ತಿಯ ಉಪಾಸಕನೂ ಆಗಿದ್ದನು. ಇವನು ಇಷ್ಟಕಾರ್ಯದಲ್ಲಿ ಜಯದೊರೆಯಬೇಕೆಂಬ ಇಚ್ಛೆಯಿಂದ ನಯನಾ ದೇವಿಯ ಉಪಾಸನೆಯನ್ನು ನಡಿಸಿದ್ದನು. ಛತ್ರಪತಿಶಿವಾಜಿಯು ಅಂಬಾಭ ವಾನಿಯ ಪೂಜಕನಾಗಿದ್ದಂತೆಗೋವಿಂದರಾಯನು ನಯನಾದೇವಿಯಉಪಾ ಸಕನಾಗಿದ್ದನು. ಇವನು ತಾನು ಹೂಡಬೇಕೆಂದಿದ್ದ ಸ್ವಾತಂತ್ರ್ಯ ಸಂಗ್ರಾ ಮದಲ್ಲಿ ಪೂರ್ಣಜಯವು ದೊರೆಯಬೇಕಾದರೆ, ದೇವಿಯ ಅನುಗ್ರಹವಾಗು ವುದು ಅವಶ್ಯವೆಂದು ಭಾವಿಸಿದ್ದನು. ಇದಕ್ಕೋಸುಗ ಇವನು ಕಾಶಿ ಯಿಂದ ವೇದಪಾರಂಗತ ಬ್ರಾಹ್ಮಣಪುರೋಹಿತನನ್ನು ಕರೆಯಿಸಿ, ಅವನಿಂದ ದೇವಿಯ ಪೂಜೆಯನ್ನು ಮಾಡಿಸಹತ್ತಿದನು. ಈ ಪೂಜೆಯು ಬಹುಕಾಲ ನಡೆಯಿತು. ಕಡೆಗೆ ದೇವಿಯು ಪ್ರಸನ್ನಳಾಗಿ ಗೋವಿಂದರಾಯನ ಖಡ್ಗದ ಮೇಲೆ ಒಂದು ಚಿಹ್ನವನ್ನು ಅಂಕಿತಗೊಳಿಸಿದಳು. ಹಾಗು ದೇವಿಯ ಪ್ರೀತ್ಯರ್ಥವಾಗಿ ನಡೆದಿದ್ದ ಹೋಮದಿಂದ ಒಂದು ಕೊಡಲಿಯು ಹೊರಗೆ ಬಂದಿತು. ಗೋವಿಂದರಾಯನು ದೇವಿಯ ಈ ಪರಮಾನುಗ್ರಹವನ್ನು ಆದರದಿಂದ ಗ್ರಹಿಸಿ, ಹೋಮ ಹವನಾದಿ ಕಾರ್ಯಗಳನ್ನೂ, ದೇವಿಯ ಪೂಜಾಮಹೋತ್ಸವವನ್ನೂ ಸಾಂಗವಾಗಿ ನೆರವೇರಿಸಿದನು.

ಬಳಿಕ ಗೋವಿಂದರಾಯನು ಶೀಖಸಮಾಜದಲ್ಲಿ ರಾಷ್ಟ್ರೀಯ ಜಾಗ್ರತಿ ಯನ್ನುಂಟುಮಾಡುವುದಕ್ಕೆ ಒಂದು ಮಹೋತ್ಸವವನ್ನು ಹಮ್ಮಿದನು.ಇದ ಕ್ಕಾಗಿ ದೂರದೂರದಲ್ಲಿರುವ ಶೀಖರಿಗೆ ಸಹ ಆಮಂತ್ರಣಕೊಟ್ಟು ಅವರನ್ನು

ಬರಮಾಡಿಕೊಂಡನು. ಗೋವಿಂದರಾಯನ ಆಮಂತ್ರಣವನ್ನು ಸ್ವೀಕರಿಸಿ, ಅಸಂಖ್ಯ ಶೀಖರು ಈ ರಾಷ್ಟ್ರೀಯ ಮಹೋತ್ಸವದಲ್ಲಿ ನೇರಿದರು.

ಉತ್ಸವಾಂತ್ಯದಲ್ಲಿ ಶೀಖರ ಮಹಾಸಭೆಯು ಕೂಡಿತು. ಈ ಸಭೆಯಲ್ಲಿ ಗೋವಿಂದರಾಯನು ತನ್ನ ಅನುಯಾಯಿಗಳ ಪರೀಕ್ಷೆಗೋಸುಗ ಒಂದು ಯುಕ್ತಿಯನ್ನು ಹೂಡಿದನು. ಅದಾವುದೆಂದರೆ: ಗೋವಿಂದರಾಯನು ದೇವಿಯ ಅನುಗ್ರಹರೂಪವಾಗಿ ದೊರೆತಿದ್ದ ಕೊಡಲಿಯನ್ನು ಕೈಯಲ್ಲಿ ಹಿಡಕೊಂಡು ಸಭೆಯ ಮಧ್ಯಸ್ಥಳದಲ್ಲಿ ನಿಂತು ಉಚ್ಚ ಸ್ವರದಿಂದ ಇಂತೆಂದನು:"ಭಾವೀ ಸ್ವಾತಂತ್ರ್ಯಸಂಗ್ರಾಮದ ಪೂರ್ವ ತಯಾರಿಗೆ ಐವರು ಶೀಖರ ಪವಿತ್ರ ಶಿರಗಳು ಬೇಕಿವೆ! ಇವುಗಳನ್ನು ತಂದುಕೊಡಲಿಕ್ಕೆ ಯಾರು ಸಿದ್ಧರಿರುವಿರಿ? ನಿಮ್ಮ ಈ ಗುರುವನ್ನು ಸಂತುಷ್ಟಗೊಳಿಸುವುದಕ್ಕಾಗಿ ನಿಷ್ಕಾಮಬುದ್ಧಿಯಿಂದ ಮರಣವನ್ನಲಂಗಿಸಬೇಕು! ಹೀಗೆ ಆತ್ಮಯಜ್ಞ ಮಾಡಲಿಕ್ಕೆ ಎಷ್ಟು ಜನರು ಸಿದ್ಧರಿರುವಿರಿ?" ಸಭೆಯು ನಿಸ್ತಬ್ಧವಾಯಿತು. ಒಬ್ಬನೂ ಪಿಟ್ಟೆಂದು ಮಾತಾಡಲಿಲ್ಲ. ಈ ನೀರವತೆಯನ್ನು ನೋಡಿ ಗೋವಿಂದರಾಯನು ಪುನಃ "ಯಾರು ಸಿದ್ಧರಿರುವಿರಿ? ಏಳಿರಿ! ಹೀಗೆ ಬನ್ನಿರಿ!" ಎಂದು ಕೂಗಿದನು. ಆದರೆ ಯಾರೂ ಮುಂದೆ ಬರಲಿಲ್ಲ. ಪ್ರಮುಖರು ಒಬ್ಬನ ಮೋರೆಯನ್ನೊಬ್ಬನು ನೋಡುತ್ತ ಸುಮ್ಮನಿದ್ದರು. ಗೋವಿಂದರಾಯನು ಮತ್ತೆ ಅದೇ ಮಾತನ್ನುಚ್ಚರಿಸಿದನು. ಆದರೆ ಈ ಸಾರೆ ಸಭೆಯು ಮೊದಲಿನಂತೆ ಸ್ತಬ್ಧವಾಗಿ ಉಳಿಯಲಿಲ್ಲ. ಮೂಲೆಯಲ್ಲಿ ಕುಳಿತಿದ್ದ ಶೀಖತರುಣನೊಬ್ಬನು ತನ್ನ ಸ್ಥಳವನ್ನು ಬಿಟ್ಟೆದ್ದು, ಗೋವಿಂದರಾಯನ ಹತ್ತಿರ ಬರಹತ್ತಿದನು. ಕೂಡಿದ ಜನಸಮೂಹವು ವಿಸ್ಮಯಾತಿರೇಕದಿಂದ ನೋಡಹತ್ತಿತು. ಇವನು ಲಾಹೋರದ ನಿವಾಸಿಯಾಗಿದ್ದ ದಯಾರಾಮನು.

ದಯಾರಾಮನು ಗೋವಿಂದರಾಯನ ಬಳಿಗೆ ಬಂದು, ಪೊಡಮಟ್ಟನು. ಗೋವಿಂದರಾಯನು ಪ್ರೀತಿಯಿಂದ ಆಶೀರ್ವದಿಸಿದನು. ದಯಾ

ರಾಮನು ಎದ್ದು ವಿನಯದಿಂದ ನಿಂತುಕೊಂಡನು. ಗೋವಿಂದರಾಯನು ಅವನ ಧೈರ್ಯಕ್ಕೂ, ಗುರುಭಕ್ತಿಗೂ ಮೆಚ್ಚಿ, ಅವನನ್ನು ಕರೆದುಕೊಂಡು ತನ್ನ ಶಿಬಿರಕ್ಕೆ ಹೋದನು; ಅಲ್ಲಿ ಆ ತರುಣನನ್ನು ಕುಳ್ಳಿರಿಸಿ, ಪುನಃ ಸಭೆಗೆ ಬಂದನು.

ತಮ್ಮಲ್ಲಿಯ ಒಬ್ಬನು ಸ್ವಾರ್ಥತ್ಯಾಗ ಮಾಡಿ ಆತ್ಮಯಜ್ಞಕ್ಕೆ ಸಿದ್ಧನಾಗಿ ಗುರುವಿನ ಪರಮಾನುಗ್ರಹವನ್ನು ಪಡೆದುದನ್ನು ನೋಡಿ ಮತ್ತೆ ನಾಲ್ವರು ಗೋವಿಂದರಾಯನ ಆಹ್ವಾನಕ್ಕೆ ಸಿದ್ಧರಾಗಿ ಕುಳಿತಿದ್ದರು. ಗೋವಿಂದರಾಯನು ಸಭೆಗೆ ಬರುತ್ತಲೆ ಈ ನಾಲ್ವರು ಎದ್ದು ಬಂದು, ಗುರುವಿನ ಚರಣಕಮಲಗಳಿಗೆರಗಿದರು; ಹಾಗು ತಾವು ಗುರುವಿಗಾಗಿ ಶಿರವನ್ನು ಧಾರೆಯೆರೆದು ಕೊಡಲಿಕ್ಕೆ ಸಿದ್ಧರಿರುವೆವೆಂದು ಹೇಳಿದರು. ಗುರುವು ಆಶೀರ್ವದಿಸಿ, ಪ್ರೀತಿಯಿಂದ ಮೈಮೇಲೆ ಕೈಯಾಡಿಸಿದನು. ಇವರನ್ನು ಕರಕೊಂಡು ಶಿಬಿರದ ಕಡೆಗೆ ನಡೆದನು. ಸಭಾಭಂಗವಾಯಿತು.

ಒಳಿಕ ದೀಕ್ಷೆಯ ಕಾರ್ಯವು ನಡೆಯಿತು. ಶೀಖರು ಈ ದೀಕ್ಷಾಕಾರ್ಯಕ್ಕೆ ಪಹಲ ಅಥವಾ ಅಮೃತೋತ್ಸವವೆನ್ನುವರು. ಗೋವಿಂದಸಿಂಹನು ಕೊಡವನ್ನು ತಕ್ಕೊಂಡು ಹೋಗಿ, ಬಳಿಯಲ್ಲಿಯ ನದಿಯಿಂದ ನೀರುತಂದನು. ಗುರುಪತ್ನಿಯು ಪಂಚಪಕ್ವಾನ್ನಗಳ ಅಡುಗೆಯನ್ನು ಮಾಡಿತಂದಳು. ಗೋವಿಂದರಾಯನು ದೀಕ್ಷೆಗೊಟ್ಟು ಐಯ್ವರನ್ನೂ ತನ್ನ ಮುಖ್ಯಶಿಷ್ಯರನ್ನಾಗಿಮಾಡಿಕೊಂಡು, ಈ ಐಯ್ವರ ಗುಂಪಿಗೆ 'ಖಾಲಸಾ' ಎಂಬ ಹೆಸರನ್ನು ಕೊಟ್ಟನು. ಹಾಗು ತಾನು ಅವರಿಂದ ದೀಕ್ಷೆಯನ್ನು ಹೊಂದಿದನು. ದೀಕ್ಷೆಯ ತರುವಾಯದಲ್ಲಿ ಶಿಷ್ಯರು ಗುರುವಿನ ಜಯಘೋಷಮಾಡಿದರು.

ಈ ದೀಕ್ಷೆಯ ಸ್ಥಳವು ಕೇಶಗಡವೆಂದು ಪರಿಚಿತವಾಗಿದೆ. ಈ ಗ್ರಾಮವು ಆನಂದಪುರದ ಸನಿಯದಲ್ಲಿದೆ. ಖಾಲಸಾ ಎಂದರೆ ಶೀಖರ ಧಾರ್ಮಿಕ ಅಧಿಕಾರದ ಪ್ರಾತಿನಿಧಿಕ ಸಂಸ್ಥೆಯು. ಖಾಲಸಾ ಸ್ಥಾಪನೆ

ಯಾಗುವ ಪೂರ್ವದಲ್ಲಿ ಶೀಖರು ತಮ್ಮ ಹೆಸರಿನ ಮುಂದೆ 'ಸಿಂಹ' ಎಂಬ ಉಪಾಧಿಯನ್ನು ಹಚ್ಚಿಕೊಳ್ಳುತ್ತಿರಲಿಲ್ಲ. ಆದರೆ ಖಾಲಸಾ ಸ್ಥಾಪನೆಯಾದ ಬಳಿಕ ಗೋವಿಂದರಾಯನು ಪ್ರತಿಯೊಬ್ಬ ಶೀಖನು ತನ್ನ ಹೆಸರಿನ ಮುಂದೆ ಸಿಂಹ ಎಂಬದನ್ನಿಟ್ಟುಕೊಳ್ಳಬೇಕೆಂದು ಗೊತ್ತುಮಾಡಿದನು. ಇದು ವರೆಗೆ ಗೋವಿಂದರಾಯನಾಗಿದ್ದ ಗುರುವು ಇಂದಿನಿಂದ ಗೋವಿಂದಸಿಂಹ ನಾದನು. ಈ ಸಮಯದಲ್ಲಿ ಗೋವಿಂದಸಿಂಹನು ಖಾಲಸಾವನ್ನು ಕುರಿತು ಹೇಳಿದ್ದೇನಂದರೆ:"ಗುರುವಿನಿಂದ ಖಾಲಸಾ ಉದ್ಭವಿಸಿತು. ಖಾಲಸಾ ದಿಂದ ಗುರುವು ಹುಟ್ಟಿದನು. ಇವೆರಡು ಅಭಿನ್ನ ವಸ್ತುಗಳು. ಖಾಲಸಾ ಗುರುವಿನ ರಕ್ಷಣೆ ಮಾಡಬೇಕು. ಗುರುವು ಖಾಲಸಾದ ರಕ್ಷಣೆ ಮಾಡ ಬೇಕು. ಖಾಲಸಾ ಗುರುವಿನ ದಾಸತ್ವವನ್ನು ಕೈಗೊಳ್ಳಬೇಕು. ಗುರುವು ಖಾಲಸಾದ ಸೇವೆಯನ್ನು ಮಾಡಬೇಕು. ಖಾಲಸಾದ ಐಯ್ವರು ಸಮ ವೇತರಾದಲ್ಲಿ ಗುರುವೂ ಹಾಜರಿರುವನು. ಶೀಖಸಮಾಜವು ಗುರುವಿಗೆ ಸಲ್ಲಿಸುತ್ತಿರುವ ಮಾನವನ್ನು ಖಾಲಸಾಕ್ಕೂ ಕೊಡುವುದು."

ಬಳಿಕ ಗೋವಿಂದಸಿಂಹನು ತನ್ನ ಶಿಷ್ಯರಿಗೆ ಉಪದೇಶಿಸಿದ್ದೇನಂ ದರೆ:"ಶೀಖರು ಅನಾದ್ಯನಂತನೂ, ಜನನ-ಮರಣವಿರಹಿತನೂ ಆದ ಒಬ್ಬ ಪರಮಾತ್ಮನನ್ನು ಪೂಜಿಸಬೇಕು. ಧರ್ಮಸ್ಥಾಪಕನಾದ ನಾನಕನನ್ನೂ, ಧರ್ಮವನ್ನು ಹಬ್ಬುಗೊಳಿಸಿದ ಇತರ ಗುರುಗಳನ್ನೂ ಆದರದಿಂದ ಸ್ಮರಿಸ ಬೇಕು. ಶೀಖರ ಧಾರ್ಮಿಕ ಸಾಂಕೇತಿಕ ಶಬ್ದವು 'ವಾಹಿಗುರು'. 'ಗ್ರಂಥ' ವೊಂದನ್ನುಳಿದು ಉಳಿದ ಯಾವ ದೃಶ್ಯವಸ್ತುವನ್ನೂ ಪೂಜಿಸಕೂಡದು. ಗುರುಗ್ರಂಥವನ್ನು ಸದಾ ಪಠಿಸಬೇಕು. ಹಾಗು ಗ್ರಂಥವು ಗುರುಸ್ವರೂಪ ವೆಂದು ತಿಳಿಯಬೇಕು. ಶೀಖರೆಲ್ಲರೂ ಬಂಧುಭಾವದಿಂದಿರಬೇಕು. ಒಬ್ಬ ರನ್ನೊಬ್ಬರು ದ್ವೇಷಿಸಕೂಡದು. ಆತ್ಮಕಲಹಕ್ಕೆ ಎಂದೂ ಪ್ರವರ್ತಿಸ ಲಾಗದು. ಶೀಖರು ದೃಢವ್ರತರೂ, ಪ್ರಿಯಭಾಷಿಗಳೂ, ಸತ್ಯವಂತರೂ ಆಗಿರಬೇಕು. ಪರರೊಡನೆ ವಿನಯದಿಂದ ವರ್ತಿಸಬೇಕು. ಪರನಾರಿಯ

ರನ್ನು ಮಾತೆಯರಂತೆ ಭಾವಿಸಬೇಕು. ಸ್ತ್ರೀಯರ ಮಾನರಕ್ಷಣೆಯು ಪ್ರತಿಯೊಬ್ಬನ ಕರ್ತವ್ಯವಾಗಿದೆಯೆಂದು ಭಾವಿಸಬೇಕು. ನಿಷಿದ್ಧಮಾಂಸವನ್ನು ತಿನ್ನಕೂಡದು. ತಂಬಾಕವನ್ನೂ, ಗಾಂಜೆಯನ್ನೂ ಸೇವಿಸಬಾರದು. ಯವನರ ಅನ್ನವನ್ನು ಉಣ್ಣಕೂಡದು. ಪಂಚ ಕಕ್ಕಾ (ಆದಿಕಕಾರವುಳ್ಳ) ಅಂದರೆ ಕೇಶ, ಕೃಪಾಣ (ಆಯುಧ) ಕಾಂಗಾ (ಹಣಿಗೆ) ಕಚ್ಛ (ಕಚ್ಚೆ) ಕಡಾ (ಲೋಹದ ಬಳೆ) ಗಳನ್ನು ಸದಾ ಧರಿಸಬೇಕು. ಅರ್ಧ ಅಥವಾ ವಿಕೃತ ಹೆಸರಿನಿಂದ ಯಾರನ್ನೂ ಕರೆಯಕೂಡದು. ಬಕ್ಕನೆತ್ತಿಯಿಂದಿರಬಾರದು. ಯಾವಾಗಲೂ ಶಿರಸ್ತ್ರಾಣವನ್ನು ವ್ಯವಹರಿಸಬೇಕು. ಪ್ರತಿಯೊಬ್ಬ ಶೀಖನು ಧರ್ಮ ಹಾಗು ದೇಶರಕ್ಷಣೆಗೂ, ದರಿದ್ರರ ದುಃಖನಿವಾರಣೆಗೂ ಜನ್ಮತಾಳಿರುವೆನೆಂದು ಸದಾ ಭಾವಿಸುತ್ತಿರಬೇಕು. ಮನಸ್ಸನ್ನು ಎಂದೂ ನಿರಾಶೆಗೊಳಗುಮಾಡಬಾರದು. ಧೈರ್ಯವನ್ನು ಬಿಡಕೂಡದು. ತುರ್ಕರನ್ನು ಎಂದೂ ನಂಬಲಾಗದು. ಆತ್ಮವಿಶ್ವಾಸಿಗಳಾಗಿರಬೇಕು. ಪ್ರತಿಯೊಬ್ಬನು ತನ್ನ ಹೆಸರಿನ ಮುಂದೆ ತನ್ನ ಕ್ಷಾತ್ರಶಕ್ತಿಯ ದ್ಯೋತಕವಾಗಿ ಸಿಂಹ ಎಂಬ ಉಪಾಧಿಯನ್ನು ಹಚ್ಚಿಕೊಳ್ಳಬೇಕು. ಶಸ್ತ್ರಾಸ್ತ್ರಗಳನ್ನು ಧರಿಸಲಿಕ್ಕೆ ಪ್ರತಿಯೊಬ್ಬನೂ ಅಭ್ಯಸ್ತನಾಗಿರಬೇಕು. ಶೀಖರು ಯುದ್ಧಮಾಡುವ ಪ್ರಸಂಗವೊದಗಿದಾಗ ಎಂದೂ ಹಿಂದೆಗೆಯಕೂಡದು. ಯುದ್ಧದಲ್ಲಿ ಧೈರ್ಯದಿಂದ ಮುಂದೆ ಸಾಗಿ, ಸಾಹಸದ ಕೆಲಸವನ್ನು ಕೈಗೊಂಡು ಕಡೆಹಾಯಿಸಿ, ಜಯಶಾಲಿಗಳಾಗಬೇಕು. ಒಂದುವೇಳೆ ಪರಾಜಯ ಹೊಂದಿದರೂ ನಿರಾಶರಾಗದೆ, ಪುನಃ ಸಿದ್ಧತೆಮಾಡಿಕೊಂಡು ಜಯಸಂಪಾದನೆಗೆ ಯತ್ನಿಸಬೇಕು. ಹೀಗೆ ನಿಧಾರವುಳ್ಳವನೇ ಶೀಖಸಮಾಜದಲ್ಲಿರಲಿಕ್ಕೆ ತಕ್ಕವನು. ಹೇಡಿಗಳಿಗೆ ಶೀಖಸಮಾಜದಲ್ಲಿ ಸ್ಥಳವಿಲ್ಲ. ದೇಶದ್ರೋಹಿಗಳಿಗೂ, ಗುರುದ್ರೋಹಿಗಳಿಗೂ, ಸಮಾಜದ್ರೋಹಿಗಳಿಗೂ ಶೀಖಧರ್ಮವು ಕ್ಷಣಸಹ ಸ್ಥಳ ಕೊಡದು. ಇಂತಹ ಪಾಪಿಷ್ಠರು ಶೀಖಸಮಾಜದ ಬಹಿರ್ಭೂತರು!''

# ಅಧ್ಯಾಯ ೯—ಔರಂಗಜೇಬ.

ಈ ಜಗತ್ತಿನಲ್ಲಿ ಉದ್ಭವಿಸಬಹುದಿದ್ದ ಹಲವು ವಿಧದ ವಿರೋಧಗಳಿಗೆ ಪ್ರೇಮವು ಪರಮೌಷಧವು. ಬಲಿಷ್ಠನು ತನ್ನ ಶಾರೀರಿಕ ಬಲವನ್ನು ಸಾಧನವಾಗಿಟ್ಟುಕೊಳ್ಳದೆ, ಪ್ರೇಮದಿಂದ ದುರ್ಬಲನನ್ನು ಪೋಷಿಸಬಯಸಿದರೆ, ಆ ದುರ್ಬಲನು ಸಹಜವಾಗಿ ಸಬಲನ ವಶವರ್ತಿಯಾಗುವನು. ಒಂದುವೇಳೆ ಹೀಗೆ ಮಾಡದೆ ಶಕ್ತಿಶಾಲಿಯು ತನ್ನ ಸಾಮರ್ಥ್ಯದ ಗರುವಿಕೆಯಿಂದ ನಿರ್ಬಲನನ್ನು ನಾಶಗೊಳಿಸಲಿಕ್ಕೆ ಅಥವಾ ಅತ್ಯಾಚಾರದಿಂದ ದುಃಖಗೊಳಿಸಲಿಕ್ಕೆ ಮುಂದುವರಿದರೆ, ಆ ದುರ್ಬಲನು ಕೈವಶವಾಗದೆ ವಿರೋಧಿಯಾಗಿ ಪ್ರತೀಕಾರಕ್ಕೆ ಪ್ರವರ್ತಿಸುವನು. ಈ ಪ್ರತೀಕಾರದಿಂದ ಶಕ್ತಿವಂತನಿಗೆ ವಿಶೇಷಪರಿಣಾಮವಾಗದಿದ್ದರೂ, ಶಕ್ತಿಹೀನನು ಶೋಕಕ್ರೋಧಾದಿಗಳಿಂದ ಕ್ಷುಬ್ಧನಾಗಿ ಹೋಗುವನು. ಹಾಗು ತನ್ನ ಸುಖದ ವಿಷಯದಲ್ಲಿ ನಿರಾಶನಾಗುತ್ತ ಹೋಗುವನು. ಹೀಗೆ ನಿರಾಶರಾಗುವವರ ಪರಿಣಾಮವು ಎರಡು ವಿಧವಾಗಿ ಆಗುವುದು: ಕೆಲವರು ಅದೃಷ್ಟವಾದಿಗಳಾಗಿ ಕ್ರಮೇಣ ಶಾಂತರಾಗುತ್ತ ಹೋಗುವರು. ಇವರಿಗೆ ಶೋಕವೇ ಸಾಧನವು. ಇನ್ನು ಕೆಲವರು ದೈವವಾದದಲ್ಲಿ ವಿಶ್ವಾಸವಿಲ್ಲದವರಿರುವರು. ಇಂಥವರು ಕ್ರೋಧವನ್ನು ಗೆಲ್ಲಲಾರದವರಾಗಿ ಅಸಮಸಾಹಸಿಗಳಾಗುವರು. ಕುಟಿಲತೆಯಿಂದಾದರೂ ಪ್ರತೀಕಾರಕ್ಕೆ ತೊಡಗುವರು. ಇವರು ಮರಣಭಯವನ್ನು ತ್ಯಜಿಸುವರು. ಎಂತಹ ಘೋರಕೃತ್ಯಗಳನ್ನಾಚರಿಸಲಿಕ್ಕೂ ಹಿಂದೆಗೆಯರು. ಇವರಿಂದ ಆ ಪ್ರಬಲ ವೈರಿಯು ಸಮೂಲವಾಗಿಯಾಗಲಿ ಕೆಲವಂಶದಿಂದಾಗಲಿ ನಾಶಗೊಳ್ಳಲೇ ಬೇಕಾಗುವುದು.

ಮೊಗಲಬಾದಶಹರಲ್ಲಿ ಹೆಸರಾದ ಅಕಬರನು ಈ ತತ್ವವನ್ನು ತಿಳಿದವನಾದುದರಿಂದಲೇ ಅವನು ಹಿಂದೂ ಮುಸಲ್ಮಾನರ ಐಕ್ಯಕ್ಕೆ ಯತ್ನಿಸಿ

ದನು. ವಿರೋಧಿಗಳನ್ನು ಸ್ನೇಹಬಲದಿಂದ ಕೈವಶಮಾಡಿಕೊಳ್ಳಲಿಕ್ಕೆ ಪ್ರಯತ್ನಿಸಿ ಕಾರ್ಯಸಾಧಕನಾದನು. ಅವನ ಸೌಮ್ಯವ್ಯವಹಾರದಿಂದ ಹಿಂದುಗಳಲ್ಲಿಯ ಬಹುಜನರು ಮೊಗಲರೊಡನೆ ವಿರೋಧ ಬಳಿಸದೆ, ಸ್ನೇಹಿತರಾಗಿ, ಮೊಗಲಸಾಮ್ರಾಜ್ಯದ ಗುಣಗಾಯನವನ್ನು ಮಾಡಹತ್ತಿದರು. ಕೆಲವರು ತಮ್ಮ ಶೌರ್ಯಸಾಹಸಾದಿ ಗುಣಗಳನ್ನು ಮೊಗಲಸಾಮ್ರಾಜ್ಯದ ಉನ್ನತಿಯ ಸಲುವಾಗಿ ಸೂರೆಗೊಳ್ಳಲಿಕ್ಕೂ ಹಿಂದುಮುಂದೆ ನೋಡಲಿಲ್ಲ. ಹಿಂದುಗಳಲ್ಲಿಯ ಹಲವರು ಅಕಬರನ ಈ ಮೋಹಿನೀ ಮಂತ್ರಕ್ಕೆ ಮರುಳಾಗದಿದ್ದರೂ ಬಹುಜನರು ಈ ಮಂತ್ರಕ್ಕೆ ಮೋಸ ಹೋದರೆಂಬುದರಲ್ಲಿ ಸಂದೇಹವಿಲ್ಲ. ಯಾಕೆಂದರೆ ಯಾವುದೇ ಸಮಾಜದಲ್ಲಾಗಲಿ ತಾತ್ವಿಕರು ಕಡಿಮೆಯಾಗಿದ್ದು, ತತ್ವನಿಷ್ಠೆಗೋಸುಗ ಆತ್ಮಯಜ್ಞಕ್ಕೆ ಸಿದ್ಧರಿರುವವರ ಸಂಖ್ಯೆಯು ಅತ್ಯಲ್ಪವಿರುವುದು. ಆದುದರಿಂದ ವಿಜಾತೀಯ ರಾಜಪುರುಷರು ಪ್ರಜೆಗಳನ್ನು ಒಲಿಸಿಕೊಳ್ಳುವ ಸಾಧನಗಳಲ್ಲಿ ಈ ತರದ ಮೋಹಿನೀ ಮಂತ್ರವೇ ಉತ್ತಮವಾದುದೆಂದು ಹೇಳಲಿಕ್ಕೆ ಬಾಧೆಯಿಲ್ಲದಾಗಿದೆ.

ಅಕಬರನು ತೋರಿಸಿಕೊಟ್ಟ ದಾರಿಯಲ್ಲಿಯೆ ಮುಂದಿನ ಬಾದಶಹರಾದ ಜಹಾಂಗೀರನೂ ಶಹಾಜಹಾನನೂ ನಡೆದು ಹೋದರು. ಇವರಾದರೂ ಹಿಂದುಗಳ ಸಂಗಡ ವಿರೋಧವನ್ನು ಬಳಿಸದೆ, ಅಕಬರನ ಕಾಲದಲ್ಲಿ ಉಂಟಾಗಿದ್ದ ಸ್ನೇಹದ ಬಳಿಕೆಯನ್ನು ಹಾಗೆಯೆ ಮುಂದೆ ಸಾಗಿಸಿದರು. ಕಾರಣ ಈ ಇಬ್ಬರು ಬಾದಶಹರ ಆಳಿಕೆಯು ಶಾಂತತೆಯಲ್ಲಿ ಕಳೆದು ಹೋಯಿತು. ಆದರೆ ತರುವಾಯ ಬಂದ ಔರಂಗಜೇಬನು ಪ್ರಾಚೀನ ಬಾದಶಹರು ಹಾಕಿಕೊಟ್ಟ ಕಿತ್ತೆಯನ್ನು ತೀಡಲಿಕ್ಕೆ ಮನಸ್ಸು ಮಾಡಲಿಲ್ಲ. ಧರ್ಮಾಂಧನೂ, ಸ್ವಶಕ್ತಿಯ ವಿಷಯದಲ್ಲಿ ಹೆಚ್ಚಾದ ಅಭಿಮಾನವುಳ್ಳವನೂ ಆದ ಇವನು ತನ್ನ ಬಾಹುಬಲದಿಂದ ಬೇಕಾದ ಕೆಲಸವನ್ನು ಸಾಧಿಸಿಕೊಳ್ಳಬಹುದೆಂದು ತಿಳಿದಿದ್ದನು.

ತುರ್ಕರು ತಮ್ಮ ಬಾಹುಬಲದಿಂದ ಈ ದೇಶವನ್ನು ಗೆದ್ದು

ಕೊಂಡುದು ನಿಜ. ಆದರೆ ರಾಜ್ಯವನ್ನು ಗಳಿಸುವುದೂ, ಸಂರಕ್ಷಿಸುವುದೂ ಒಂದೇ ವಿಧದ ಕೆಲಸವಲ್ಲ. ದೇಶವನ್ನು ಗೆದ್ದುಕೊಳ್ಳಲಿಕ್ಕೆ ಶಾರೀರಬಲವು ಅವಶ್ಯವಾಗಿ ಬೇಕು ಆದರೆ ದೇಶವನ್ನು ಆಳಲಿಕ್ಕೆ ಶಾರೀರಿಕ ಬಲಕ್ಕಿಂತಲೂ ಪ್ರೇಮದ ವ್ಯವಹಾರವು ಹೆಚ್ಚು ಉಪಯುಕ್ತವಾದದ್ದು. ವಿಜಾತೀಯ ಅರಸರು ತಮ್ಮ ಉತ್ತಮಗುಣಗಳಿಂದ ಉದಾತ್ತ ಕೃತ್ಯಗಳಿಂದ ಪರಕೀಯ ಪ್ರಜೆಗಳ ಮೇಲೆ ತಮ್ಮ ವರ್ಚಸ್ಸನ್ನು ಕೂರಿಸಬೇಕು. ಇಲ್ಲವಾದರೆ ಬಾಹುಬಲದಿಂದ ಸಂಪಾದಿಸಿದ ಜಯದ ಉತ್ತಮ ಫಲವು ಸಿಗದೆ ಹೋಗುವುದು. ಯಾಕೆಂದರೆ, ರಾಜ್ಯದ ಸುರಕ್ಷಿತೆಯು ಸಾಮಾನ್ಯ ಪ್ರಜೆಗಳ ಇಚ್ಛಾಧೀನವು. ಪ್ರಜೆಗಳೆಲ್ಲರೂ ಒಕ್ಕಟ್ಟಾಗಿ ಒಂದೇ ಒಂದು ಧ್ಯೇಯವನ್ನಿಟ್ಟುಕೊಂಡು ವರ್ತಿಸಿದರೆ, ಎಂತಹ ರಾಜನನ್ನಾದರೂ ಹಣ್ಣಿಗೆ ತರಬಲ್ಲರು. ರಾಜ್ಯಕ್ರಾಂತಿಯನ್ನುಂಟುಮಾಡಬಲ್ಲರು.

ನಮ್ಮ ಹಿಂದುಸ್ಥಾನವು ರಾಜರ ರಾಜ್ಯದಾಡಳಿತಕ್ಕೆ ಬಹು ಅನುಕೂಲವಾದ ಕ್ಷೇತ್ರವು; ಯಾಕೆಂದರೆ, ಭಾರತೀಯರು ಅರಸನು ದೇವಾಂಶಸಂಭೂತನೆಂದು ಭಾವಿಸಿ, ಅವನಲ್ಲಿ ಭಕ್ತಿವಿಶ್ವಾಸಗಳನ್ನಿರಿಸಿದವರು. ಅರಸನು ಯಾವುದೇ ಧರ್ಮದವನಾಗಿರಲಿ, ಯಾವುದೇ ದೇಶದವನಾಗಿರಲಿ, ಭಾರತೀಯರು ತಮ್ಮ ಪಾಲಿಗೆ ಬಂದ ಅರಸನಲ್ಲಿ ಭಕ್ತಿಯನ್ನಿಟ್ಟು, ನಂಬುಗೆಯಿಂದ ನಡೆಯುತಕ್ಕವರು. ಹಾಗು ಇವರು ಶಾಂತತಾಪ್ರಿಯರು. ದೈವವಾದಿಗಳು. ಇಂತಹ ಪ್ರಜೆಗಳನ್ನು ಆಳುವುದು ಸುಲಭವಾದ ಕೆಲಸ. ಇಂಥವರ ಪ್ರೀತಿಯನ್ನು ಸಂಪಾದಿಸುವುದೂ, ಸಂಪಾದಿಸಿದ ಪ್ರೀತಿಯನ್ನು ಬಹುಕಾಲ ಕಾಯ್ದುಕೊಳ್ಳುವುದೂ ಅರಸರಿಗೆ ಕಠಿಣವೆನಿಸದು. ಆದರೆ ರಾಜನು ಈ ಅನುಕೂಲ ಪರಿಸ್ಥಿತಿಯ ದುರುಪಯೋಗ ಮಾಡಿಕೊಳ್ಳಕೂಡದು. ಪ್ರಜೆಗಳ ಶಾಂತತಾಪ್ರಿಯತೆಯನ್ನು ತಿಳಿದು, ಅವರ ಮೇಲೆ ಸಿಕ್ಕಸಿಕ್ಕಂತೆ ಬಲಾತ್ಕಾರ ಮಾಡಬಯಿಸುವುದು ರಾಜಧರ್ಮಕ್ಕೆ ವಿರುದ್ಧವಾದುದು. ಯಾವನೊಬ್ಬ ಗರ್ವಾಂಧ ರಾಜನು ಹೀಗೆ ಮಾಡಿದರೆ,

ಅವನು ತನಗೂ ತನ್ನ ರಾಜವಂಶಕ್ಕೂ ಅಳಿಗಾಲವನ್ನುಂಟು ಮಾಡಿಕೊಳ್ಳುವುದರಲ್ಲಿ ಸಂಶಯವಿಲ್ಲ. ಸಾಮ್ರಾಟ ಔರಂಗಜೇಬನು ಹಿಂದೂಪ್ರಜೆಗಳ ಶಾಂತತಾಪ್ರಿಯತೆಯ ದುರುಪಯೋಗ ಮಾಡಿಕೊಂಡವರಲ್ಲಿ ಒಬ್ಬನಾಗಿದ್ದಾನೆ. ಇವನು ಧರ್ಮದ ಹೆಸರಿನಿಂದ ಹಿಂದುಗಳ ಮೇಲೆ ಹಲವು ರೀತಿಗಳಿಂದ ಬಲಾತ್ಕಾರ ಮಾಡಹತ್ತಿದನು. ಇವನ ಭಯಂಕರ ಅತ್ಯಾಚಾರದ ಕಾರ್ಯಗಳಿಂದ ಹಿಂದುಗಳು ತತ್ತರಿಸಹತ್ತಿದರು. ತಮ್ಮ ಶಾಂ-ತತಾ ಪ್ರಿಯತೆಗೆ ಜಲಾಂಜಲಿಯಿತ್ತು ಪ್ರತಿಕಾರಕ್ಕೆ ಪ್ರವರ್ತಿಸಬೇಕಾಯಿತು. ಹೀಗಾಗಿ ಮೊಗಲರಾಜ್ಯದ ವಿಷಯದಲ್ಲಿ ಬಾಬರನ ಕಾಲದಲ್ಲಿ ಜನಿಸಿದ ಹಾಗು ಅಕಬರನ ಕಾಲದಲ್ಲಿ ಹೆಚ್ಚಿದ ತಮ್ಮ ರಾಜಭಕ್ತಿಯನ್ನು ಹಿಂದುಗಳು ಬಿಟ್ಟುಕೊಡಬೇಕಾಯಿತು. ಮೊಗಲರ ವಿರುದ್ಧ ನಿಂತು ಹೋರಾಡಿ, ಹಿಂದುಸ್ಥಾನದಲ್ಲಿ ಮತ್ತೆ ಹಿಂದೂಸಾರ್ವಭೌಮನನ್ನು ಸ್ಥಾಪಿಸುವ ಎತ್ತುಗಡೆಯನ್ನು ಮಾಡಿಕೊಳ್ಳಬೇಕಾಯಿತು.

ಔರಂಗಜೇಬನು ಸ್ವತಃ ಕಠೋರ ರೀತಿಯಿಂದ ಕಾಲಯಾಪನೆ ಮಾಡುವವನಾಗಿದ್ದನು. ಭರತಖಂಡದ ಸಾಮ್ರಾಟನಾದ ಇವನು ವಿಷಯೋಪಭೋಗಕ್ಕೆ ಆಶಿಸಿದವನಲ್ಲ. ಆರಾಮ-ವಿರಾಮ, ವಸ್ತ್ರ-ಪ್ರಾವರಣ, ಹಾಗು ವೇಷಭೂಷಣಗಳ ಆಡಂಬರವು ಇವನಿಗೆ ಬೇಕಿರಲಿಲ್ಲ. ಇವನು ಸಂನ್ಯಾಸಿಯಂತೆ ಅಲ್ಪಸಂತುಷ್ಟನಾಗಿಬಡವನಂತೆ ಜೀವಿಸುತ್ತಿದ್ದನು. ಆದರೆ ಈ ಗುಣಕ್ಕೆ ಮನುಷ್ಯ ಸಹಜವಾದ ದಯೆಯು ಜೋಡಿರಲಿಲ್ಲ. ಇವನು ಬಾಹ್ಯತಃ ಸಂನ್ಯಾಸಿಯಾಗಿದ್ದನೇಹೊರತು ಅಂತರಂಗತಃ ವಿರಾಗಿಯಾಗಿರಲಿಲ್ಲ. ಸಂನ್ಯಾಸಿಗಳಿಗೆ ಅವಶ್ಯವಾಗಿದ್ದ ಪರದುಃಖಕಾತರತೆಯೂ ದಯೆಯೂ ಇವನಲ್ಲಿ ಲೇಶಮಾತ್ರವೂ ಇರಲಿಲ್ಲ. ಇವನಿಗೆ ತಾನೊಬ್ಬನೇ ಶ್ರೀಮಂತನೂ, ಬಲಶಾಲಿಯೂ, ಅಧಿಕಾರಸಂಪನ್ನನೂ ಆಗಿರಬೇಕೆಂಬ ಆಶೆ. ಹೆರವರ ಗರಿಮೆಯನ್ನು ನೋಡಿ ಸಹಿಸುವುದಕ್ಕೆ ಇವನಿಂದಾಗುತ್ತಿರಲಿಲ್ಲ. ಅನ್ಯರು ಯಾವದೇ ರೀತಿಯಿಂದ ಮುಂದೆ ಬರಬಯಿಸಿದರೂ, ಈ ಸಾಮ್ರಾ

ಟನು ಶಕ್ಯವಿರುವ ಉಪಾಯುಗಳನ್ನವಲಂಬಿಸಿ ಅವರನ್ನು ಹಿಂದೂಡದೆ ಬಿಡುತ್ತಿದ್ದಿಲ್ಲ. ಈ ಕುಟಿಲ ನರಪತಿಯು ಪರಕೀಯರ ವಿಷಯದಲ್ಲಿ ತುಂಬ ಮತ್ಸರಗ್ರಸ್ತನು. ಇವನಿಗೆ ಯಾರ ಮೇಲೆಯೂ ವಿಶ್ವಾಸವಿರಲಿಲ್ಲ. ಯಾವನೊಬ್ಬನನ್ನು ಏರಗೊಟ್ಟರೆ, ಅವನು ಕ್ರಮಶಃ ಬಲಿಷ್ಠನಾಗುತ್ತ ನಡೆದು, ಕಡೆಗೆ ತನ್ನ ಸಿಂಹಾಸನವನ್ನೆಲ್ಲಿ ಎತ್ತಿ ಹಾಕುವನೋ ಎಂಬ ಭಯವು ಇವನಿಗೆ ಉಂಟಾಗುತ್ತಿತ್ತು. ಕಾರಣ ಇವನು ತನ್ನ ಸೇವಕರ ಉನ್ನತಿಯನ್ನು ಸಹ ಸಹಿಸುತ್ತಿರಲಿಲ್ಲ. ಅಂತೆಯೇ ಇವನು ಮಾರವಾಡದ ಜಸವಂತಸಿಂಗ, ಅಂಬರದ ಜಯಸಿಂಹ, ಹಾಗು ಸೇನಾಪತಿ ಮಿರಜುಮ್ಲಾ ಮೊದಲಾದವರನ್ನು ಮುರಿಬಡಿದನು.

ಅಕಬರನಂತೆ ಔರಂಗಜೇಬನಿಗೆ ದೂರದೃಷ್ಟಿಯಿರಲಿಲ್ಲ. ಒಂದು ವೇಳೆ ಔರಂಗಜೇಬನು ಅಕಬರನಂತೆ ದೂರದರ್ಶಿಯಾಗಿದ್ದರೆ, ಹಿಂದುಸ್ಥಾನದ ಅರ್ವಾಚೀನ ಇತಿಹಾಸವು ಅನ್ಯ ವಿಧವಾಗಿ ಬರೆಯಲ್ಪಡುತ್ತಿತ್ತು. ಆದರೆ ಹೀಗಾಗುವುದು ದೈವೀಯ ಸಂಕೇತಕ್ಕೆ ವಿರುದ್ಧವಾಗಿತ್ತು. ಅಂತೆಯೇ ಔರಂಗಜೇಬನು ಒಂದು ವಿಧದ ಅರಸನಾಗಿ ಮುಸಲ್ಮಾನರ ಸಂತುಷ್ಟತೆಗಾಗಿ ಹಿಂದುಗಳನ್ನು ಕಾಡಹತ್ತಿದನು. ಇದರಿಂದ ದೇಶದಲ್ಲೆಲ್ಲ ಹಿಂದೂ-ಮುಸಲ್ಮಾನರ ಬಡೆದಾಟವೆದ್ದು, ಅಸಂತೋಷವು ಪಸರಿಸಿತು. ಇದರ ಪ್ರತೀಕಾರಕ್ಕೋಸುಗ ರಾಜಸ್ಥಾನದ ರಾಜಸಿಂಹ, ದುರ್ಗಾದಾಸ ಮೊದಲಾದ ಸ್ವಾತಂತ್ರ್ಯಪ್ರಿಯರು ತಮ್ಮ ಜನಾಂಗವನ್ನು ಮೊಗಲರ ವಿರುದ್ಧ ಹುರಿಗೊಳಿಸಿದರು. ಸಾಮಾನ್ಯ ಜಾಗೀರದಾರನ ಮಗನಾಗಿದ್ದ ಶಿವಾಜಿಯು ನಿದ್ರೆಯಲ್ಲಿ ಮೈಮ್ಮರೆದಿದ್ದ ಮರಾಟಿಗರನ್ನು ಎಚ್ಚರಿಸಿ, ಅವರನ್ನು ಪ್ರಬಲರನ್ನಾಗಿ ಮಾಡಿ, ದಕ್ಷಿಣಹಿಂದುಸ್ಥಾನದಲ್ಲಿ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಲಿಕ್ಕೆ ಪ್ರಯತ್ನಿಸಹತ್ತಿದನು. ಶೀಖ ಗುರುವಾದ ಗೋವಿಂದಸಿಂಹನು ಧರ್ಮಪ್ರಾಣರಾದ ಶೀಖರನ್ನು ಸೈನಿಕರನ್ನಾಗಿ ಮಾಡಿ, ಸ್ವತಂತ್ರ ರಾಜ್ಯಸ್ಥಾಪನೆಗೆ ಹುರಿಯಾಳುಗಳನ್ನಾಗಿ ಮಾಡಿದನು.

ಹೀನಬಲನಾದ ಗೋವಿಂದಸಿಂಹನ ಈ ಪ್ರಯತ್ನವು ದುಸ್ಸಾಹಸಿಕವಾಗಿತ್ತೆಂಬದರಲ್ಲಿ ಸಂದೇಹವಿಲ್ಲ. ಆದರೆ ಈ ಸಂಸಾರದಲ್ಲಿ ಸಾಹಸವಿಲ್ಲದೆ ಯಾವ ಕಾರ್ಯವೂ ನೆರವೇರದು. ಅಸಾಧ್ಯವನ್ನು ಅಸಮ ಸಾಹಸದಿಂದ ಸಾಂಗಗೊಳಿಸುವುದು ಮಹನೀಯರ ಕಾರ್ಯವಾಗಿದೆ. ಗೋವಿಂದಸಿಂಹನೂ ಇಂತಹ ಮಹನೀಯರಲ್ಲಿ ಒಬ್ಬನಾದುದರಿಂದ ಪ್ರಬಲಶಕ್ತಿಯ ಮೊಗಲರೊಡನೆ ಪ್ರತಿಭಟಿಸಲಿಕ್ಕೆ ಹಿಂಜರಿಯಲಿಲ್ಲ.

ಈ ಕಾಲದಲ್ಲಿ ಮೊಗಲರ ಪ್ರಭಾವವು ಎಲ್ಲ ಕಡೆಗೂ ಹಬ್ಬಿತ್ತು. ಪಂಜಾಬದ ಜನರು ರಾಜಕರ್ತರಾದ ಮೊಗಲರ ಅನುಕರಣ ಮಾಡುವುದರಲ್ಲಿ ತಮ್ಮ ಬುದ್ಧಿವಂತಿಕೆಯನ್ನೂ ಹಣವನ್ನೂ ಸೂರೆಗೊಳ್ಳುತ್ತಿದ್ದರು. ಗೋವಿಂದಸಿಂಹನು ಮೊದಲು ಸ್ವಜನರ ಈ ಭ್ರಾಮಕ ಕಲ್ಪನೆಯನ್ನು ಹೊಡೆದೋಡಿಸಬೇಕಿತ್ತು. ಜನರಲ್ಲಿ ಮಸಮಸಕಾಗಿದ್ದ ಆರ್ಯಸಂಸ್ಕೃತಿಯ ಪುನರುಜ್ಜೀವನಗೊಳಿಸಿ, ಅಭಿಮಾನವನ್ನು ಹೆಚ್ಚಿಸಬೇಕಿತ್ತು. ಗೋವಿಂದಸಿಂಹನು ಜನರಿಗೆ ಉಪದೇಶಿಸಿದ್ದೇನಂದರೆ:"ಮೊಗಲರಲ್ಲಿ ತಿಲಮಾತ್ರವೂ ವಿಶ್ವಾಸವಿಡಬೇಡಿರಿ! ಅವರು ಹಲವು ಪ್ರಲೋಭನೆಗಳನ್ನು ತೋರಿ ನಿಮ್ಮನ್ನು ವಂಚಿಸುವರು. ನಿಮ್ಮ ಹೃದಯವನ್ನು ಚಂಚಲಗೊಳಿಸುವರು. ನಿಮ್ಮನ್ನು ಸರಿಯಾದ ದಾರಿಯಿಂದ ದೂರ ಸರಿಸಿ, ಅಡ್ಡಹಾದಿಗೆ ಹಚ್ಚುವರು. ಇಂತಹ ಅಸತ್ಪಥದಿಂದ ದೂರಿರುವುದು ನಿಮ್ಮ ಕರ್ತವ್ಯವು. ಆದುದರಿಂದ ನೀವು ಮೊಗಲರ ಸಹವಾಸವನ್ನೆಂದೂ ಬಯಿಸಬೇಡಿರಿ." ಗೋವಿಂದಸಿಂಹನ ಈ ಉಪದೇಶದ ಪರಿಣಾಮವು ಫಲಿಸಹತ್ತಿತು. ಜನರಲ್ಲಿ ಹರಡಿಕೊಂಡಿದ್ದ ತುರ್ಕರ ಅನುಕರಣ ಪ್ರೀತಿಯು ಕ್ರಮೇಣ ಶಿಥಿಲವಾಗಹತ್ತಿತು. ಜನರಲ್ಲಿ ಉಂಟಾಗಿದ್ದ ಮೊಗಲರು ತಮಗಿಂತ ಶ್ರೇಷ್ಠರೆಂಬ ಭಾವನೆಯು ಅಳಿದು ಹೋಗಿ, ಸ್ವಜನಾಭಿಮಾನವೂ ಆತ್ಮವಿಶ್ವಾಸವೂ ತಲೆದೋರಹತ್ತಿದುವು. ಗೋವಿಂದಸಿಂಹನು ಜನರಲ್ಲಿ ಉಂಟಾಗುತ್ತ ನಡೆದಿದ್ದ ಈ ನವ ಚೈತನ್ಯವನ್ನು ನೋಡಿ ಪರಮಾನಂದ

ವನ್ನು ಹೊಂದಿದನು.

ಗೋವಿಂದಸಿಂಹನ ಸೈನಿಕರ ಸಂಖ್ಯೆಯು ದಿನಾಲು ಹೆಚ್ಚುತಲಿತ್ತು. ತರುಣರು ರಾಷ್ಟ್ರೀಯ ಭಾವನೆಯಿಂದ ಪ್ರೇರಿತರಾಗಿ ಉತ್ಸಾದಿಂದ ಸೈನ್ಯದಲ್ಲಿ ಸೇರುತಲಿದ್ದರು. ಗೋವಿಂದಸಿಂಹನು ತನ್ನ ಈ ದಂಡಾಳು ಗಳನ್ನು ಹಲವು ಭಾಗಗಳಾಗಿ ವಿಭಾಗಿಸಿದನು. ಒಂದೊಂದು ಭಾಗಕ್ಕೆ ಒಬ್ಬೊಬ್ಬ ಸೇನಾಪತಿಯನ್ನು ನಿಯಮಿಸಿದನು. ದಂಡಾಳುಗಳು ಸೇನಾ ಪತಿಯ ಅಪ್ಪಣೆಯನ್ನು ತಪ್ಪದೆ ಪಾಲಿಸಬೇಕೆಂದು ಕಟ್ಟಪ್ಪಣೆಮಾಡಿದನು. ಸೇನಾಪತಿಗಳು ತಮ್ಮ ಕೈಕೆಳಗಿನ ದಂಡಾಳುಗಳನ್ನು ಸರಿಯಾಗಿ ನಡಿಸಿ ಕೊಂಡು, ಪ್ರಸಂಗದೊರೆತಾಗ ಅವರಿಗೆ ಯುದ್ಧವಿದ್ಯೆಯ ಕುಶಲತೆಯನ್ನು ಕಲಿಸಬೇಕೆಂದು ಗೊತ್ತುಮಾಡಿದನು.

ಗೋವಿಂದಸಿಂಹನ ಸೈನಿಕರೆಲ್ಲರು ಕಾಲಾಳುಗಳು. ಅಶ್ವಾರೋಹೀ ಸೈನಿಕರಿರಲಿಲ್ಲ. ಗೋವಿಂದಸಿಂಹನು ತನ್ನ ಈ ಕೊರತೆಯನ್ನು ತಿಳಿದವ ನಾಗಿದ್ದನು. ಕಾರಣ ಅವನು ತನ್ನಲ್ಲಿ ಅಶ್ವಾರೋಹೀ ಸೈನಿಕರ ತಂಡವು ಸಿದ್ಧವಾಗುವವರೆಗೆ ಪಠಾಣರನ್ನು ನವಕರಿಗೆ ಇಟ್ಟುಕೊಳ್ಳುವ ಮನಸ್ಸು ಮಾಡಿದನು. ಐನೂರು ಪಠಾಣ ಅಶ್ವಾರೋಹೀ ಸೈನಿಕರಿಗೆ ಪಗಾರ ಕೊಟ್ಟು ಇವರನ್ನು ತನ್ನ ಸೈನ್ಯದಲ್ಲಿ ಸೇರಿಸಿಕೊಂಡನು.

ಗೋವಿಂದಸಿಂಹನು ಯುದ್ಧದ ಆಯುಕಟ್ಟಿನ ಸ್ಥಳಗಳನ್ನು ನಿರ್ಮಿ ಸುವುದಕ್ಕಾಗಿ, ಶತದ್ರು ಹಾಗು ಯಮುನಾನದಿಗಳ ನಡುವಿನ ಗುಡ್ಡದ ಅಂಚಿನಲ್ಲಿ ಕೆಲವು ಕೋಟೆಗಳನ್ನು ಕಟ್ಟಿಸಿದನು. ಶೀಖರ ಮುಖ್ಯಸ್ಥಳವು ಮುಖವಾಲವು. ಈ ಸ್ಥಳದಲ್ಲಿ ತೇಗಬಹದ್ದೂರನು ಭದ್ರವಾದ ಕೋಟೆ ಯನ್ನು ನಿರ್ಮಿಸಿದನೆಂದು ನಾವು ಹಿಂದೆ ಹೇಳಿದ್ದೇವೆ. ಈಗ ಗೋವಿಂ ದಸಿಂಹನು ಕಟ್ಟಿಸಿದ ಕೋಟೆಗಳಲ್ಲಿ ಚಮುಕೌಡ ದುರ್ಗವು ಮಹತ್ವದ್ದು. ಇದು ಸದ್ಯದ ರೋಪಡ ತಹಶೀಲಿನಲ್ಲಿದೆ. ಈ ಕೋಟೆಯು ಸಣ್ಣದಿದ್ದರೂ, ಪರ್ವತದ ಮೇಲಿದ್ದುದರಿಂದ ವೈರಿಗಳಿಗೆ ಅಭೇದ್ಯವಾಗಿರುವುದು.

K-1515

ಗೋವಿಂದಸಿಂಹನು ಮೊದಲು ಮೊಗಲರೊಡನೆ ಯುದ್ಧಹೂಡಲಿಲ್ಲ. ಪಂಜಾಬದ ಅಲ್ಲಲ್ಲಿ ಸಣ್ಣ-ದೊಡ್ಡ ಸಂಸ್ಥಾನಗಳಿದ್ದವು. ಇವುಗಳ ಅಧಿಪತಿಗಳೆಲ್ಲರೂ ಮೊಗಲರ ಅಂಕಿತರು. ಗೋವಿಂದಸಿಂಹನು ಮೊದಲೇ ಮೊಗಲರೊಡನೆ ಕಾಳಗಕ್ಕೆ ಸಿದ್ಧನಾಗಿದ್ದರೆ, ಈ ಸಂಸ್ಥಾನಿಕರು ಮೊಗಲರ ಪಕ್ಷಕ್ಕೆ ಸೇರಿ ಗೋವಿಂದಸಿಂಹನನ್ನು ವಿರೋಧಿಸಬಹುದಿತ್ತು. ಹೀಗಾಗುವುದು ಗೋವಿಂದಸಿಂಹನಿಗೆ ಇಷ್ಟವಾಗಿರಲಿಲ್ಲ. ಆದುದರಿಂದ ಅವನು ಮೊದಲು ಸಂಸ್ಥಾನಿಕರನ್ನು ಸ್ವವಶಮಾಡಿಕೊಳ್ಳುವ ಯತ್ನನಡಿಸಿದನು. ಇವರಲ್ಲಿಯು ಕೆಲವರು ತಾವೇ ತಾವಾಗಿ ಗೋವಿಂದಸಿಂಹನ ಸ್ನೇಹವನ್ನು ಬಯಿಸಿದರು. ಗೋವಿಂದಸಿಂಹನು ಇಂಥವರೊಡನೆ ಸಂತೋಷದಿಂದ ಒಪ್ಪಂದಮಾಡಿಕೊಂಡನು. ಇನ್ನು ಕೆಲವರು ಹೀಗೆ ಮಾಡಲಿಕ್ಕೆ ಒಪ್ಪಲಿಲ್ಲ. ಗೋವಿಂದಸಿಂಹನು ಅನಿವಾರ್ಯಹದಿಂದ ಇವರೊಡನೆ ಕಾಳಗ ಹೂಡಬೇಕಾಯಿತು.

---

## ಅಧ್ಯಾಯ ೧೦-ಹೃದಯಪರಿಚಯ.

ಗೋವಿಂದಸಿಂಹನು ತನ್ನ ಅನುಯಾಯಿಗಳು ಕೇವಲ ಶೂರರಾದ ಸೈನಿಕರಾದರೆ ಸಾಕೆಂದು ತಿಳಿದಿರಲಿಲ್ಲ. ಅನುಚರರು ಯುದ್ಧವೀರರಿರುವಂತೆ ಧರ್ಮವೀರರೂ ಆಗಿ, ನಿರ್ಲೋಭಿಗಳೂ ನಿಸ್ಪೃಹರೂ ಆಗಿರಬೇಕೆಂದು ಗೋವಿಂದಸಿಂಹನು ಅನ್ನುತ್ತಿದ್ದನು. ಲೋಭಿಗಳಾದ ಸೈನಿಕರು ಯುದ್ಧವಿಲ್ಲದಾಗುತ್ತಲೆ ದೇಶದ ಸುಲಿಗೆಗೆ ಹೊರಡುವರು; ಮನಬಂದಂತೆ ಹಾವಳಿ ಮಾಡಿ ಹಣವನ್ನು ಗಳಿಸುವರು; ಶ್ರೀಮಂತರಾಗುತ್ತಲೆ ವಿಲಾಸಿಗಳಾಗಿ ಯುದ್ಧದ ಹೋರೆಯನ್ನು ಬಿಟ್ಟುಕೊಡುವರು. ಹೀಗಾಗುವುದು ಗೋವಿಂದಸಿಂಹನಿಗೆ ಬೇಕಾಗಿದ್ದಿಲ್ಲ. ಕಾರಣ ಇವನು

ತನ್ನ ದಂಡಾಳುಗಳಿಗೆ ನಿರ್ಲೋಭಿಗಳಾಗಿರಿ ಎಂದು ಸದಾ ಬೋಧಿಸುತ್ತಿದ್ದನು.

ಗೋವಿಂದಸಿಂಹನು ಕೇವಲ ಪರೋಪದೇಶ ಪಂಡಿತನಾಗಿರಲಿಲ್ಲ. ಅನುಯಾಯಿಗಳಿಗೆ ಉಪದೇಶಿಸಿದಂತೆ ತಾನೂ ವರ್ತಿಸುತ್ತಿದ್ದನು. ಗೋವಿಂದಸಿಂಹನು ಹೀಗೆ ಮಾಡುತ್ತಿದ್ದುದರಿಂದಲೇ ಶಿಷ್ಯರು ಗುರುವಿನ ಉಪದೇಶದಂತೆ ತಪ್ಪದೆ ನಡೆಯುತ್ತಿದ್ದರು. ಗೋವಿಂದಸಿಂಹನು ವಿಲಾಸೋಪಭೋಗವನ್ನು ಪ್ರೀತಿಸುವವನಾಗಿರಲಿಲ್ಲ; ವಿಲಾಸದ ಒಡವೆಗಳನ್ನು ಸಂಗ್ರಹಿಸಿಡಲಿಕ್ಕೆ ಇಚ್ಛಿಸುತ್ತಿದ್ದಿಲ್ಲ; ವಿಲಾಸದ ವಸ್ತುಗಳನ್ನು ಮುಟ್ಟುವುದಕ್ಕೆ ಸಹ ಹಿಂದೆಗೆಯುತ್ತಿದ್ದನು. ಯಾವನೊಬ್ಬ ಶಿಷ್ಯನು ಭಕ್ತಿಭರದಿಂದ ಒಂದು ಉತ್ತಮ ವಸ್ತುವನ್ನು ಕಾಣಿಕೆಯಾಗಿ ಅರ್ಪಿಸಿದರೆ, ಗೋವಿಂದಸಿಂಹನು ಆ ಭಕ್ತನ ಮನಸ್ಸನ್ನು ನೋಯಿಸದಿರುವುದಕ್ಕಾಗಿ ಆ ವಸ್ತುವನ್ನು ಧರಿಸುತ್ತಿದ್ದನು. ಆದರೆ ಆ ಒಡವೆಯನ್ನು ಬಹಳ ಹೊತ್ತು ಇಟ್ಟುಕೊಳ್ಳುತ್ತಿದ್ದಿಲ್ಲ. ಆ ಶಿಷ್ಯನ ಸಮಕ್ಷಮದಲ್ಲಿಯೆ ಅದನ್ನು ಅನ್ಯರಿಗೆ ಕೊಟ್ಟುಬಿಡುತ್ತಿದ್ದನು; ಇಲ್ಲವೆ ನಾಶಪಡಿಸುತ್ತಿದ್ದನು. ಇದರಿಂದ ಆ ಭಕ್ತನು ವ್ಯಥೆಹೊಂದುತ್ತಿರಲಿಲ್ಲವಿಷ್ಟೇ ಅಲ್ಲ; ಗುರುವಿನ ವಿರಕ್ತಿಯನ್ನು ನೋಡಿ ಮತ್ತಷ್ಟು ಭಕ್ತಿಯುತನಾಗುತ್ತಿದ್ದನು.

ಒಮ್ಮೆ ಸಿಂಧುದೇಶದ ಒಬ್ಬ ಶಿಷ್ಯನು ಕಾಣಿಕೆಯೆಂದು ಎರಡು ಸುವರ್ಣವಲಯಗಳನ್ನು ತಕ್ಕೊಂಡು ಗುರುವಿನ ದರ್ಶನಕ್ಕೆ ಬಂದನು. ಗುರುವಿನ ಚರಣಕ್ಕೆರಗಿ, ಆ ವಲಯಗಳನ್ನು ಸಮರ್ಪಿಸಿ, ಅವುಗಳನ್ನು ಧರಿಸಬೇಕೆಂದು ಬೇಡಿಕೊಂಡನು. ಆ ಬಂಗಾರದ ಕಡೆಗಳು ಮುತ್ತು ರತ್ನಗಳಿಂದ ಕೆತ್ತಲ್ಪಟ್ಟು ಬಹು ಬೆಲೆಯುಳ್ಳವುಗಳಾಗಿದ್ದುವು. ಗುರುವು ಶಿಷ್ಯನ ಮನಸ್ತುಷ್ಟಿಗಾಗಿ ಆ ಕಡಗಗಳನ್ನು ಧರಿಸಿದನು. ಶಿಷ್ಯನಿಗೆ ಪರಮಾನಂದವಾಯಿತು.

ಮುಂದೆ ತುಸು ಹೊತ್ತಿನಲ್ಲಿಯೆ ಗುರುವು ನದಿಯ ಸ್ನಾನಕ್ಕೆ

ಹೊರಟನು. ಶಿಷ್ಯನು ಗುರುವನ್ನು ಹಿಂಬಾಲಿಸಿ ನಡೆದನು. ಗುರುವು ಜಳಕ ಮಾಡಲಿಕ್ಕೆ ನದಿಯಲ್ಲಿಳಿದಾಗ ಒಂದು ವಲಯವನ್ನು ನದಿಯಲ್ಲಿ ದೂರ ಬೀಸಾಟಿಬಿಟ್ಟನು. ಬಳಿಕ ಸ್ನಾನ ಮಾಡಿ ಮೇಲಕ್ಕೆ ಬಂದನು. ಶಿಷ್ಯನು ಗುರುವಿನ ಒಂದು ಕೈಯಲ್ಲಿ ಮಾತ್ರ ವಲಯವಿರುವುದನ್ನು ನೋಡಿ ಗಾಬರಿಯಾಗಿ, ಇನ್ನೊಂದು ವಲಯವೇನಾಯಿತೆಂದು ಕೇಳಿದನು. ಗುರುವು ಯಾವ ವಿಕಾರವನ್ನೂ ತೋರದೆ, ಆ ವಲಯವು ನದಿಯಲ್ಲಿ ಬಿತ್ತೆಂದು ಹೇಳಿಬಿಟ್ಟನು. ಶಿಷ್ಯನು ಧಾವಿಸಿ ಹೋಗಿ ಈಸಬಲ್ಲವನನ್ನು ಹುಡುಕಿ ತಂದನು. ಅವನಿಗೆ ಹಣದಾಶೆಯನ್ನು ತೋರಿ, ವಲಯವನ್ನು ಹುಡುಕಿಕೊಡಲಿಕ್ಕೆ ಹೇಳಿದನು. ಈಸಬಲ್ಲವನು ಆ ವಲಯವೆಲ್ಲಿ ಬಿದ್ದಿರಬಹುದೆಂಬುದನ್ನು ತೋರಿಸಿಕೊಟ್ಟರೆ ಹುಡುಕಿ ತರುವೆನೆಂದು ಬಿನ್ನಹ ಮಾಡಿಕೊಂಡನು. ಶಿಷ್ಯನು ಗುರುವಿಗೆ ಆ ಸ್ಥಳವನ್ನು ತೋರಿಸಲಿಕ್ಕೆ ವಿನಂತಿಮಾಡಿಕೊಂಡನು. ಆಗ ಗೋವಿಂದಸಿಂಹನು ಮತ್ತೊಂದು ವಲಯವನ್ನು ಬಿಚ್ಚಿ ಬೀಸಾಟಿ, "ಅಗೋ ಅಲ್ಲಿ ಬಿದ್ದಿದೆ" ಎಂದು ಸ್ಥಳವನ್ನು ನಿರ್ದೇಶ ಮಾಡಿದನು. ಶಿಷ್ಯನು ಆಶ್ಚರ್ಯಾನ್ವಿತನಾಗಿ ಹೋದನು. ಗುರುವಿನ ಮನೋಭಾವನೆಯನ್ನು ತಿಳಿದು, ಆ ವಲಯಗಳ ಶೋಧದ ಹವ್ಯಾಸವನ್ನು ಬಿಟ್ಟುಕೊಟ್ಟನು.

ಇನ್ನೊಂದು ಸಮಯದಲ್ಲಿ ಮತ್ತೊಬ್ಬ ಶಿಷ್ಯನು ಖಡ್ಗ, ಆನೆ, ಕೆಲವು ಪಕ್ಷಿಗಳು, ಸುಂದರವಾದ ಡೇರೆ, ಅರಬಸ್ತಾನದ ಉತ್ತಮ ಕುದುರೆ ಮೊದಲಾದವುಗಳನ್ನು ಕಾಣಿಕೆ ಸ್ವರೂಪವಾಗಿ ತಕ್ಕೊಂಡು ಗುರುವಿನ ದರ್ಶನಕ್ಕೆ ಬಂದನು. ಗೋವಿಂದಸಿಂಹನು ಈ ಕಾಣಿಕೆಗಳನ್ನು ಸಂತೋಷದಿಂದ ಸ್ವೀಕರಿಸಿದನು. ಈ ವಸ್ತುಗಳೆಲ್ಲವೂ ಪ್ರೇಕ್ಷಣೀಯವಾಗಿದ್ದುದರಿಂದ ನೋಡಿದ ಜನರು ಬೆರಗಾಗಿ ಹೋದರು. ಈ ಸುದ್ದಿಯು ಎಲ್ಲೆಲ್ಲಿಯೂ ಹರಡಿತು. ಗೋವಿಂದಸಿಂಹನ ಸ್ನೇಹಿತರಾದ ಸಂಸ್ಥಾನಿಕರಲ್ಲಿಯ ಹಲವರು ಈ ವಸ್ತುಗಳನ್ನು ನೋಡುವುದಕ್ಕೆಂದು

ಆನಂದಪುರಕ್ಕೆ ಆಗಮಿಸಿದರು. ಗೋವಿಂದಸಿಂಹನು ತನ್ನ ಈ ಸ್ನೇಹಿತರನ್ನು ಆದರದಿಂದ ಬರಮಾಡಿಕೊಂಡನು; ಹಾಗು ಇವರ ಇಷ್ಟೆಯಂತೆ ಆ ವಸ್ತುಗಳನ್ನು ಉತ್ತಮರೀತಿಯಿಂದ ಮಂಡಿಸಿ ಇಡಿಸಿದನು.

ಸಂಸ್ಥಾನಿಕರು ಈ ಒಡವೆಗಳನ್ನು ನೋಡಿ ಬೆರಗಾದರು. ಹೇಗಾದರೂ ಮಾಡಿ ಅವುಗಳನ್ನು ಎತ್ತಿಹಾಕಬೇಕೆಂಬ ಲೋಭಕ್ಕೊಳಗಾದರು. ಆನೆ ಹಾಗು ಡೇರೆಯನ್ನು ಕಹಲೂರ ಸಂಸ್ಥಾನಿಕನಾದ ಭೀಮಚಾಂದನು ಬಯಿಸಿದನು. ಅಶ್ವ, ಖಡ್ಗ, ಪಕ್ಷಿಗಳ ಮೇಲೆ ಹಿಂಡೂರ ಸಂಸ್ಥಾನಿಕನಾದ ಹರಿಚಾಂದನು ಮನಸ್ಸಿಟ್ಟನು. ಇವನು ತನ್ನ ದುರಾಶೆಯ ದುಷ್ಪ್ರವರ್ತನೆಯನ್ನು ತಡೆಯಲಾರದವನಾಗಿ ಆ ಖಡ್ಗವನ್ನು ತಕ್ಕೊಂಡು ತನ್ನಲ್ಲಿಯ ಒರೆಯಲ್ಲಿ ಸೇರಿಸಿಕೊಳ್ಳುವುದರಲ್ಲಿದ್ದನು. ಗೋವಿಂದಸಿಂಹನು ಇವನ ಮನೋಭಾವನೆಯನ್ನು ತಿಳಿದು ನಗೆಮೊಗದಿಂದ ಇಂತೆಂದನು: "ಪ್ರಿಯಮಿತ್ರನೆ, ನನ್ನ ಶಿಷ್ಯನು ಇವುಗಳನ್ನು ದೂರದೇಶದಿಂದ ಬಹುಶ್ರಮಬಟ್ಟು ತಂದಿದ್ದಾನೆ. ನಾನು ಇವುಗಳನ್ನು ಉಪಯೋಗಿಸಬೇಕೆಂದು ಬಹಳವಾಗಿ ಹೇಳಿಕೊಂಡಿದ್ದಾನೆ. ಆ ಶಿಷ್ಯನ ಸಂತೋಷಕ್ಕಾಗಿ ನಾನು ಇವುಗಳನ್ನು ಒಮ್ಮೆಯಾದರೂ ಉಪಯೋಗಿಸಿಕೊಳ್ಳಬೇಕಿದೆ. ನೀನು ಈ ಅನುಕೂಲತೆಯನ್ನು ನನಗೆ ಒದಗಿಸಿಕೊಡು. ನಾನು ಇವುಗಳನ್ನು ಒಮ್ಮೆಯಾದರೂ ಉಪಯೋಗಿಸಿಕೊಂಡೆನೆಂದು ಆ ಶಿಷ್ಯನಿಗೆ ತಿಳಿದರೆ, ಅವನು ಪರಮಾನಂದ ಹೊಂದುವನು. ಆ ಬಳಿಕ ನಿನಗೆ ಬೇಕಿದ್ದರೆ ನೀನಿವುಗಳನ್ನು ಕೊಂಡೊಯ್ಯಬಹುದು. ನಾನು ಬೇಡೆನ್ನುವುದಿಲ್ಲ. ಆ ಮೊದಲು ನೀನು ಉದಾರಹೃದಯನಾಗಿ ಶಿಷ್ಯನ ಮನೋಬಯಿಕೆಯನ್ನು ಪೂರ್ಣಮಾಡುವ ಸಂಧಿಯನ್ನು ಒದಗಿಸಿಕೊಡಬೇಕೆಂದು ನಾನು ಹೇಳಿಕೊಳ್ಳುತ್ತೇನೆ."

ಈ ಮಾತು ಭೀಮಚಾಂದನಿಗೆ ಸೇರುವ ಸಂಭವವಿರಲಿಲ್ಲ. ಉನ್ಮತ್ತರಾದ ಸಂಸ್ಥಾನಿಕರು ಈ ವಸ್ತುಗಳ ಸಂಪಾದನೆಗಾಗಿ ರಕ್ತಪಾತಮಾಡ

ಲಿಕ್ಕೂ ಹೇಸುವವರಾಗಿದ್ದಿಲ್ಲ. ಆದರೆ ಇಂತಹ ಪ್ರಸಂಗ ಬರಬಾರದೆಂಬದು ಗೋವಿಂದಸಿಂಹನ ಮಾನಸವಾಗಿತ್ತು, ಕಾರಣ ಅವನು ಸಂಸ್ಥಾನಿಕರ ಮನಸ್ತುಷ್ಟಿಗೆ ಹಲವು ರೀತಿಗಳಿಂದ ಯತ್ನಿಸಿದನು. ಆದರೆ ಲೋಭಪರವಶರಾದ ಸಂಸ್ಥಾನಿಕರು ತಮ್ಮ ಹಟವನ್ನು ಬಿಡಲಿಲ್ಲ. ಶಾಂತರಾಗಲಿಲ್ಲ. ಲೋಭಾತ್ ಕ್ರೋಧಃ ಕ್ರೋಧಾತ್ ಸಂಜಾಯತೇ ಮೋಹಃ (ಲೋಭದಿಂದ ಸಿಟ್ಟೂ, ಸಿಟ್ಟಿನಿಂದ ಮೋಹವೂ ಉಂಟಾಗುತ್ತದೆ) ಎಂದು ಭಗವಂತನು ಗೀತೆಯಲ್ಲಿ ಹೇಳಿದ್ದಾನೆ. ದುರ್ಬಲಹೃದಯರು ಇಚ್ಛಿತ ವಸ್ತುವನ್ನು ದೊರಕಿಸುವ ಮಾರ್ಗದಲ್ಲಿ ಉಂಟಾದ ಎಡರನ್ನು ನೋಡಿ ಕೋಪಗೊಳ್ಳುತ್ತಾರೆ; ಹಾಗು ಈ ಕೋಪದ ಭರದಲ್ಲಿ ಎಂತಹ ಹೀನಕೃತಿ ಮಾಡುವುದಕ್ಕೂ ಹೇಸುವುದಿಲ್ಲ.

ಸಂಸ್ಥಾನಿಕರು ಹಲವು ತರದ ಕಟುಮಾತುಗಳನ್ನಾಡಹತ್ತಿದರು. ಗೋವಿಂದಸಿಂಹನು ಧಾರ್ಮಿಕನಾಗಿರದೆ ಪರಮಲೋಭಿಯಾಗಿರುವನೆಂದು ತಿರಸ್ಕರಿಸಿದರು. ಆದರೆ ಗೋವಿಂದಸಿಂಹನು ಇವರ ಮಾತಿನಕಡೆಗೆ ಲಕ್ಷ್ಯಗೊಡಲಿಲ್ಲ. ಮದಾಂಧರಾದ ಸಂಸ್ಥಾನಿಕರ ದುರಾಶೆಯನ್ನು ಪೂರ್ಣಗೊಳಿಸಲಿಕ್ಕೆ ಮನಸ್ಸು ಮಾಡಲಿಲ್ಲ. ಕಡೆಗೆ ಸಂಸ್ಥಾನಿಕರು ಗೋವಿಂದಸಿಂಹನಿಗೆ ಭಯಪ್ರದರ್ಶನ ಮಾಡಹತ್ತಿದರು. ಯುದ್ಧಮಾಡಿಯಾದರೂ ಈ ವಸ್ತುಗಳನ್ನು ಬಲಾತ್ಕಾರದಿಂದ ಕೊಂಡೊಯ್ಯುವೆವೆಂದು ನಿರ್ಧಾರದಿಂದ ನುಡಿದರು. ಆದರೂ ಗೋವಿಂದಸಿಂಹನು ತನ್ನ ಶಾಂತತೆಯನ್ನು ಕಳೆದುಕೊಳ್ಳಲಿಲ್ಲ. ಸಂಸ್ಥಾನಿಕರ ಮೇಲೆ ಹರಿಹಾಯಲಿಲ್ಲ.

ಸಂಸ್ಥಾನಿಕರ ಈ ದುರ್ವ್ಯವಹಾರವು ಗೋವಿಂದಸಿಂಹನ ಶಿಷ್ಯರಿಗೆ ಸರಿಬರಲಿಲ್ಲ. ಅವರು ಕೋಪಗೊಂಡರಾದರೂ, ಗುರುವಿನ ಕಡೆಗೆ ಲಕ್ಷ್ಯವಿಟ್ಟು ಕೆಲಹೊತ್ತು ಸುಮ್ಮನಿದ್ದರು. ಆದರೆ ಸಂಸ್ಥಾನಿಕರ ಉನ್ಮತ್ತತೆಯು ಕ್ರಮೇಣ ಹೆಚ್ಚುತ್ತ ನಡೆದುದನ್ನು ನೋಡಿ ಅವರು ತಡೆಯದಾದರು. ಅವರು ವಾಹಿ ಗುರುಜೀಕೀ ಫತೇ (ಗುರು ಮಹಾರಾಜಕೀ

ಜಯ) ಎಂದು ಜಯಘೋಷ ಮಾಡಿ, ಒರೆಯಿಂದ ಖಡ್ಗಗಳನ್ನು ಹಿರಿದರು. ಸಂಸ್ಥಾನಿಕರು ಗಾಬರಿಯಾದರು. ತಮ್ಮ ತಪ್ಪನ್ನು ತಿಳಿದರು. ಅತಿಥಿಗಳಾಗಿ ಬಂದಿದ್ದ ಅವರು ಹೆಚ್ಚು ಸೈನ್ಯವನ್ನು ತಂದಿರಲಿಲ್ಲ. ಈಗ ತಾವು ಗೋವಿಂದಸಿಂಹನ ಅಳುಕಿನಲ್ಲಿ ಸಿಕ್ಕಿರುವೆವೆಂಬದನ್ನು ಅರಿತ ಅವರು ತಮ್ಮ ಉದ್ಧಾಮತೆಯನ್ನು ಬಿಟ್ಟು ಸುಮ್ಮನಾದರು. ಗೋವಿಂದಸಿಂಹನು ಸಂಸ್ಥಾನಿಕರ ಈ ಮನೋಭಾವನೆಯನ್ನು ತಿಳಿದನು. ಅಂಗುಲಿಸಂಕೇತದಿಂದ ತನ್ನ ಶಿಷ್ಯರನ್ನು ಸಮಾಧಾನಗೊಳಿಸಿದನು. ಸಂಸ್ಥಾನಿಕರನ್ನು ಬೇರೆ ಕಡೆಗೆ ಕಳುಹಿಕೊಟ್ಟನು. ಸಂಸ್ಥಾನಿಕರು ಮೋರೆಯೊಣಗಿಸಿಕೊಂಡು ತಮ್ಮ ತಮ್ಮ ರಾಜ್ಯಗಳಿಗೆ ಹೋದರು.

ಶಿಷ್ಯವತ್ಸಲನಾಗಿದ್ದರೂ ಅತಿಥಿವತ್ಸಲನಾಗಿದ್ದ ಗೋವಿಂದಸಿಂಹನಿಗೆ ಶಿಷ್ಯರ ವರ್ತನವು ಸರಿದೋರಲಿಲ್ಲ. ಹಿಂದುಗಳಿಗೆ ಅತಿಥಿಯು ಪೂಜ್ಯನು. ದೇವತಾಸ್ವರೂಪನು. ಒಂದುವೇಳೆ ಅತಿಥಿಯು ಲೋಭವಶನಾಗಿ ಇಲ್ಲವೆ ಅನ್ಯ ಕಾರಣಗಳಿಂದ ಭ್ರಾಂತನಾಗಿ ಅಡ್ಡದಾರಿಯನ್ನು ಹಿಡಿದರೆ, ಸದುಪದೇಶದಿಂದಲೂ, ಸದ್ವ್ಯವಹಾರದಿಂದಲೂ ಅವನನ್ನು ಹಾದಿಗೆ ತರಬೇಕು. ಹೀಗೆ ಮಾಡದೆ ಕೋಪಕ್ಕೊಳಗಾಗಿ ಬಿರುಸು ಮಾತಾಡುವುದೂ, ತಿರಸ್ಕರಿಸುವುದೂ ಪಾಪದಾಯಕವು. ಗೋವಿಂದಸಿಂಹನು ತನ್ನ ಶಿಷ್ಯರಿಗೆ ಬುದ್ಧಿಗಲಿಸುವ ಉದ್ದೇಶದಿಂದ ಉಪದೇಶಿಸಿದ್ದೇನಂದರೆ: "ನನ್ನ ಮರ್ಯಾದೆ ರಕ್ಷಣೆಗೋಸುಗ ನೀವು ತೋರಿದ ಆಗ್ರಹವು ಪ್ರಶಂಸನೀಯವಾದದ್ದು. ಆದರೆ ನೀವು ಅತಿಥಿಗಳಾಗಿ ಬಂದಿದ್ದ ಸಂಸ್ಥಾನಿಕರ ವಿಷಯದಲ್ಲಿ ವರ್ತಿಸಿದ ಕಠೋರವರ್ತನವು ಸರಿಯಾದ್ದಲ್ಲ! ನೀವು ಹೀಗೆ ವರ್ತಿಸಬೇಕೆಂದು ನನ್ನ ಇಷ್ಟವಿರಲಿಲ್ಲ! ಅತಿಥಿಗಳ ಸಂಗಡ ಕಠೋರವೃತ್ತಿಯಿಂದ ವರ್ತಿಸುವುದನ್ನು ನಾನೆಂದಿಗೂ ಪ್ರೀತಿಸಲಾರೆನು! ಶೀಖರು ಪ್ರಿಯಭಾಷಿಗಳಾಗಿರಬೇಕೆಂದು ನಾನು ನಿಮಗೆ ಆಗಾಗ್ಗೆ ಉಪದೇಶಮಾಡುತ್ತ ಬಂದಿದ್ದೇನೆ. ನೀವು ಒಮ್ಮೊಮ್ಮೆ ಇದಕ್ಕೆ ವಿಪರೀತವಾಗಿ

ನಡೆಯುತ್ತಿರುವಿರಿ. ಇದು ಸರಿಯಲ್ಲ. ಇನ್ನು ಮುಂದೆ ಹೀಗಾಗದಂತೆ ಎಚ್ಚರದಿಂದಿರ್ರಿ."

## ಅಧ್ಯಾಯ ೧೧–ಭಿಂಗಾಲಿಯ ಯುದ್ಧ.

ಭೀಮಚಾಂದನು ತನ್ನ ರಾಜ್ಯಕ್ಕೆ ಹೋಗುತ್ತಲೆ ಗೋವಿಂದಸಿಂಹನೊಡನೆ ಯುದ್ಧಮಾಡುವ ಸೌರಣೆಗೆ ತೊಡಗಿದನು. ಗೋವಿಂದಸಿಂಹನ ಉನ್ನತಿಯನ್ನು ನೋಡಿ ಸಹಿಸದ ಇನ್ನು ಕೆಲವರು ಸಂಸ್ಥಾನಿಕರು ಭೀಮಚಾಂದನಿಗೆ ಸಹಾಯಕರಾದರು. ಗೋವಿಂದಸಿಂಹನು ಈ ಸುದ್ದಿಯನ್ನು ಕೇಳಿ ಯುದ್ಧದ ತಯಾರಿಯನ್ನು ನಡಿಸಿದನು. ಹಲವರು ಸಂಸ್ಥಾನಿಕರ ಸಮವೇತಸೈನ್ಯದೊಡನೆ ಪ್ರಕಾಶರೀತಿಯಿಂದ ಯುದ್ಧಮಾಡಿ, ನಿಶ್ಚಿತವಾದ ಜಯವನ್ನು ದೊರಕಿಸುವಷ್ಟು ಬಲವು ಗೋವಿಂದಸಿಂಹನ ಬಳಿಯಲ್ಲಿರಲಿಲ್ಲ. ಆದುದರಿಂದ ಅವನು ಒಬ್ಬ ಸಂಸ್ಥಾನಿಕನನ್ನಾದರೂ ತನ್ನ ನೆರವಿಗೆ ತಕ್ಕೊಳ್ಳಬೇಕೆಂದು ಆಶಿಸಿದನು. ಈ ಸಮಯದಲ್ಲಿ ನಾಹನದ ಸಂಸ್ಥಾನಿಕನಾದ ಮೇದಿನೀಪ್ರಕಾಶನ ಸಂಗಡ ಹಿಂಡೂರ ಸಂಸ್ಥಾನಿಕನಾದ ಹರಿಚಾಂದನ ಮನಸ್ತಾಪವು ನಡೆದಿತ್ತು. ಹರಿಚಾಂದನು ತನ್ನ ಮೇಲೆ ದಂಡೆತ್ತಿಬರಬಹುದೆಂಬ ಭಯವು ಮೇದಿನೀಪ್ರಕಾಶನಿಗೆ ಇದ್ದುದರಿಂದ ಮೇದಿನೀಪ್ರಕಾಶನು ಗೋವಿಂದಸಿಂಹನ ಸಹಾಯವನ್ನು ಕೇಳಿಕೊಂಡನು. ಹಿಂಡೂರ ಸಂಸ್ಥಾನಿಕನು ಗೋವಿಂದಸಿಂಹನ ವಿರೋಧಿಯಾದುದರಿಂದ ಗೋವಿಂದಸಿಂಹನು ಮೇದಿನೀಪ್ರಕಾಶನಿಗೆ ಸಹಾಯಮಾಡಲಿಕ್ಕೆ ಸಂತೋಷದಿಂದ ಸಮ್ಮತಿಸಿದನು; ಮೇದಿನೀಪ್ರಕಾಶನನ್ನು ತನ್ನ ಸಂಗಡಕ್ಕೆ ಸೇರಿಸಿಕೊಂಡನು. ರಾಜಧಾನಿಯಾದ ಆನಂದಪುರವನ್ನು ಬಿಟ್ಟು, ನಾಹನ ಸಂಸ್ಥಾನದಲ್ಲಿರುವ ಪಾವಟಾ ಎಂಬ ಗ್ರಾಮದಲ್ಲಿ

ನಿಂತುಕೊಂಡನು; ಹಾಗು ಈ ಗ್ರಾಮಕ್ಕೆ ಬಲವಾದ ಕೋಟೆಯನ್ನು ಕಟ್ಟಿಸಲಾರಂಭಿಸಿದನು.

ಗೋವಿಂದಸಿಂಹನ ಸ್ನೇಹಿತನೂ ಶ್ರೀನಗರದ ರಾಜನೂ ಆದ ಫತ್ತೆಸಾಹನ ಮಗಳೊಡನೆ ಭೀಮಚಾಂದನ ಮಗನ ವಿವಾಹವನ್ನು ಬಳಿಸುವ ಮಾತುಕತೆಗಳು ನಡೆದಿದ್ದುವು. ಈ ಕಾರಣದಿಂದ ಯುದ್ಧವು ಕೆಲ ಕಾಲ ತಡೆದುನಿಂತಿತು. ಭೀಮಚಾಂದನು ಮಗನ ಲಗ್ನದ ಪೂರ್ವದಲ್ಲಿ ಆನೆಯನ್ನು ಬೇಡುವುದಕ್ಕೆಂದು ಒಬ್ಬ ದೂತನನ್ನು ಗೋವಿಂದಸಿಂಹನ ಬಳಿಗೆ ಕಳುಹಿದನು; ಹಾಗು ಆನೆಯ ಬೆಲೆಯ ಸ್ವರೂಪವಾಗಿ ಬೇಡಿದಷ್ಟು ಹಣವನ್ನು ಕೊಡುವೆನೆಂದು ಸೂಚಿಸಿದನು. ಆದರೆ ಗೋವಿಂದಸಿಂಹನು ಧನಲೋಭಕ್ಕೆ ಮರುಳಾಗಲಿಲ್ಲ. ಆನೆಯನ್ನು ಕೊಡಲೊಪ್ಪದೆ ದೂತನನ್ನು ಹೊರದೂಡಿಸಿಬಿಟ್ಟನು. ಈ ಅಪಮಾನ ಶ್ರವಣದಿಂದ ಭೀಮಚಾಂದನ ಕೋಪವು ಅನಿವಾರವಾಯಿತು. ಆದರೂ ಅವನು ಭಾವೀ ಶುಭಕಾರ್ಯವನ್ನು ನೆರವೇರಿಸಿದ ಹೊರತು ಯುದ್ಧಕ್ಕೆ ಪ್ರವೃತ್ತನಾಗುವಂತಿರಲಿಲ್ಲ.

ಕಹಲೂರಿಂದ ಶ್ರೀನಗರಕ್ಕೆ ಹೋಗಲಿಕ್ಕೆ ಎರಡು ದಾರಿಗಳಿದ್ದುವು. ಇವುಗಳಲ್ಲಿಯ ಸಮೀಪದ ದಾರಿಯ ನಡುವೆ ಪಾವಟಾ ಗ್ರಾಮವಿತ್ತು. ಭೀಮಚಾಂದನು ಗೋವಿಂದಸಿಂಹನ ವೈರಿಯಾಗಿದ್ದರೂ, ಅವನ ದೊಡ್ಡ ಮನಸ್ಸಿನ ವಿಷಯದಲ್ಲಿ ತಿಲಪ್ರಾಯವಾದರೂ ಸಂದೇಹವುಳ್ಳವನಾಗಿರಲಿಲ್ಲ. ಆದುದರಿಂದ ಅವನು ಮಗನನ್ನು ನಿಸ್ಸಂಕೋಚವೃತ್ತಿಯಿಂದ ಸಮೀಪದ ದಾರಿಯಿಂದ ಕಳುಹಿಕೊಟ್ಟು, ತಾನು ಬೇರೆ ದಾರಿಯಿಂದ ಶ್ರೀನಗರಕ್ಕೆ ಹೊರಟನು. ರಾಜಕುಮಾರನು ಪಾವಟಾಗ್ರಾಮದ ಹತ್ತಿರ ಬಂದ ಸುದ್ದಿಯನ್ನು ಕೇಳಿ, ಗೋವಿಂದಸಿಂಹನು ಅವನನ್ನು ಎದಿರ್ಗೊಂಡನು. ಕುಶಲಪ್ರಶ್ನೆಗಳ ತರುವಾಯ ಗೋವಿಂದಸಿಂಹನು ಮುಗುಳು ನಗೆಯಿಂದ ಕೇಳಿದ್ದೇನಂದರೆ: "ರಾಜಕುಮಾರ, ನಾನು ನಿನ್ನನ್ನು ಇಲ್ಲಿ ಬಂದಿಯ

ನ್ನಾಗಿಮಾಡಿ ಕಾರಾಗಾರದಲ್ಲಿರಿಸಿದರೆ ನಿಮ್ಮಪ್ಪನು ಏನು ಮಾಡುವನು?'' ರಾಜಕುಮಾರನು ಮಾತಾಡದೆ ಸುಮ್ಮನಿದ್ದನು. ಗೋವಿಂದಸಿಂಹನ ಮನಸ್ಸಿನಲ್ಲಿ ದುಷ್ಟವಿಚಾರವೇ ಇರಲಿಲ್ಲ. ಅವನು ರಾಜಕುಮಾರನನ್ನು ಮುಂದೆ ಹೋಗಗೊಟ್ಟನಿಷ್ಟೇ ಅಲ್ಲ; ತನ್ನ ದಿವಾನನಾದ ನಂದಚಾಂದನ ಕೈಯಲ್ಲಿ ಉಡುಗರೆಯು ಬಹುಮೂಲ್ಯ ವಸ್ತುಗಳನ್ನು ಕೊಟ್ಟು, ಅವನನ್ನು ಶ್ರೀನಗರಕ್ಕೆ ಕಳುಹಿದನು. ಯಥಾಕಾಲದಲ್ಲಿ ವಿವಾಹವಾಯಿತು. ಆದರೆ ಗೋವಿಂದಸಿಂಹನ ಆಹೇರದ ಒಡವೆಗಳ ಸಂಬಂಧದ ಸುದ್ದಿಯು ಭೀಮ ಚಾಂದನಿಗೆ ಈವರೆಗೆ ಗೊತ್ತಾಗಿರಲಿಲ್ಲ. ಮುಂದೆ ಅವನಿಗೆ ಈ ಸುದ್ದಿಯು ತಿಳಿದ ಕೂಡಲೆ ಅವನು ಸಿಟ್ಟಿನಿಂದ ಅಂದದ್ದೇನಂದರೆ: ''ಫತ್ತೆಸಾಹನು ಗೋವಿಂದಸಿಂಹನ ಪರಮ ಮಿತ್ರನಾಗಿರುವನು. ವೈರಿಯು ಗೆಳೆಯನ ಸಂಗಡ ನಾನು ಶರೀರಸಂಬಂಧವನ್ನು ಬಳಸಲಿಚ್ಛಿಸುವದಿಲ್ಲ! ಇನ್ನು ನಾನು ಫತ್ತೆಸಾಹನ ಸಂಗಡ ಬೀಗತನದಿಂದ ನಡಕೊಳ್ಳಲಾರೆ! ಶತ್ರುವಿನ ಪರಮಮಿತ್ರನ ಶರೀರಸಂಬಂಧವನ್ನು ನಾನು ಸ್ಥಿರವಾಗಿಟ್ಟುಕೊಳ್ಳಲಾರೆನು!'' ಫತ್ತೆಸಾಹನು ಗಾಬರಿಯಾದನು. ಉಂಟಾಗಿದ್ದ ಸಂಬಂಧವನ್ನು ಹರಿದುಕೊಳ್ಳುವ ಮನಸ್ಸು ಅವನಿಗಿರಲಿಲ್ಲ. ಆದುದರಿಂದ ಅವನು ಅನಿವಾರ್ಯದಿಂದ ಗೋವಿಂದಸಿಂಹನ ವೈರಿಯಾಗಿ, ಬೀಗನಾದ ಭೀಮಚಾಂದನ ಪಕ್ಷವನ್ನು ಸೇರಬೇಕಾಯಿತು.

ಶುಭಕಾರ್ಯವು ಮುಗಿಯುತ್ತಲೆ ಭೀಮಚಾಂದನು ಶ್ರೀನಗರದ ರಾಜನನ್ನೂ ಇನ್ನು ಕೆಲವರು ಸಂಸ್ಥಾನಿಕರನ್ನೂ ಸಹಾಯಕ್ಕೆ ಕರಕೊಂಡು ಗೋವಿಂದಸಿಂಹನ ಮೇಲೆ ದಂಡೆತ್ತಿ ಬಂದನು. ಗೋವಿಂದಸಿಂಹನಾದರೂ ಎರಡು ಸಾವಿರ ಸೈನಿಕರನ್ನು ಸಂಗಡ ತಕ್ಕೊಂಡು ಭೀಮಚಾಂದನ ಸೈನ್ಯವನ್ನು ಎದುರಿಸ ಹೊರಟನು. ಯಮುನಾ ಹಾಗು ಗಿರೀ ನದಿಯು ಮಧ್ಯದ ಪ್ರದೇಶದಲ್ಲಿರುವ ಭಿಂಗಾಲಿ ಎಂಬ ಸ್ಥಳದಲ್ಲಿ ಎರಡೂ ಸೈನ್ಯಗಳ ದರ್ಶನವಾಯಿತು (೧೬೮೫). ಯುದ್ಧವು ಒಳ್ಳೇ

ಜೋರಿನಿಂದ ನಡೆಯಿತು. ಎರಡೂ ಸೈನ್ಯಗಳ ಜಯಘೋಷದಿಂದ ರಣಕ್ಷೇತ್ರವು ತುಂಬಿ ಹೋಯಿತು. ವೀರರ ರಕ್ತದಿಂದ ಯುದ್ಧಭೂಮಿಯು ರಂಜಿತವಾಯಿತು. ಆದರೆ ಇಡಿ ದಿವಸ ಹೋರಾಡಿದರೂ, ಜಯಾಪಜಯಗಳ ನಿರ್ಣಯವಾಗಲಿಲ್ಲ. ಯಾರೂ ಹಿಂಜರಿಯಲಿಲ್ಲ. ಸಾಯಂಕಾಲದ ತರುವಾಯ ಎರಡೂ ಸೈನ್ಯಗಳು ದಣಿದವುಗಳಾಗಿ ಕಾಳಗದ ಕಣವನ್ನು ಬಿಟ್ಟು, ವಿಶ್ರಾಂತಿಗೋಸುಗ ಶಿಬಿರವನ್ನು ಸೇರಿದವು.

ಈ ದಿನ ಮಧ್ಯರಾತ್ರಿಯಲ್ಲಿ ಗೋವಿಂದಸಿಂಹನ ಛಾವಣಿಯಲ್ಲಿ ಒಂದು ಅನಿಷ್ಟಕರ ಸಂಗತಿಯು ನಡೆಯಿತು. ಗೋವಿಂದಸಿಂಹನ ಸೈನಿಕರಲ್ಲಿ ಕೆಲವರು ತೀರ ಹೊಸಬರಿದ್ದರು. ಇವರು ಯುದ್ಧವಿದ್ಯೆಯಲ್ಲಿ ನುರಿತವರಲ್ಲ. ಒಂದು ದಿವಸ ಅವಿಶ್ರಾಂತ ನಡೆದ ಯುದ್ಧದಿಂದ ಇವರು ಭಯಗೊಂಡರು; ಯುದ್ಧಮಾಡುವುದು ಭಯಂಕರ ವ್ಯಾಪಾರವೆಂದು ಭಾವಿಸಿದರು. ಇಂತಹ ಐನೂರು ಸೈನಿಕರು ಯಾರಿಗೂ ಹೇಳದೆ ಕೇಳದೆ, ಶಿಬಿರವನ್ನು ಬಿಟ್ಟು ಪಲಾಯನಮಂತ್ರವನ್ನು ಹೇಳಿದರು.

ಮರುದಿವಸ ಮುಂಜಾನೆ ಗೋವಿಂದಸಿಂಹನ ಶಿಬಿರದಲ್ಲಿ ಮತ್ತೊಂದು ದುರ್ಘಟನೆಯು ಜರುಗಿತು. ಗೋವಿಂದಸಿಂಹನ ಸೈನ್ಯದಲ್ಲಿ ಐನೂರು ಪಠಾಣ ಅಮೀರರು ನವಕರಿ ಮಾಡುತ್ತಿದ್ದರು. ಈ ಅಮೀರರ ಬಳಿಯಲ್ಲಿ ಸ್ವಂತದ ಸೈನಿಕರಿದ್ದರು. ಈ ಅಮೀರರು ಗೋವಿಂದಸಿಂಹನಿಂದ ಇದುವರೆಗೆ ತಮ್ಮ ಹಾಗು ತಮ್ಮ ಕೈಕೆಳಗಿನ ದಂಡಾಳುಗಳ ಪಗಾರವನ್ನು ಪಡೆಯುತ್ತ ಬಂದಿದ್ದರು. ಗೋವಿಂದಸಿಂಹನ ಸೈನ್ಯದಲ್ಲಿ ಈ ಪಠಾಣರಷ್ಟೇ ಅಶ್ವಾರೋಹೀ ಸೈನಿಕರಾಗಿದ್ದರು.

ಈ ಅಮೀರರು ಯುದ್ಧವ್ಯವಸಾಯಿಗಳು. ತುರ್ಕರರಾಜ್ಯವು ಹಿಂದುಸ್ಥಾನದಲ್ಲಿ ನೆಲೆಗೊಂಡಂದಿನಿಂದ ಯುದ್ಧವೇ ವ್ಯವಸಾಯವಾಗಿ ಉಳ್ಳ ಇಂತಹ ಅಮೀರರು ಭಾಗ್ಯಪರೀಕ್ಷೆಗಾಗಿ ತಮ್ಮ ದೇಶವನ್ನು ಬಿಟ್ಟು ಈ ದೇಶಕ್ಕೆ ಬರುತ್ತಿದ್ದರು. ತಮ್ಮ ಕೈಕೆಳಗಿನ ಸೈನಿಕರೊಡನೆ ಯಾವ

ನೊಬ್ಬ ಅರಸನ ಬಳಿಯಲ್ಲಿ ನವಕರಿಗೆ ನಿಲ್ಲುತ್ತಿದ್ದರು. ಇವರಲ್ಲಿ ಸ್ಥಿರತೆಯಿರಲಿಲ್ಲ. ಒಮ್ಮೆ ಒಬ್ಬ ಅರಸನ ಪಕ್ಷಹಿಡಿದು ಯುದ್ಧಮಾಡುತ್ತಿದ್ದರು. ಮತ್ತೊಮ್ಮೆ ಮತ್ತೊಬ್ಬ ಅರಸನ ಪಕ್ಷವನ್ನವಲಂಬಿಸಿ ಕಾಳಗ ಮಾಡುತ್ತಿದ್ದರು. ಹೇಗಾದರೂ ಮಾಡಿ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಿದ್ದರು.

ಗೋವಿಂದಸಿಂಹನ ನವಕರರಾದ ಈ ಅಮೀರರು ಮೊದಲು ದಿಲ್ಲಿಯ ಬಾದಶಹನ ದಂಡಿನಲ್ಲಿ ಚಾಕರಿ ಮಾಡುತ್ತಿದ್ದರು. ಮುಂದೆ ಕೆಲವು ದಿವಸಗಳಲ್ಲಿ ಇವರು ಬಾದಶಹನ ಕೋಪಕ್ಕೆ ಪಾತ್ರರಾದರು. ಬಾದಶಹನು ಇವರನ್ನು ತನ್ನ ದಂಡಿನಿಂದ ಹೊರದೂಡಿದ್ದಲ್ಲದೆ, ತನ್ನ ಕೈಕೆಳಗಿನ ಯಾವ ಅರಸನೂ ಇವರನ್ನು ನವಕರಿಗೆ ಇಟ್ಟುಕೊಳ್ಳಲಾಗದೆಂದು ಅಪ್ಪಣೆ ಮಾಡಿದನು. ಆದುದರಿಂದ ಅಮೀರರು ಗೋವಿಂದಸಿಂಹನ ಆಶ್ರಯವನ್ನು ಬಯಿಸಿದರು. ಗೋವಿಂದಸಿಂಹನಿಗೆ ಅಶ್ವಾರೋಹೀಸೈನಿಕರ ಅವಶ್ಯಕತೆಯಿದ್ದರೂ, ಅವನು ಪಠಾಣರನ್ನು ನಂಬುವವನಾಗಿರಲಿಲ್ಲ. ಕಾರಣ ಅವನು ಮೊದಲು ಈ ಪಠಾಣ ಅಮೀರರಿಗೆ ನವಕರಿಯನ್ನು ಕೊಡಲಿಕ್ಕೆ ಸಮ್ಮತಿಸಲಿಲ್ಲ. ಆದರೆ ಗೋವಿಂದಸಿಂಹನ ಮಿತ್ರನಾಗಿದ್ದ ಒಬ್ಬ ಫಕೀರನು ಈ ಅಮೀರರ ಬಗ್ಗೆ ಹೇಳಿಕೊಂಡದ್ದರಿಂದ ಕಡೆಗೆ ಗೋವಿಂದಸಿಂಹನು ಈ ಅಮೀರರನ್ನು ತನ್ನಲ್ಲಿ ಚಾಕರಿಗೆ ಇಟ್ಟುಕೊಂಡಿದ್ದನು; ಮತ್ತು ಅವರನ್ನು ಈ ವರೆಗೆ ಸರಿಯಾಗಿ ನಡಿಸಿಕೊಂಡಿದ್ದನು. ಆದರೆ ಕೃತಘ್ನರಾದ ಪಠಾಣರು ಒಡೆಯನ ಉಪಕಾರವನ್ನು ತೀರಿಸ ಬಯಿಸಲಿಲ್ಲ. ಉಂಡ ಮನೆಯ ಗಳ ಎಣಿಸುವುದಕ್ಕೆ ಸಿದ್ಧರಾದರು.

ಗೋವಿಂದಸಿಂಹನ ವೈರಿಗಳಾದ ಸಂಸ್ಥಾನಿಕರಿಗೆ ಈ ಅಮೀರರ ಅವಶ್ಯಕತೆಯಿತ್ತು. ಇವರಿಂದ ಕೆಲಸವಾಗಲಿ, ಆಗದಿರಲಿ, ಇವರು ಒಡೆಯುವುದರಿಂದ ಗೋವಿಂದಸಿಂಹನಪಕ್ಷವು ದುರ್ಬಲವಾಗುವುದರಲ್ಲಿ ಸಂದೇಹವಿರಲಿಲ್ಲ. ಆದುದರಿಂದ ಅವರು ಭೇದೋಪಾಯವನ್ನವಲಂಬಿಸಿ, ಈ

ಅಮೀರರಿಗೆ ಧನದಾಶೆಯನ್ನು ತೋರಿದರು; ಗೋವಿಂದಸಿಂಹನಿಗಿಂತ ಹೆಚ್ಚಿಗೆ ವೇತನವನ್ನು ಕೊಡುವೆವಲ್ಲದೆ, ಸುಲಿಗೆಯಲ್ಲಿ ಪಾಲು ಕೊಡುವೆವೆಂದು ಹೇಳಿದರು. ಅಮೀರರು ಧನಲೋಭದಿಂದ ಪ್ರೇರಿತರಾಗಿ ಗೋವಿಂದಸಿಂಹನ ಪಕ್ಷವನ್ನು ಬಿಟ್ಟು ಶತ್ರುಗಳ ಪಕ್ಷವನ್ನು ಸೇರಬಯಿಸಿದರು.

ಗೋವಿಂದಸಿಂಹನು ಇವರ ವರ್ತನವನ್ನು ನೋಡಿ ಗಾಬರಿಯಾದನು. ಯಾರು ದುಡ್ಡಿನ ಆಶೆಯಿಂದ ಯುದ್ಧ ವ್ಯವಸಾಯವನ್ನು ಮಾಡುವರೋ ಅಂಥ ಧನಪಿಶಾಚರಿಂದ ಇದಕ್ಕಿಂತಲೂ ಹೆಚ್ಚಿನ ಸದ್ವ್ಯವಹಾರವನ್ನು ಬಯಿಸಿದರೆ ಆಗುವುದೇನು? ಅಮೀರರು ಅನುಮತಿಯನ್ನು ಕೇಳಬಂದಾಗ, ಗೋವಿಂದಸಿಂಹನು ಅವರಿಗೆ ಬಹುಪ್ರಕಾರವಾಗಿ ಹೇಳಿಕೊಂಡನು:"ನಾನು ನಿಮ್ಮ ಸಂಕಟಸಮಯದಲ್ಲಿ ನಿಮಗೆ ಸಹಾಯಮಾಡಿದ್ದೆನು. ಬಾದಶಹನ ಅಪ್ಪಣೆಯ ವಿರುದ್ಧವಾಗಿ ನಿಮಗೆ ಆಶ್ರಯಗೊಟ್ಟಿದ್ದೆನು. ನೀವು ನನ್ನಿಂದ ಹಲವು ರೀತಿಯಿಂದ ಉಪಕಾರ ಹೊಂದಿದವರಾಗಿರುವಿರಿ. ಈ ವರೆಗೆ ನನಗೆ ನಿಮ್ಮಿಂದ ಯಾವ ಪ್ರಯೋಜನವೂ ಆಗಿರಲಿಲ್ಲ. ಆ ಪ್ರಯೋಜನವು ಈಗ ಆಗಬೇಕಿದೆ. ಇಂಥ ಸಮಯದಲ್ಲಿ ನೀವು ನನ್ನನ್ನು ಬಿಟ್ಟು ಹೊರಡುವುದೆ?" ಪಠಾಣರು ಗೋವಿಂದಸಿಂಹನ ಮಾತು ಕೇಳಲಿಲ್ಲ. ಕೃತಜ್ಞತೆಯಿಂದ ಪ್ರೇರಿತರಾಗಲಿಲ್ಲ. ತಾವು ಮೊದಲೇ ಸಂಕಲ್ಪ ಮಾಡಿಕೊಂಡಂತೆ ಗೋವಿಂದಸಿಂಹನ ಶಿಬಿರವನ್ನು ಬಿಟ್ಟು ನಡೆದರು.

ಗೋವಿಂದಸಿಂಹನ ಉಳಿದ ಸೈನಿಕರು ಭಯಗೊಂಡರು. ಇನ್ನು ತಮ್ಮ ಅವಸ್ಥೆ ಏನಾಗುವದೋ ಎಂದು ಚಿಂತಾಗ್ರಸ್ತರಾದರು. ಗೋವಿಂದಸಿಂಹನು ತನ್ನ ದಂಡಾಳುಗಳ ಈ ವಿಷಾದವನ್ನು ಹೋಗಲಾಡಿಸಲಿಕ್ಕೆ ಉಪದೇಶ ಮಾಡಿದನು; ಅವರನ್ನು ಹುರಿದುಂಬಿಸಿ ಕರಕೊಂಡು ಹೋಗಿ, ಒಮ್ಮಿಂದೊಮ್ಮೆಲೆ ಆ ಅಮೀರರ ಮೇಲೆ ಬಿದ್ದನು. ಅಮೀರರು ಗೋವಿಂದಸಿಂಹನ ಈ ಮುತ್ತಿಗೆಯಿಂದ ಗಾಬರಿಯಾದರು. ಅನಿವಾರ್ಯದಿಂದ ಯುದ್ಧಮಾಡಿದರು. ಕೆಲವರು ರಣಭೂಮಿಯಲ್ಲಿ ಮಡಿದರು. ಉಳಿದ

ವರು ಓಡಿಹೋಗಿ, ಶತ್ರುಶಿಬಿರದಲ್ಲಿ ಆಶ್ರಯಹೊಂದಿದರು.

ಸಂಸ್ಥಾನಿಕರ ಆನಂದಕ್ಕೆ ಪಾರಾವಾರವಿರಲಿಲ್ಲ. ಗೋವಿಂದಸಿಂಹನ ಬಲವು ಈ ರೀತಿ ಕಡಿಮೆಯಾದುದನ್ನು ನೋಡಿ, ಇನ್ನು ತಮಗೆ ಜಯವು ಸಿಕ್ಕೇ ಸಿಗುವುದೆಂದು ಪ್ರಮತ್ತರಾದರು. ಜಯಘೋಷ ಮಾಡುತ್ತ ಉತ್ಸಾಹದಿಂದ ಸಾಗಿ ಹೋಗಿ ಗೋವಿಂದಸಿಂಹನ ಸೇನೆಯನ್ನು ಮುತ್ತಿದರು. ಇದರಿಂದ ಮೊದಲು ಮೊದಲು ಗೋವಿಂದಸಿಂಹನು ಪರಾಜಯಗೊಳ್ಳುವ ಲಕ್ಷಣವು ತೋರಹತ್ತಿತು. ಗೋವಿಂದಸಿಂಹನು ದೊಡ್ಡ ಚಿಂತೆಯಲ್ಲಿ ಬಿದ್ದನು. ಈ ಸಮಯದಲ್ಲಿ ಗೋವಿಂದಸಿಂಹನ ಗೆಳೆಯನಾದ ಫಕೀರನು ಕೆಲವರು ಅಶ್ವಾರೋಹಿಗಳನ್ನೂ, ಕೆಲವರು ಕಾಲಾಳುಗಳನ್ನೂ ಸಂಗಡ ಕರಕೊಂಡು ಸಹಾಯಕ್ಕೆ ಬಂದನು. ಗೋವಿಂದಸಿಂಹನ ಚಿಂತೆಯು ಹಿಮ್ಮೆಟ್ಟಿತು. ಅವನು ತನ್ನ ಸೈನಿಕರನ್ನು ಹುರಿದುಂಬಿಸಿ ಆವೇಶದಿಂದ ಹೋರಾಡಹತ್ತಿದನು. ವೈರಿಗಳಾದರೂ ಕಡಿಮೆಯವರಾಗಿರಲಿಲ್ಲ. ಅವರ ಹೊಡೆತದಿಂದ ಗೋವಿಂದಸಿಂಹನು ಹಲವು ಸಾರೆ ಸಂಕಟಗಳಿಗೊಳಗಾಗಬೇಕಾಯಿತು. ಹಿಂಡೂರ ಸಂಸ್ಥಾನಿಕನಾದ ಹರಿಚಾಂದನ ಬಾಣದಿಂದ ಗೋವಿಂದಸಿಂಹನ ದೇಹವು ಕ್ಷತವಿಕ್ಷತವಾಯಿತು. ಆದರೂ ಗೋವಿಂದಸಿಂಹನು ಹೆದರಲಿಲ್ಲ. ಹಿಂಜರಿಯಲಿಲ್ಲ. ಮತ್ತಷ್ಟು ಹುರುಪಿನಿಂದ ಯುದ್ಧಮಾಡಹತ್ತಿದನು. ಗುರಿಹೊಡೆಯುವುದರಲ್ಲಿ ಅತ್ಯಂತ ನಿಪುಣನಾಗಿದ್ದ ಇವನು ಬಾಣಗಳ ಮಳೆಯು ಸುರಿಸಹತ್ತಿದನು. ಹರಿಚಾಂದನು ಈ ಹೊಡೆತಗಳನ್ನು ತಾಳಲಾರದೆ, ಯುದ್ಧಭೂಮಿಯಲ್ಲಿ ಪ್ರಾಣಬಿಡಬೇಕಾಯಿತು.

ಗೋವಿಂದಸಿಂಹನ ಉತ್ಸಾಹಕ್ಕೂ, ಸಾಹಸಕ್ಕೂ, ಶೂರತ್ವಕ್ಕೂ ಮೇರೆಯಿರಲಿಲ್ಲ. ಅವನು ಶರೀರದ ಗಾಯಗಳನ್ನು ಲಕ್ಷಿಸದೆ, ಒಂದೇ ಸಮನೆ ಯುದ್ಧಕ್ರಿಯೆಯನ್ನು ನಡಿಸಿದ್ದನು. ಇವನ ಬಾಣಗಳಿಗೆ ಹಲವರು ಸಂಸ್ಥಾನಿಕರು ಆಹುತಿಯಾದರು. ವೈರಿಗಳು ಯುದ್ಧಮಾಡಲಾರದವ

ರಾಗಿ ಹಿಂದೆಗೆಯಹತ್ತಿದರು. ಫತ್ತೆಸಾಹನು ತನ್ನವರು ಬಹು ಜನರು ಮಡಿದುಹೋದುದನ್ನು ನೋಡಿ, ಭಯಗೊಂಡು ಯುದ್ಧಭೂಮಿಯನ್ನು ಬಿಟ್ಟು ಓಡಿಹೋದನು. ಭೀಮಚಾಂದನು ಬಹಳವಾಗಿ ಪ್ರಯತ್ನಿಸಿದರೂ ಓಡಿಹೋಗುತ್ತಿರುವ ತನ್ನ ಸೈನಿಕರನ್ನು ತಡೆಯಲು ಸಮರ್ಥನಾಗಲಿಲ್ಲ. ಭೀಮಚಾಂದನ ಸೈನಿಕರು ದಿಕ್ಕಾಪಾಲಾಗಿ ಓಡಿಹೋದರು. ಭೀಮಚಾಂದನೂ ಪ್ರಾಣದ ಆಶೆಯಿಂದ ಪಲಾಯನ ಮಾಡಬೇಕಾಯಿತು. ಶೀಖರು ಇವರನ್ನು ಬೆನ್ನಟ್ಟಿ ಬಹು ದೂರದವರೆಗೆ ಓಡಿಸಿ ಬಂದರು. ಬಳಿಕ ಜಯಘೋಷ ಮಾಡುತ್ತ ತಮ್ಮ ಶಿಬಿರವನ್ನು ಸೇರಿದರು.

ಈ ಯುದ್ಧದಲ್ಲಿ ಗೋವಿಂದಸಿಂಹನಿಗೆ ಹಾನಿಯಾಗಲಿಲ್ಲವೆಂದಲ್ಲ; ಹಲವರು ಶೀಖಸರದಾರರು ಯುದ್ಧಭೂಮಿಯಲ್ಲಿ ಮಡಿದರು. ಜಯದ ಆನಂದದ ಉದ್ರೇಕವು ಕಡಿಮೆಯಾಗುತ್ತಲೆ ಗೋವಿಂದಸಿಂಹನು ಈ ವೀರರ ಮರಣಕ್ಕೋಸುಗ ಬಹಳ ಹಳಹಳಿಸಿದನು.

ಗೋವಿಂದಸಿಂಹನು ಮಾಡಿದ ಯುದ್ಧಗಳಲ್ಲಿ ಇದೇ ಮೊದಲನೆ ಯುದು; ಹಾಗು ಮಹತ್ವದ್ದು. ಈ ಯುದ್ಧದಲ್ಲಿ ಜಯಶಾಲಿಯಾದುದರಿಂದ ಗೋವಿಂದಸಿಂಹನ ಉತ್ಸಾಹವು ಇಮ್ಮಡಿಸಿತು. ಶೀಖರ ಆತ್ಮವಿಶ್ವಾಸವು ಬೆಳೆಯಿತು. ಅವರು ಗೋವಿಂದಸಿಂಹನ ಹೇಳಿಕೆಯಂತೆ ಯುದ್ಧಪ್ರಧಾನ ಜನಾಂಗವಾಗಿ ಮೊಗಲರ ಹಾವಳಿಯನ್ನು ಎದುರಿಸುವ ಧೈರ್ಯಹೊಂದಲು ತಕ್ಕವರಾದರು.

ಗೋವಿಂದಸಿಂಹನು ಜಯದ ತರುವಾಯದಲ್ಲಿ ಸಢಗರದಿಂದ ಪಾವಟಾಗ್ರಾಮಕ್ಕೆ ಹೋದನು. ಒಂದು ಸಭೆಯನ್ನು ಕೂಡಿಸಿ, ಶೀಖವೀರರ ಉತ್ಸಾಹವನ್ನೂ ವೀರತ್ವವನ್ನೂ ಹೊಗಳಿದನು. ಯುದ್ಧದಲ್ಲಿ ವಿಶೇಷತರದ ಕಾರ್ಯಗಳನ್ನು ಮಾಡಿದ ಶೂರಶ್ರೇಷ್ಠರಿಗೆ ಇನಾಮುಗಳನ್ನು ಹಂಚಿದನು. ಹಾಗು ತನ್ನ ಮಿತ್ರನಾದ ಫಕೀರನ ವಿಷಯದಲ್ಲಿ ಕೃತಜ್ಞತೆಯನ್ನು ತೋರ್ಪಡಿಸಿದ್ದಲ್ಲದೆ, ಅವನಿಗೆ ಒಂದು ಶಿರಸ್ತ್ರಾಣವನ್ನೂ

ಸ್ವಂತ ಅಕ್ಷರಗಳಿಂದ ಬರೆದ ಪ್ರಶಂಸಾಪತ್ರವನ್ನೂ ಕೊಟ್ಟು ಬಹುಮಾನಿಸಿದನು. ಈ ಪತ್ರವು ಆ ಫಕೀರನ ವಂಶಜರಲ್ಲಿ ಇಂದಿಗೂ ಅದೆ.

---

## ಅಧ್ಯಾಯ ೧೨-ರಾಜ್ಯವಿಸ್ತಾರ.

ಗೋವಿಂದಸಿಂಹನು ಮುಂದೆ ಒಂದುವರ್ಷದವರೆಗೆ ಪಾವಟಾಗ್ರಾಮದಲ್ಲಿದ್ದನು. ತರುವಾಯ ತಾಯಿಯು ಕರೆಕಳುಹಿದ್ದರಿಂದ ಪರಿವಾರದೊಡನೆ ಆನಂದಪುರಕ್ಕೆ ಪ್ರಯಾಣ ಬೆಳಿಸಿದನು. ಗೋವಿಂದಸಿಂಹನು ಆನಂದಪುರಕ್ಕೆ ಆಗಮಿಸಿದ ಸುದ್ದಿಯನ್ನು ಕೇಳಿ ಶಿಷ್ಯಸಮೂಹವು ಆನಂದಿತವಾಗಿ, ಕಾಣಿಕೆಗಳನ್ನು ತಕ್ಕೊಂಡು ಗುರುವಿನ ದರ್ಶನಕ್ಕೆ ಬರಹತ್ತಿತು. ಗೋವಿಂದಸಿಂಹನು ಆದರದಿಂದ ಶಿಷ್ಯರ ಸ್ವಾಗತಮಾಡಿ, ಅವರು ಉಪಹಾರವಾಗಿ ಸಮರ್ಪಿಸಿದ ಶಸ್ತ್ರಾಸ್ತ್ರಗಳನ್ನು ಸ್ವೀಕರಿಸಿ, ಅವರನ್ನು ತನ್ನ ಹತ್ತರ ಇಟ್ಟುಕೊಂಡು, ಅವರಿಗೆ ಧರ್ಮ ಹಾಗು ರಾಜಕಾರಣದ ವಿಷಯವಾಗಿ ಉಪದೇಶ ಮಾಡಹತ್ತಿದನು. ಶಿಷ್ಯರು ಗುರುವಿನ ಉದಾತ್ತವರ್ತನದಿಂದ ಮುಗ್ಧರಾಗಿ ಹೋದರು. ಗುರುಸಾನ್ನಿಧ್ಯವನ್ನು ಬಿಟ್ಟು ತಮ್ಮ ತಮ್ಮ ಸ್ಥಳಕ್ಕೆ ಮರಳಿ ಹೋಗುವುದನ್ನು ಮರೆದಿದ್ದರು. ಯಾವನು ಎರಡು ತಿಂಗಳಿದ್ದನು, ಯಾವನು ನಾಲ್ಕು ತಿಂಗಳಿದ್ದನು, ಯಾವನು ಆರು ತಿಂಗಳಿದ್ದನು, ಹೀಗಾಗಿ ಗುರುಗೃಹವು ಸದಾ ಶಿಷ್ಯರಿಂದ ತುಂಬಿರುತ್ತಿತ್ತು.

ಗುರುವು ಶಿಷ್ಯರಿಗೆ ಕೇವಲ ಉಪದೇಶಮಾಡಿ ತಣಿಯಲಿಲ್ಲ. ಪ್ರಸಂಗವಿಶೇಷದಲ್ಲಿ ಅವರೆಲ್ಲರು ಯುದ್ಧಮಾಡುವುದಕ್ಕೆ ಉಪಯುಕ್ತರಾಗಬೇಕೆಂದು, ದೊರೆತ ಅಲ್ಪ ವೇಳೆಯಲ್ಲಿಯೆ ಅವರಿಗೆ ಶಕ್ಯವಿರುವಷ್ಟು ಯುದ್ಧವಿದ್ಯೆಯನ್ನು ಕಲಿಸಿದನು. ತನಗಿರುವ ಅಶ್ವಾರೋಹೀಸೈನಿಕರ

ಕೊರತೆಯನ್ನು ಹೋಗಲಾಡಿಸಿಕೊಳ್ಳಲಿಕ್ಕೆ ಶಿಷ್ಯರ ಸಹಾಯವನ್ನು ದೊರಕಿಸಿ, ಅಶ್ವಾರೋಹಿಗಳ ಒಂದು ಗುಂಪನ್ನು ಸಿದ್ಧಗೊಳಿಸಿದನು.

ಗೋವಿಂದಸಿಂಹನಿಗೆ ಶೀಖರ ಸ್ವತಂತ್ರರಾಜ್ಯವನ್ನು ಸ್ಥಾಪಿಸುವ ಮನಸ್ಸು ಮೊದಲಿನಿಂದಲೂ ಇತ್ತು. ಕಾರಣ ಇವನು ಸೈನಿಕರು ತಯಾರಾಗುತ್ತಲೆ ಭದ್ರವಾದ ದುರ್ಗಗಳನ್ನು ಕಟ್ಟಿಸುವುದರಲ್ಲಿ ಮನಸ್ಸು ಹಾಕಿದನು; ಹಲವು ಬಲವಾದ ಕೋಟೆಗಳನ್ನು ಕಟ್ಟಿಸಿದನು. ಇವುಗಳಲ್ಲಿ ಲೋಹಗಡ, ಆನಂದಗಡ ಮೊದಲಾದವು ಮುಖ್ಯವಾದವುಗಳು. ಇವುಗಳ ಬಲದಿಂದ ಗೋವಿಂದಸಿಂಹನ ಪ್ರಭಾವವು ಮತ್ತಷ್ಟು ಹೆಚ್ಚಿತು. ಈ ಸಮಯದಲ್ಲಿ ಉತ್ತರಪಂಜಾಬದಲ್ಲಿ ಮೊಗಲರ ಶಕ್ತಿಯು ಹೆಚ್ಚೋ ಗೋವಿಂದಸಿಂಹನ ಶಕ್ತಿಯು ಹೆಚ್ಚೋ ಎಂಬದರ ನಿರ್ಣಯವಾಗದಷ್ಟು ಗೋವಿಂದಸಿಂಹನ ಬಲವು ಬೆಳೆದಿತ್ತು. ಗೋವಿಂದಸಿಂಹನ ಉತ್ತಮವಾದ ವ್ಯವಸ್ಥೆಯಿಂದ ಉತ್ತರಪಂಜಾಬದಲ್ಲಿ ಕಳವು, ಕೊಲೆ-ಸುಲಿಗೆಗಳು ಹೇಳ ಹೆಸರಿಲ್ಲದಾಗಿ ಹೋಗಿದ್ದವು. ಈ ತರದ ನೀಚ ಹೋರೆಯನ್ನು ಮಾಡುವ ದುಷ್ಟರಲ್ಲಿ ಕೆಲವರು ಗೋವಿಂದಸಿಂಹನ ಪ್ರಭಾವದಿಂದ ಸುಷ್ಟರಾಗಿ, ಶಿಷ್ಯತ್ವವನ್ನು ವಹಿಸಿ, ಉಳಿದ ಪ್ರಜೆಗಳಂತಿರಹತ್ತಿದ್ದರು. ಮತ್ತೆ ಹಲವರು ಸುಷ್ಟರಾಗದವರಾಗಿ ದೂರ ಓಡಿ ಹೋಗಿ, ಗೋವಿಂದಸಿಂಹನ ರಾಜ್ಯದಲ್ಲಿಯು ತಮ್ಮ ಹಾವಳಿಯನ್ನು ಇಲ್ಲದಂತೆ ಮಾಡಿದ್ದರು.

ಗೋವಿಂದಸಿಂಹನ ವರ್ಚಸ್ಸು ಹೆಚ್ಚುತ್ತ ನಡೆದುದನ್ನು ನೋಡಿ ಸಂಸ್ಥಾನಿಕರು ಭಯಗೊಂಡರು. ವೈರವನ್ನಳಿದು ಗೆಳೆತನ ಬಳೆಸುವ ಸಂಕಲ್ಪ ಮಾಡಿಕೊಂಡರು. ಗೋವಿಂದಸಿಂಹನಿಗಾದರೂ ಇದೇ ಬೇಕಿತ್ತು. ಇವನು ಪಂಜಾಬದ ಈ ಸಣ್ಣದೊಡ್ಡ ರಾಜರ ಶಕ್ತಿಯನ್ನೆಲ್ಲ ಒಂದುಗೂಡಿಸಿ, ಒಂದು ಪ್ರಬಲಶಕ್ತಿಯನ್ನಾಗಿ ಮಾಡಿ, ಮೊಗಲರನ್ನು ಹಣ್ಣಿಗೆ ತರಬೇಕೆಂದು ಬಹುದಿವಸಗಳಿಂದಲೂ ಆಶಿಸಿದ್ದನು. ಕಾರಣ ಇವನು ಈ ಸುಸಂಧಿಯನ್ನು ವ್ಯರ್ಥಕಳಕೊಳ್ಳಲಿಲ್ಲ. ಸಂಸ್ಥಾನಿಕರ

ಸಂಗಡ ಮಿತ್ರತ್ವದ ಒಪ್ಪಂದ ಮಾಡಿಕೊಂಡು, ಮೊಗಲರೊಡನೆ ಸಂಗ್ರಾಮ ಹೂಡುವ ಸೌರಣೆಗೆ ತೊಡಗಿದನು.

ಮೊಗಲರ ಮೇಲೆ ದಂಡೆತ್ತಿ ಹೊರಡುವುದು ಇವನಿಗೆ ಬೇಕಿರಲಿಲ್ಲ. ಮೊಗಲರೇ ವೈರಿಮೇಲೆ ಸಾಗಿ ಬರಲೆಂದೂ, ಆ ವರೆಗೆ ಯುದ್ಧದ ಸಿದ್ಧತೆಯನ್ನು ಮಾಡಿಕೊಳ್ಳಬೇಕೆಂದೂ ಇವನು ಎಣಿಸಿದ್ದನು. ಇವನು ಕಾಲು ಕೆದರಿ ಜಗಳವ ತೆಗೆಯುವುದಕ್ಕಾಗಿ ಸಂಸ್ಥಾನಿಕರಿಗೆ ಮೊಗಲರಿಗೆ ಸಲ್ಲಿಸಬೇಕಿದ್ದ ಕಪ್ಪಕಾಣಿಕೆಗಳನ್ನು ಕೊಡಕೂಡದೆಂದು ಅಪ್ಪಣೆ ಮಾಡಿದನು; ಹಾಗು ಪ್ರಜೆಗಳು ಮೊಗಲ ಅಧಿಕಾರಿಗಳಿಗೆ ತೆರಿಗೆಯನ್ನು ಕೊಡಬಾರದೆಂದು ನಿರ್ಣಯಿಸಿದನು.

ಈ ಸಮಯದಲ್ಲಿ ಔರಂಗಜೇಬನು ದಕ್ಷಿಣಹಿಂದುಸ್ಥಾನದಲ್ಲಿದ್ದು, ವಿಜಾಪೂರ-ಗೋವಳಕೊಂಡ ರಾಜ್ಯಗಳನ್ನು ಕೈವಶ ಮಾಡಿಕೊಳ್ಳುವುದರಲ್ಲಿ ತೊಡಗಿದ್ದನು. ಮೊಗಲ ಸಾಮ್ರಾಜ್ಯದ ಶೂರಸೇನಾಪತಿಗಳೂ, ಬಲಿಷ್ಠರಾದ ಅಸಂಖ್ಯ ಸೈನಿಕರೂ ಈ ಯುದ್ಧದಲ್ಲಿ ತೊಡಗಿದ್ದರು. ಆದುದರಿಂದ ಉತ್ತರಹಿಂದುಸ್ಥಾನದಲ್ಲಿಯು ಮೊಗಲರ ಬಲವು ತೀರಕ್ಷೀಣವಾಗಿತ್ತು. ಕಾರಣ ಔರಂಗಜೇಬನಿಗೆ ಪಂಜಾಬದಲ್ಲಿ ನಡೆದ ಗದ್ದಲದಕಡೆಗೆ ಲಕ್ಷ್ಯವಿರಿಸುವುದಕ್ಕಾಗಲಿ, ಮುರಿಯುವದಕ್ಕೋಸುಗ ಸೇನೆಯನ್ನು ಕಳುಹುವುದಕ್ಕಾಗಲಿ ಅವಕಾಶವುಂಟಾಗಲಿಲ್ಲ. ಇದರಿಂದ ಗೋವಿಂದಸಿಂಹನ ಯುದ್ಧದ ಸಿದ್ಧತೆಗೆ ಸಾಕಷ್ಟು ಸಮಯ ದೊರೆಯಿತು.

ಬಾದಶಹನು ಗೋವಳಕೊಂಡದ ಜಯದ ತರುವಾಯ ಕೊಂಚ ವಿಶ್ರಾಂತಿಯನ್ನು ಹೊಂದಿದನು. ಈ ವಿರಾಮದ ಸಮಯದಲ್ಲಿ ಅವನ ಲಕ್ಷ್ಯವು ಪಂಜಾಬದ ಕಡೆಗೆ ಹೊರಳಿತು. ಅವನು ಕ್ರಮೇಣ ಬೆಳೆಯುತ್ತ ನಡೆದಿದ್ದ ಶೀಖರ ಶಕ್ತಿಯನ್ನು ಸಮೂಲ ನಾಶಗೊಳಿಸುವುದಕ್ಕೋಸುಗ ದೊಡ್ಡ ದಂಡನ್ನು ಕಳುಹಿಕೊಟ್ಟನು.

ಮೊಗಲ ಸೇನಾವಾಹಿನಿಯು ಬಹು ಸಡಗರದಿಂದ ಪಂಜಾಬವನ್ನು

ಪ್ರವೇಶಿಸಿದ ಸುದ್ದಿಯನ್ನು ಕೇಳಿ, ಸಂಸ್ಥಾನಿಕರು ಹೆದರಿದರು. ಅವರ ಮುನ್ನಿನ ಉತ್ಸಾಹವು ಕಡಿಮೆಯಾಗಹತ್ತಿತು. ಆದರೆ ಗೋವಿಂದಸಿಂಹನು ಹೆದರಲಿಲ್ಲ. ಸಂಸ್ಥಾನಿಕರ ಸ್ಥಿತಿಯನ್ನು ತಿಳಿದು, ಅವರಿಗೆ ಹಲವು ವಿಧದಿಂದ ಉಪದೇಶಮಾಡಿ, ಲುಪ್ತವಾಗುತ್ತ ನಡೆದಿದ್ದ ಉತ್ಸಾಹವನ್ನು ಪುನರುಜ್ಜೀವನಗೊಳಿಸಿದನು. ಮೊಗಲ ಸೈನಿಕರ ಒಂದು ತಂಡವು ಜಮ್ಮು ಪಟ್ಟಣದ ಮೇಲೆ ಸಾಗಿಹೋಯಿತು. ಮತ್ತೊಂದು ಪಂಗಡವು ನಾಹನ, ಕಹಲೂರ ಮೊದಲಾದ ಸಂಸ್ಥಾನಿಕರ ಮೇಲೆ ದಾಳಿಮಾಡಿತು. ಮುಸಲ್ಮಾನರ ಈ ಏರಿಬರುವಿಕೆಯನ್ನು ನೋಡಿ ಒಬ್ಬಿಬ್ಬರು ಸಂಸ್ಥಾನಿಕರು ಬೆದರಿ ಕಂಗೆಟ್ಟರು. ಇವರು ಗೋವಿಂದಸಿಂಹನೊಡನೆ ವಿಶ್ವಾಸಘಾತುಕತನದಿಂದ ವರ್ತಿಸಿ ಮೊಗಲರನ್ನು ಕೂಡಿದರು. ನಾದೌನದ ವಿಶಾಲಭೂಮಿಯಲ್ಲಿ ಪಂಜಾಬದ ಸಂಸ್ಥಾನಿಕರಿಗೂ ಮೊಗಲರಿಗೂ ಯುದ್ಧ ನಡೆಯಿತು (೧೬೮೮). ಈ ಯುದ್ಧದಲ್ಲಿ ಮೊದಲು ಸಂಸ್ಥಾನಿಕರು ಪರಾಜಯ ಹೊಂದಿದರು. ಸಂಸ್ಥಾನಿಕರ ಬಲವು ಒಪಳವಾಗಿ ಕಡಿಮೆಯಾಯಿತು. ಆದರೆ ಈ ಸಮಯದಲ್ಲಿ ಗೋವಿಂದಸಿಂಹನ ಸೈನ್ಯವು ಸಂಸ್ಥಾನಿಕರ ಸಹಾಯಕ್ಕೆ ಧಾವಿಸಿಬಂದಿತು. ತರುವಾಯ ನಡೆದ ಯುದ್ಧದಲ್ಲಿ ಮೊಗಲರು ಸಂಪೂರ್ಣವಾಗಿ ಸೋತು ಪಲಾಯನ ಮಾಡಿದರು. ಶೀಖರು ಇವರನ್ನು ಬಹುದೂರ ಬೆನ್ನಟ್ಟಿಹೋಗಿ ಚದುರಿಸಿಬಿಟ್ಟರು.

ಮೊಗಲರು ಸುಮ್ಮನಿರಲಿಲ್ಲ. ಪರಾಜಯದ ಪ್ರತಿಕಾರಕ್ಕಾಗಿ ಪುನಃ ಕಾಳಗಕ್ಕೆ ಅಣಿಯಾದರು. ಚದುರಿಹೋಗಿದ್ದ ಸೈನ್ಯವನ್ನು ಒಂದೆಡೆಯಲ್ಲಿ ಒಟ್ಟುಗೂಡಿಸಿದರು. ಹಾಗು ದಿಲ್ಲಿಯಿಂದ ಹೊಸಸೈನ್ಯವನ್ನು ಸಹಾಯಕ್ಕೆ ಕರಿಸಿಕೊಂಡರು. ಮತ್ತೆ ಯುದ್ಧ ನಡೆಯಿತು. ಈ ಯುದ್ಧದಲ್ಲೂ ಮೊಗಲರು ಸೋತು ಓಡಿಹೋಗಬೇಕಾಯಿತು. ಈ ಯುದ್ಧಕ್ಕೆ ಗೋವಿಂದಸಿಂಹನು ಆಗಮಿಸಿ, ಸಂಸ್ಥಾನಿಕರಿಗೆ ಹಲವು ರೀತಿಯಿಂದ ಸಹಾಯಮಾಡಿದ್ದನು.

ಮೊಗಲರು ಇಷ್ಟರಿಂದ ತಣಿಯಲಿಲ್ಲ. ಪರಾಜಯವನ್ನೊಪ್ಪಿಕೊಂಡು ಯುದ್ಧಮಾಡುವುದನ್ನು ಬಿಟ್ಟುಕೊಡಲಿಲ್ಲ. ಲಾಹೋರದ ಸುಭೇದಾರನಾದ ದಿಲಾವರಖಾನನು ತನ್ನ ಮಗನಾದ ರುಸ್ತುಮಖಾನನ ಕೈಕೆಳಗೆ ದೊಡ್ಡ ದಂಡನ್ನು ಕೊಟ್ಟು, ಗೋವಿಂದಸಿಂಹನ ಮೇಲೆ ಕಳುಹಿಕೊಟ್ಟನು. ರುಸ್ತುಮಖಾನನು ಬಹು ಪ್ರಯತ್ನಪಟ್ಟನಾದರೂ, ಗೋವಿಂದಸಿಂಹನನ್ನು ಸೋಲಿಸಲಿಕ್ಕೆ ಸಮರ್ಥನಾಗಲಿಲ್ಲ. ಯುದ್ಧಭೂಮಿಯ ಕೆಳಗಿನ ಮೇರೆಯಲ್ಲಿ ಒಂದು ಸಣ್ಣ ನದಿಯು ಹರಿಯುತ್ತಿತ್ತು. ಯುದ್ಧಕಾಲದ ಒಂದು ರಾತ್ರಿಯು ಕಗ್ಗತ್ತಲೆಯಲ್ಲಿ ದೊಡ್ಡ ಮಳೆಯಾಯಿತು. ಈ ವೃಷ್ಟಿಯಿಂದ ಪರ್ವತದ ಅಂಚಿಗಿರುವ ಆ ನದಿಯು ಮೇರೆ ಮೀರಿ ಹರಿಯ ಹತ್ತಿತು. ಈ ಸಮಯದಲ್ಲಿ ಮೊಗಲರ ಶಿಬಿರವು ನದಿಯ ದಂಡೆಯಲ್ಲಿತ್ತು. ನದಿಯ ಮಹಾಪೂರವು ಮೊಗಲರ ಸಾಮಾನುಗಳನ್ನೂ, ಶಸ್ತ್ರಾಸ್ತ್ರಗಳನ್ನೂ ತೇಲಿಸಿಕೊಂಡು ಹೋಗಿ ಬಿಟ್ಟಿತು. ಈ ವಸ್ತುಗಳೊಡನೆ ಎಷ್ಟೋ ಸೈನಿಕರೂ ಮಹಾಪೂರದ ಹೊಡತಕ್ಕೆ ಸಿಕ್ಕು ತಮ್ಮ ಪ್ರಾಣವನ್ನು ಕಳಕೊಳ್ಳಬೇಕಾಯಿತು.

ಈ ಸುದ್ದಿಯು ಲಾಹೋರಕ್ಕೆ ಮುಟ್ಟಿತು. ಸುಭೇದಾರನು ಮಗನ ದುರ್ದಶೆಯನ್ನು ಭಾವಿಸಿ ವ್ಯಥೆಗೊಂಡು, ಸಹಾಯಕ್ಕೋಸುಗ ಹೊಸದಂಡನ್ನು ಕಳುಹಿಕೊಟ್ಟನು. ಆದರೆ ಪ್ರಯೋಜನವಾಗಲಿಲ್ಲ. ಮೊಗಲರು ಮೇಲಿಂದಮೇಲೆ ಪರಾಜಿತರಾದರು. ರುಸ್ತುಮಖಾನನು ಜಯದ ಆಶೆಯನ್ನು ಬಿಟ್ಟುಕೊಟ್ಟು ಆ ಗುಡ್ಡುಗಾಡು ಪ್ರದೇಶದಿಂದ ಪಲಾಯನ ಮಾಡಿದನು.

ಔರಂಗಜೇಬನು ಗೋವಿಂದಸಿಂಹನು ಗೆಲ್ಲುತ್ತ ನಡೆದುದನ್ನು ಕೇಳಿ ಹೆದರಿದನು. ಯಾವದೇ ರೀತಿಯಿಂದಾಗಲಿ ಗೋವಿಂದಸಿಂಹನನ್ನು ಬಗ್ಗಿಸಲೇ ಬೇಕೆಂದು ನಿರ್ಧರಿಸಿದನು. ತನ್ನ ಮಗನಾದ ಮುಅಜಿಮನ ಕೈಯಲ್ಲಿ ದೊಡ್ಡ ಸೈನ್ಯವನ್ನು ಕೊಟ್ಟು, ಗೋವಿಂದಸಿಂಹನೊಡನೆ ಯುದ್ಧ

ಮಾಡುವುದಕ್ಕೆ ಕಳುಹಿಕೊಟ್ಟನು. ಮುಅಜಿಮನು ಸ್ವತಃ ಯುದ್ಧಕ್ಕೆ ಹೋಗಲಿಲ್ಲ. ತನ್ನ ಕೈಕೆಳಗಿನ ಸೇನಾಪತಿಯಾದ ಮಿರ್ಜಾಬೇಗನನ್ನು ಗೋವಿಂದಸಿಂಹನ ಮೇಲೆ ಕಳುಹಿ ತಾನು ಲಾಹೋರದ ಕಡೆಗೆ ನಡೆದನು. ಮಿರ್ಜಾಬೇಗನು ಹುರುಪಿನಿಂದ ಹೊರಟು ಗೋವಿಂದಸಿಂಹನನ್ನು ಎದುರಿಸಿದನು. ಯುದ್ಧವು ನಡೆಯಿತು. ಗೋವಿಂದಸಿಂಹನು ಮೊದಲು ಸೋತಂತೆ ನಟಿಸಿ ಪಲಾಯನ ಮಾಡಿ, ಗುಡ್ಡಗಾಡು ಪ್ರದೇಶದಲ್ಲಿ ಅಡಗಿಕೊಂಡನು. ಮಿರ್ಜಾಬೇಗನು ದೊರೆತ ಜಯದಿಂದ ಉನ್ಮತ್ತನಾಗಿ ನಗರ-ಗ್ರಾಮಗಳನ್ನು ಸುಲಿಯುತ್ತಲೂ, ಕೊಲೆಗಳನ್ನು ಮಾಡಿಸುತ್ತಲೂ ಮುಂದೆ ಸಾಗಿದನು. ಇವನ ಅತ್ಯಾಚಾರದಿಂದ ಜನರು ಕಳವಳಗೊಂಡರು. ಜನರ ಈ ಸ್ಥಿತಿಯನ್ನು ನೋಡಿ ಗೋವಿಂದಸಿಂಹನ ಹೃದಯವು ಕನಿಕರಗೊಂಡಿತು. ಗೋವಿಂದಸಿಂಹನು ಒಂದು ದಿನ ಮಧ್ಯರಾತ್ರಿಯಲ್ಲಿ ಒಮ್ಮೆಂದೊಮ್ಮೆಲೆ ಮೊಗಲರ ಶಿಬಿರವನ್ನು ಮುತ್ತಿ, ಭಯಂಕರ ಕೋಲಾಹಲವನ್ನೆಬ್ಬಿಸಿದನು. ಮೊಗಲರು ಕಂಗೆಟ್ಟು ದಿಕ್ಕಾಪಾಲಾಗಿ ಓಡಹತ್ತಿದರು. ಅವರಿಗೆ ತಮ್ಮ ಸಾಮಾನುಗಳ ಹಾಗು ಶಸ್ತ್ರಾಸ್ತ್ರಗಳ ಎಚ್ಚರಿಕೆ ಸಹ ಉಳಿಯಲಿಲ್ಲ. ಇವೆಲ್ಲವೂ ಗೋವಿಂದಸಿಂಹನ ಹಸ್ತಗತವಾದವು. ಗೋವಿಂದಸಿಂಹನು ದಿಕ್ಕೆಟ್ಟು ಓಡುತ್ತಿರುವ ಮೊಗಲರ ಬೆನ್ನಹತ್ತಿ ಎಂಟು ಹರದಾರಿಗಳ ವರೆಗೆ ಹೋದನು. ಮೊಗಲರು ಪೂರಾ ಭಯಗೊಂಡರು. ಇವರಿಗೆ ಪುನಃ ಗೋವಿಂದಸಿಂಹನ ಸಂಗಡ ಯುದ್ಧ ಹೂಡಲಿಕ್ಕೆ ಧೈರ್ಯವಾಗಲಿಲ್ಲ.

ಈ ಜಯದಿಂದ ಗೋವಿಂದಸಿಂಹನ ವರ್ಚಸ್ಸು ಬಹಳ ಹೆಚ್ಚಿತು. ಇವನು ಪಂಜಾಬದ ಆ ಗುಡ್ಡುಗಾಡು ಪ್ರದೇಶದಲ್ಲೆಲ್ಲ ತನ್ನ ಅಧಿಕಾರವನ್ನು ನೆಲೆಗೊಳಿಸಿದನು. ಪಂಜಾಬದಲ್ಲಿ ಉತ್ತರ ಮೇರೆಯಿಂದ ದಕ್ಷಿಣಕ್ಕೆ ಶತದ್ರುನದಿಯ ಕೆಳದಂಡೆಯಲ್ಲಿರುವ ರೋಪಡದ ವರೆಗಿನ ಪ್ರದೇಶವು

ಗೋವಿಂದಸಿಂಹನ ಅಧಿಕಾರಕ್ಕೊಳಪಟ್ಟಿತು. ಈ ಭಾಗದಲ್ಲಿರುವ ಸಂಸ್ಥಾನಿಕರು ಗೋವಿಂದಸಿಂಹನ ಸಾಮಂತಭೂಪತಿಗಳಾದರು.

## ಅಧ್ಯಾಯ ೧೩-ನಿರ್ಮಲೀ.

ಗೋವಿಂದಸಿಂಹನು ಆನಂದಪುರದಲ್ಲಿ ಹೋಳೀಹುಣ್ಣಿವೆಯ ದಿವಸ ಕಾಮದಹನೋತ್ಸವವನ್ನು ಹಮ್ಮಿದನು (೧೬೯೧). ಈ ಉತ್ಸವವು ದೊಡ್ಡ ಪ್ರಮಾಣದಿಂದ ನಡೆಯುತಕ್ಕದ್ದಿತ್ತು. ಹಾಗು ಈ ಉತ್ಸವದಲ್ಲಿ ಕುಲಸ್ತ್ರೀಯರು ಸಹ ಸೇರಬಹುದಿತ್ತು. ಕಾರಣ ಈ ಉತ್ಸವದ ಸಂಗತಿಯನ್ನು ಮೊದಲೇ ತಿಳಿದಿದ್ದ ಹಲವರು ಸ್ತ್ರೀಪುರುಷರು ದೂರದೂರದಿಂದ ಆನಂದಪುರಕ್ಕೆ ಆಗಮಿಸಿದ್ದನು.

ಉತ್ಸವಕ್ಕೋಸುಗ ಪಟ್ಟಣದ ಹೊರಭಾಗದಲ್ಲಿರುವುದೊಂದು ಉದ್ಯಾನದಲ್ಲಿ ಮಂಟಪವು ರಚಿಸಲ್ಪಟ್ಟಿತ್ತು. ಮಂಟಪದಲ್ಲಿಯ ಸುಂದರವಾದ ಗದ್ದುಗೆಯ ಮೇಲೆ ಕಾಮದೇವನ ಪ್ರತಿಷ್ಠಾಪನೆಯಾಗಿತ್ತು. ಗೋವಿಂದಸಿಂಹನು ಪೂಜಾರಿಯಾಗಿ, ದೇವರ ಬಳಿಯಲ್ಲಿ ಕುಳಿತು ಪೂಜೆಮಾಡುತ್ತಿದ್ದನು. ಜನರು ಗುಂಪುಗುಂಪಾಗಿ ಬಂದು, ಮಂಟಪದಲ್ಲಿ ನೆರೆದಿದ್ದರು. ಉತ್ಸುಕತೆಯಿಂದ ದೇವಪೂಜೆಯನ್ನು ಅವಲೋಕಿಸುತ್ತಿದ್ದರು. ದೇವಪೂಜೆಯು ಒಳ್ಳೇ ಸಡಗರದಿಂದ ಸಾಗಿತ್ತು.

ನೋಡುತ್ತ ನಿಂತವರಲ್ಲಿಯ ಒಬ್ಬಳ ದೃಷ್ಟಿಯು ಗೋವಿಂದಸಿಂಹನ ಮೇಲೆ ಬಿತ್ತು. ಅವಳು ಆ ದೃಷ್ಟಿಯನ್ನು ತಿರುಗಿ ತಕ್ಕೊಳ್ಳದಾದಳು. ಬೇರೆ ಕಡೆಗೆ ಹರಿಯುವಂತೆ ಮಾಡದಾದಳು. ಒಮ್ಮೆ ನಟ್ಟನೋಟವು ಅಲ್ಲಿಯೇ ಸ್ಥಿರವಾಗಿ ಉಳಿಯಿತು. ಅವಳ ಹೃದಯದಲ್ಲಿ ಗೋವಿಂದಸಿಂಹನ ಪ್ರತಿಷ್ಠಾಪನೆಯಾಯಿತು. ಅವಳು ಗೋವಿಂದಸಿಂಹ

ನನ್ನು ಕಾಮಿಸಿದಳು. ಪೂಜಾರಿಯು ಪ್ರತ್ಯಕ್ಷ ಕಾಮದೇವನೆಂದೂ, ಪೂಜೆಹೊಂದುತ್ತಿದ್ದುದು ಅವನ ಮೂರ್ತಿಯೆ ಎಂದೂ ಅವಳಿಗೆ ಬೋಧೆಯಾಯಿತು.

ಇವಳು ಲಾಹೋರ ನಿವಾಸಿಯು. ಇವಳ ಹೆಸರು ಅನುಪಕುವರ. ಇವಳಿಗೀಗ ಸುಮಾರು ಇಪ್ಪತ್ತು-ಇಪ್ಪತ್ತೆರಡು ವರ್ಷಗಳಾಗಿರಬಹುದು. ಇವಳು ಕ್ಷತ್ರಿಯ ಕುಲದಲ್ಲಿ ಹುಟ್ಟಿದವಳು. ಕ್ಷತ್ರಿಯ ವೀರನನ್ನು ವರಿಸಿದ್ದಳು. ಆದರೆ ವಿಧಾತನು ಇವಳ ಪತಿಯನ್ನು ಈ ಜಗತ್ತಿನಲ್ಲಿ ಬಹು ಕಾಲವಿರಗೊಡಲಿಲ್ಲ. ಕಾರಣ ಅನುಪಕುವರಳು ಈಗ ವಿಧವೆಯಾಗಿದ್ದಳು.

ಅನುಪಕುವರಳು ಅತ್ಯಂತ ರೂಪವತಿಯು. ಮೇಲೆ ಎಣೆಯಿಲ್ಲದ ಐಶ್ವರ್ಯದ ಅಧಿಕಾರಿಣಿಯು. ಆದರೆ ವಿಧವೆಯಾದದ್ದರಿಂದ ಇವೆಲ್ಲ ಇದ್ದರೂ ಇಲ್ಲದಂತಾಗಿದ್ದುವು. ಇವಳ ರೂಪವೂ ಸಂಪತ್ತಿಯೂ ಲಾಹೋರ ನಿವಾಸಿಗಳ ಆಲೋಚನೆಯ ವಿಷಯಗಳಾಗಿದ್ದವು. ಅನುಪಕುವರಳು ಪತಿವಿಯೋಗದ ತರುವಾಯ ಸಾಧುವೃತ್ತಿಯಿಂದಿರತೊಡಗಿದ್ದಳು. ವಿಲಾಸ ತರಂಗಗಳಲ್ಲಿ ತನ್ನ ಅಂಗವನ್ನೆಂದಿಗೂ ಬೀಳಗೊಡೆನೆಂದು ಪ್ರತಿಜ್ಞೆ ಮಾಡಿಕೊಂಡಿದ್ದಳು. ಆದರೆ ಇಂದು ಆ ಪ್ರತಿಜ್ಞೆಯು ನಡೆಯಲಿಲ್ಲ. ಗೋವಿಂದಸಿಂಹನನ್ನು ನೋಡಿದೊಡನೆಯೆ ಅವಳ ಮನೋನಿಶ್ಚಯವೆಲ್ಲ ಎತ್ತೋ ಹೋಗಿಬಿಟ್ಟಿತು. ಅವಳು ಪುನಃ ವಿಷಯೋಪಭೋಗಕ್ಕೆ ಮನಸ್ಸು ಮಾಡಿದಳು.

ಅನುಪಕುವರಳ ಇಚ್ಛೆಯಂತೆ ಗೋವಿಂದಸಿಂಹನು ಸುಲಭಪ್ರಾಪ್ಯನಾಗಿರಲಿಲ್ಲ. ಯಾಕೆಂದರೆ ಅವನು ಸ್ತ್ರೀಪ್ರೇಮವನ್ನು ಬಹಳ ತುಚ್ಛವಾಗೆಣಿಸುತ್ತಿದ್ದನು. ಅವನ ಯಾವತ್ತೂ ಒಲವು ಮೊಗಲರಿಂದ ತನ್ನ ಧರ್ಮಾನುಯಾಯಿಗಳಿಗೆ ಉಂಟಾಗುತ್ತಿರುವ ತೊಂದರೆಯನ್ನು ನಿವಾರಿಸುವದರಲ್ಲಿತ್ತು. ಅವನು ವಿಷಯವಾಸನೆಗಳನ್ನು ತುಚ್ಛೀಕರಿಸಿ, ಕರ್ತವ್ಯ ಸಾಧನೆಯಲ್ಲಿ ತೊಡಗಿದ್ದನು. ಕಾರಣ ಅವನು ಸುಂದರಿಯರ ಸೌಂದ

ರ್ಯದ ಉಪಾಸಕನಾಗುವ ಸಂಭವವಿದ್ದಿಲ್ಲ.

ಅನುಪಕುವರಳು ತನ್ನ ಮನದಿಚ್ಛೆಯನ್ನು ಗೆಳತಿಯರನೇಕರಿಗೆ ತಿಳುಹಿದಳು. ಅವರಲ್ಲಾರೂ ಅವಳಿಗೆ ಇಷ್ಟವಾದ ಉತ್ತರವನ್ನು ಕೊಡಲಿಲ್ಲ. ಎಲ್ಲರೂ ಈ ಆಶೆಯನ್ನು ಬಿಡೆಂದು ಬೋಧಿಸಿದರು. ಅನುಪಕುವರಳಿಗೆ ವ್ಯಭಿಚಾರಿ ಪ್ರೇಮವು ಗಂಟುಬಿದ್ದಿತ್ತು. ಜನರ ನಿಂದೆಯಿಂದಲೂ, ಸಹಚರಿಯರ ನಿರಾಶಾಜನಕ ಉತ್ತರಗಳಿಂದಲೂ ಅವಳ ಪ್ರೇಮವು ಕಡಿಮೆಯಾಗಲಿಲ್ಲ. ಮತ್ತಷ್ಟು ಬೆಳೆಯತೊಡಗಿತು. ಕಡೆಯಲ್ಲವಳು ಮಿತಿಮೀರಿದ ಪ್ರೇಮದಿಂದ ಉನ್ಮಾದಿನಿಯಾದಳು. ಈ ಉನ್ಮಾದದ ಭರದಲ್ಲಿ ಎಂಥ ಸಾಹಸಕಾರ್ಯವನ್ನು ಮಾಡಲಿಕ್ಕೂ ಅವಳು ಹಿಂಜರಿಯದಾದ್ದಳು.

ಗೋವಿಂದಸಿಂಹನಿಗೆ ಸಾಧು-ಸಂನ್ಯಾಸಿಗಳಲ್ಲಿ ಬಹಳ ಭಕ್ತಿಯಿದ್ದಿತು. ತನ್ನ ಅಲ್ಪ ಸಂಖ್ಯಾಕರಾದ ಸೈನಿಕರನ್ನು ಕಟ್ಟಿಕೊಂಡು, ಪ್ರಬಲ ಪರಾಕ್ರಮಿಗಳಾದ ಮೊಗಲರೊಡನೆ ಹೋರಾಡಿ ಜಯದೊರಕಿಸಬೇಕಾದರೆ, ದೇವರ ಅನುಗ್ರಹವೂ, ಸಾಧು-ಸಂನ್ಯಾಸಿಗಳ ಆಶೀರ್ವಾದವೂ ಅವಶ್ಯವಾಗಿ ಬೇಕೆಂದು ಅವನು ನಂಬಿದ್ದನು. ಕಾರಣ ಅವನು ಸಾಧು-ಸಂನ್ಯಾಸಿಗಳ ಆಗಮನ ವಾರ್ತೆಯನ್ನು ಕೇಳಿದರೆ, ಅವರ ದರ್ಶನಕ್ಕೆ ಧಾವಿಸುತ್ತಿದ್ದನು. ಅವರನ್ನು ಆದರದಿಂದ ಕರೆತಂದು, ಊಟ-ಉಪಚಾರಗಳಿಂದ ಸತ್ಕರಿಸಿ, ಅವರ ಅನುಗ್ರಹ ಸಂಪಾದನೆಗೆ ಯತ್ನಿಸುತ್ತಿದ್ದನು. ಅನುಪಕುವರಳು ಪ್ರಯತ್ನಪೂರ್ವಕವಾಗಿ ಈ ಸಂಗತಿಯನ್ನು ಅರಿತಳು. ಗೋವಿಂದಸಿಂಹನ ಪ್ರಾಪ್ತಿಯ ಸಲುವಾಗಿ ಒಂದು ಹಂಚಿಕೆಯನ್ನು ಹಾಕಿದಳು.

ಅನುಪಕುವರಳು ಸಂನ್ಯಾಸಿಯ ಸೋಗು ಹಾಕಿಕೊಂಡಳು. ತನ್ನ ಧನಬಲದಿಂದ ಕೆಲವರು ಶಿಷ್ಯರನ್ನು ಸಂಗ್ರಹಿಸಿಕೊಂಡಳು. ಬಳಿಕ ಅವಳು ಲಾಹೋರವನ್ನು ಬಿಟ್ಟುಹೊರಟು, ಆನಂದಪುರದ ಹತ್ತಿರ ಇರುವ

ಅಡವಿಯಲ್ಲಿ ವಾಸಮಾಡಹತ್ತಿದಳು. ಬಾಹ್ಯತಃ ಸಂನ್ಯಾಸಿಯಂತೆ ಕಾಲ ಯಾಪನೆ ಮಾಡಹತ್ತಿದಳು. ವೇಷಧಾರಿಗಳಾದ ಶಿಷ್ಯರು ಅತ್ತಿತ್ತ ಅಲೆದು ತಮ್ಮ ಗುರುವಿನ ಮಹತಿಯನ್ನು ಪ್ರಚಾರಪಡಿಸಹತ್ತಿದರು. ಸಂನ್ಯಾಸಿಯ ಖ್ಯಾತಿಯು ಸುತ್ತಲೂ ಹಬ್ಬಿತು. ಗೋವಿಂದಸಿಂಹನೂ ಈ ಸಂಗತಿಯನ್ನು ಕೇಳಿದನು. ಸಂನ್ಯಾಸಿಯ ದರ್ಶನಾಪೇಕ್ಷೆಯನ್ನು ತಳೆದನು. ತನ್ನೊಬ್ಬ ಶಿಷ್ಯನನ್ನು ಸಂನ್ಯಾಸಿಯ ಬಳಿಗೆ ಕಳುಹಿದನು. ಆ ಶಿಷ್ಯನು ಸಂನ್ಯಾಸಿಯ ವೇಷದಲ್ಲಿದ್ದ ಅನುಪಕುವರಳ ದರ್ಶನ ತಕ್ಕೊಂಡನು. ತನ್ನ ಗುರುವಿನ ಮನೋಗತವನ್ನು ತಿಳುಹಿದನು. ಅನುಪಕುವರಳು "ನಿಮ್ಮ ಗುರುವು ಕತ್ತಲೆಯ ಮಧ್ಯರಾತ್ರಿಯಲ್ಲಿ ಏಕಾಕಿಯಾಗಿ ಕೌಪೀನವನ್ನು ಧರಿಸಿ ಬಂದರೆ, ನಾನವನ ದರ್ಶನತಕ್ಕೊಳ್ಳುವೆನು." ಎಂದು ಹೇಳಿದಳು. ಶಿಷ್ಯನು ಗುರುವಿನ ಹತ್ತಿರಬಂದು ಈ ಸಂಗತಿಯನ್ನು ನಿವೇದಿಸಿಕೊಂಡನು. ಗೋವಿಂದಸಿಂಹನು ಸಂನ್ಯಾಸಿಯ ಹೇಳಿಕೆಯಂತೆ ದರ್ಶನಕ್ಕೆ ಹೊರಡುವುದನ್ನು ನಿಶ್ಚಯಿಸಿಕೊಂಡನು.

ಕೃಷ್ಣಪಕ್ಷದ ಮಧ್ಯರಾತ್ರಿಯ ಸಮಯ. ಚರಾಚರ ಪ್ರಾಣಿಗಳೆಲ್ಲವೂ ಅಂಧಕಾರದಲ್ಲಿ ಮುಳುಗಿ ಹೋಗಿವೆ. ಆಕಾಶದಲ್ಲಿ ಶುಭ್ರವೂ ಉಜ್ವಲವೂ ಆದ ನಕ್ಷತ್ರಗಳ ಪ್ರಕಾಶ. ವನಾಂತರದಲ್ಲಿ ಹೊನ್ನೆಹುಳಗಳ ಮಿಣಮಿಣಕು ಬೆಳಕು. ಇಂತಹ ವೇಳೆಯಲ್ಲಿ ಗೋವಿಂದಸಿಂಹನು ಸಾಹಸದಿಂದ ಕಪಟಸಾಧುವಿನ ವಾಸಸ್ಥಳದ ಕಡೆಗೆ ನಡೆದನು.

ಗೋವಿಂದಸಿಂಹನು ಆಶ್ರಮಕ್ಕೆ ಬಂದ ವೇಳೆಯಲ್ಲಿ ಸಂನ್ಯಾಸಿಯು ಯೋಗಸಾಧನೆಯಲ್ಲಿ ತೊಡಗಿದ್ದನು. ಸಮೀಪದಲ್ಲಿರುವ ಗಿಡದ ಕೆಳಗೆ ಅಗ್ನಿಯು ಉರಿಯುತ್ತಿತ್ತು. ಆ ಪ್ರಕಾಶದಲ್ಲಿ ಗೋವಿಂದಸಿಂಹನು ಸಂನ್ಯಾಸಿಯ ಸುಕುಮಾರ ಮೂರ್ತಿಯನ್ನು ನೋಡಿ ಮುಗ್ಧನಾಗಿಹೋದನು. ಭಕ್ತಿಭರದಿಂದ ಸಂನ್ಯಾಸಿಗೆ ಸಾಷ್ಟಾಂಗ ನಮಸ್ಕಾರ ಮಾಡಿದನು. ಸಂನ್ಯಾಸಿಯು ಆಶೀರ್ವಾದ ಮಾಡಿ, ಆದರದಿಂದ ಮಾತಾಡಹತ್ತಿದನು. ಕೆಲ

ಹೊತ್ತಿನವರೆಗೆ ಮಾತುಕತೆಗಳು ನಡೆದವು. ಸಂನ್ಯಾಸಿಯ ವ್ಯವಹಾರ ದಿಂದ ಗೋವಿಂದಸಿಂಹನು ಪರಮ ಹರುಷಿತನಾದನು.

ಬಳಿಕ ಸಂನ್ಯಾಸಿಯು ಗೋವಿಂದಸಿಂಹನಿಗೆ ಅಲ್ಲಿಯೆ ಕುಳ್ಳಿರಹೇಳಿ, ತಾನು ಬೇರೆ ಕಡೆಗೆ ಹೋದನು. ಕೆಲ ಹೊತ್ತಿನಮೇಲೆ ತಿರುಗಿ ಬಂದನು. ಈಗ ಆ ಸಂನ್ಯಾಸಿಯು ವೇಷವಿರಲಿಲ್ಲ. ಅನುಪಕುವರಳು ತನ್ನ ನಿಜರೂಪ ವನ್ನು ತೊಟ್ಟಿದ್ದಳು. ಅವಳು ಬಹುಮೂಲ್ಯ ವಸ್ತ್ರಭೂಷಣಗಳಿಂದ ಭೂಷಿ ತಳು. ಅವಳ ಸರ್ವಾಂಗಗಳಲ್ಲಿ ರತ್ನಖಚಿತವಾದ ಆಭರಣಗಳು. ಅವಳ ಮುಖದಲ್ಲಿ ಮಂದಹಾಸವು. ಹೃದಯದಲ್ಲಿ ಬಲವಾದ ಕಾಮವಾಸನೆಯು. ಗೋವಿಂದಸಿಂಹನು ಸಂನ್ಯಾಸಿಯ ಬದಲು ಅಪ್ಸರೆಯಂತಿರುವ ಈ ತರುಣಿ ಯನ್ನು ನೋಡಿ ಚಕಿತನಾಗಿ ಹೋದನು.

ಅನುಪಕುವರಳು ಗೋವಿಂದಸಿಂಹನ ಕಾಲುಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಪ್ರೇಮಭಿಕ್ಷೆಯನ್ನು ಬೇಡಿದಳು. ಕಂಪಿತ ಕಂಠದಿಂದ ಹೇಳತೊಡಗಿದಳು:“ನಾನು ಸಾಧುವಲ್ಲ. ಲಾಹೋರದ ನಿವಾಸಿನಿಯಾದ ಅನುಪಕುವರಳು. ನಿನ್ನ ರೂಪದಿಂದ ಮುಗ್ಧಳು. ನಿನ್ನನ್ನು ನೋಡುವು ದಕ್ಕಾಗಿಯೆ ಈ ವ್ಯೂಹವನ್ನು ರಚಿಸಿದೆನು. ನನ್ನ ಈ ಅಪರೂಪ ರೂಪ ವನ್ನೂ, ಅಪರಿತೃಪ್ತ ಆಕಾಂಕ್ಷೆಯನ್ನೂ, ನವ ಯೌವನವನ್ನೂ, ಅತುಲೈ ಶ್ವರ್ಯವನ್ನೂ ನಿನಗೆ ಸಮರ್ಪಿಸಿದ್ದೇನೆ. ನೀನು ಇವುಗಳನ್ನು ಸ್ವೀಕರಿಸಿ, ನನ್ನ ಜೀವನವನ್ನೂ, ಯೌವನವನ್ನೂ ಸಾರ್ಥಕಗೊಳಿಸು. ನಿನ್ನನ್ನು ಹೊಂದದ ಈ ಜೀವನವು ವ್ಯರ್ಥ!”

ಅನುಪಕುವರಳ ಈ ಮಾತು ಕೇಳಿ, ಗೋವಿಂದಸಿಂಹನಿಗೆ ವಜ್ರಾ ಘಾತವಾದಂತಾಯಿತು. ಅವನು ಏದ್ಯುದ್ವೇಗದಿಂದ ಕೆಲ ಹೆಜ್ಜೆ ಹಿಂದೆ ಸರಿದು ಕ್ರೋಧಕಂಪಿತ ಸ್ವರದಿಂದ ಹೇಳಹತ್ತಿದನು:“ಎಲೆ ದುರಾಚಾರಿಣಿ, ಧರ್ಮಗುರುವಾದ ಈ ಗೋವಿಂದಸಿಂಹನನ್ನು ಜಾರನನ್ನಾಗಿ ಮಾಡಬಯಿ ಸಿದ ನಿನ್ನ ಸಾಹಸವೆಷ್ಟು? ನಿನಗೆ ನಾಚುಗೆಯಿಲ್ಲವೆ? ನಿನ್ನ ತಾರುಣ್ಯಕ್ಕೂ,

ರೂಪಕ್ಕೂ ಧಿಕ್ಕಾರವಿರಲಿ! ನಿನ್ನ ಐಶ್ವರ್ಯಕ್ಕೆ ಶತಧಿಕ್ಕಾರವಿರಲಿ!! ನೀನು ಹೆಂಗಸೆಂದು ಸುಮ್ಮನೆ ಬಿಟ್ಟಿರುವೆನು! ಪಿಶಾಚಿಯೆ, ದೂರ ನಡೆ!!!''

ಅನುಪಕುವರಳಿಂದ ಸಹಿಸುವುದಕ್ಕಾಗಲಿಲ್ಲ. ಅವಳು ಅತಿಕೋಪ ದಿಂದ ಅಂದದ್ದೇನಂದರೆ:''ಮೂರ್ಖನೆ, ನನ್ನ ಅವಮಾನ ಮಾಡಬಯಿಸಿದ ನಿನ್ನೀ ಸಾಹಸವು ನಿನ್ನನ್ನು ನಾಶಮಾಡದೆ ಬಿಡದು! ಕಳ್ಳನಂತೆ ಇಲ್ಲಿಗೆ ಬಂದು, ನನ್ನ ಪ್ರೇಮಯಾಚನೆಯನ್ನು ಧಿಕ್ಕರಿಸಿದೆಯಾ? ತಡೆ, ಇದರ ಫಲ ವನ್ನು ತೀವ್ರವೇ ಅನುಭವಿಸುವೆ!'' ಅನುಪಕುವರಳು ತನ್ನ ಅನುಯಾಯಿ ಗಳಿಗೆ ಗೋವಿಂದಸಿಂಹನನ್ನು ಹಿಡಿದು ಹಾಕುವಂತೆ ಆಜ್ಞಾಪಿಸಿದಳು.

ಅನುಪಕುವರಳ ಶಿಷ್ಯರು ಸಮೀಪದಲ್ಲಿಯೆ ಅಡಗಿದ್ದರು. ಒಡೆ ಯುಳ ಆಜ್ಞೆಯನ್ನು ಕೇಳಿದ ಅವರು ಗೋವಿಂದಸಿಂಹನನ್ನು ಹಿಡಿಯುವು ದಕ್ಕೆ ಧಾವಿಸಿ ಬಂದರು. ಗೋವಿಂದಸಿಂಹನು ಹತಬುದ್ಧಿಯುಳ್ಳವನಾಗಿ ಹೋದನು. ಆದರೆ ಸುಮ್ಮನಿದ್ದರೆ ನಡೆಯುವಂತಿರಲಿಲ್ಲ. ಏನಾದರೂ ಯುಕ್ತಿಯನ್ನು ಹುಡುಕಿ ಪಾರಾಗಲೇ ಬೇಕಿತ್ತು. ಕಾರಣ ಪ್ರತ್ಯುತ್ಪನ್ನ ಮತಿಯಾದ ಆ ಮಹಾತ್ಮನು ಕತ್ತಲೆಯಲ್ಲಿ ಪಲಾಯನ ಮಾಡತೊಡಗಿ ದನು. ಹಿಡಿಯಲಿಕ್ಕೆ ಬರುತ್ತಿರುವ ಆ ಜನರು ಒದರುವಂತೆ ತಾನೂ 'ಕಳ್ಳ' 'ಹಿಡಿಯಿರಿ' ಎಂದು ಒದರುತ್ತ ಅಲ್ಪಾವಕಾಶದಲ್ಲಿಯೆ ಅಂಧಕಾರ ಡಲ್ಲಿ ಅದೃಶ್ಯನಾಗಿ ಹೋದನು.

ಗೋವಿಂದಸಿಂಹನು ಮನೆಗೆ ತಿರುಗಿ ಬಂದಬಳಿಕ ತನ್ನ ಶಿಷ್ಯರಿಗೆ ನಡೆದ ಸಂಗತಿಯನ್ನು ಹೇಳಿದನು. ಹಾಗು ತಾನು ಧರಿಸಿದ್ದ ಕೌಪೀನ ವನ್ನು ತೆಗೆದು, ಮುಖ್ಯಶಿಷ್ಯನಾದ ವೀರಸಿಂಹನ ಕೈಯಲ್ಲಿ ಕೊಟ್ಟು, ಈ ಸಂಗತಿಯ ನೆನಪು ಚಿರಕಾಲವುಳಿಯುವುದಕ್ಕಾಗಿ ಶೀಖಧರ್ಮದಲ್ಲಿ ಒಂದು ಹೊಸಪಂಥವನ್ನು ಸ್ಥಾಪಿಸುವ ಅಪ್ಪಣೆ ಮಾಡಿದನು. ವೀರಸಿಂಹನು ಗುರುವಿನ ಅನುಜ್ಞೆಯಂತೆ ನಿರ್ಮಲೀ ಅಂದರೆ ಪವಿತ್ರ ಎಂಬ ಹೆಸರಿನ ನೂತನ ಪಂಥವನ್ನು ಸ್ಥಾಪಿಸಿದನು.

ನಿರ್ಮಲೀಪಂಥದ ಶೀಖರು ಪಂಡಿತರು. ಸಂಸ್ಕೃತಸಾಹಿತ್ಯವನ್ನು ಅಭ್ಯಾಸ ಮಾಡಿದವರು. ಇವರಲ್ಲನೇಕರು ವೇದಾಂತಪಾರದರ್ಶಿಗಳು. ಇವರು ಉದ್ದವಾದ ಕೂದಲುಗಳನ್ನು ಇರಿಸುವರು; ಹಾಗು ಕೆಂಪು ಛಾಯೆಯುಳ್ಳ ಹಳದೀಬಣ್ಣದ ಬಟ್ಟೆಗಳನ್ನು ಧರಿಸುವರು.

---

## ಅಧ್ಯಾಯ ೧೪-ಮುಖವಾಲದ ಯುದ್ಧ.

ಆ ಸಮಯದಲ್ಲಿ ಪಂಜಾಬದಲ್ಲಿ ಹಲವರು ಸಂಸ್ಥಾನಿಕರಿದ್ದರೆಂದು ನಾವು ಹಿಂದೆ ಹೇಳಿದ್ದೇವೆ. ಈ ಸಂಸ್ಥಾನಿಕರು ಕ್ರಮಶಃ ಹೆಚ್ಚುತ್ತ ನಡೆದಿದ್ದ ಗೋವಿಂದಸಿಂಹನ ಉನ್ನತಿಯನ್ನು ಮನಸಾ ಪ್ರೀತಿಸಲಿಲ್ಲ. ಇವರು ಮತ್ಸರಗ್ರಸ್ತರಾಗಿ ಒಳಗಿಂದೊಳಗೆ ಕುದಿಯುತ್ತಿದ್ದರು. ಯಾಕೆಂದರೆ, ಇವರಿಗೆ ಗೋವಿಂದಸಿಂಹನನ್ನು ಪ್ರಕಾಶರೀತಿಯಿಂದ ಎದುರಿಸಿ, ಜಯ ದೊರಕಿಸುವ ಆಶೆಯಿರಲಿಲ್ಲ. ಈ ವೇಳೆಯಲ್ಲಿ ಕಹಲೂರ ಸಿಂಹಾಸನದ ಮೇಲೆ ಅಜಮೇರಚಂದ್ರನೆಂಬವನು ಅಧಿಷ್ಠಿತನಾದನು. ಇವನಿಗೆ ಗೋವಿಂದಸಿಂಹನನ್ನು ಕಂಡರೆ ಆಗುತ್ತಿರಲಿಲ್ಲ. ಇವನು ಯಾವುದೇ ರೀತಿಯಿಂದಾಗಲಿ, ಗೋವಿಂದಸಿಂಹನನ್ನು ನಾಶಗೊಳಿಸಬೇಕೆಂದು ಸಂಕಲ್ಪ ಮಾಡಿಕೊಂಡವನಾಗಿದ್ದನು. ಇವನು ತನ್ನ ಈ ಮನೋಬಯಕೆಯು ಪೂರ್ಣತೆಗಾಗಿ ಸಂಸ್ಥಾನಿಕರಲ್ಲಿ ಚಳವಳವನ್ನೆಬ್ಬಿಸಿದನು. ಗುಪ್ತರೀತಿಯಿಂದ ಪತ್ರವ್ಯವಹಾರ ನಡಿಸಿ ಸಂಸ್ಥಾನಿಕರ ಸಂಘವನ್ನು ಸ್ಥಾಪಿಸಲಿಕ್ಕೆ ಪ್ರಯತ್ನಪಟ್ಟನು. ಎಲ್ಲ ಸಂಸ್ಥಾನಿಕರನ್ನು ಒಂದೆಡೆಯಲ್ಲಿ ಒಟ್ಟುಗೂಡಿಸಿ, ಅವರನ್ನು ಗೋವಿಂದಸಿಂಹನ ವಿರುದ್ಧ ಹುರಿಗೊಳಿಸಿದನು. ಸಂಸ್ಥಾನಿಕರಲ್ಲನೇಕರು ಅಜಮೇರಚಂದ್ರನ ಮಾತಿಗೆ ತಲೆದೂಗಿದರು. ಗೋವಿಂದಸಿಂಹನ ವಿರುದ್ಧ ಶಸ್ತ್ರವೆತ್ತುವುದಕ್ಕೆ ಸಿದ್ಧರಾದರು. ಇವರು ಅಜಮೇರಚಂದ್ರನು ತಮ್ಮ ಮುಖ್ಯಸ್ಥನಾಗಿರಬೇಕೆಂದು ಹೇಳಿದರು. ಅಜಮೇರ

ಚಂದ್ರನು ಇದಕ್ಕೆ ಒಪ್ಪಿಕೊಂಡನು. ಎಲ್ಲರ ನೆರವಿನಿಂದ ದೊಡ್ಡ ಸೈನ್ಯವನ್ನು ಕೂಡಹಾಕಿಕೊಂಡನು. ಸೇನಾಪತಿಯಾಗಿ ಈ ದೊಡ್ಡ ಸೈನ್ಯದೊಡನೆ ವಿಜಯಸಂಪಾದನೆಗೆ ಹೊರಟು, ಒಮ್ಮಿಂದೊಮ್ಮೆಲೆ ಆನಂದಪುರಕ್ಕೆ ಮುತ್ತಿಗೆ ಹಾಕಿದನು. ಆದರೆ ಗೋವಿಂದಸಿಂಹನ ಪರಾಕ್ರಮಕ್ಕೆ ಎದುರಾಗಿ ನಿಲ್ಲಲಿಕ್ಕೆ ಸಮರ್ಥನಾಗಲಿಲ್ಲ. ಯುದ್ಧದಲ್ಲಿ ಪರಾಜಿತನಾದ ಅಜಮೇರಚಂದ್ರನು ನಿರಾಶನಾಗಿ ಪಲಾಯನ ಮಾಡಬೇಕಾಯಿತು.

ಪರಾಜಯದಿಂದ ತಳಮಳಿಸಿದ ಅಜಮೇರಚಂದ್ರನು ಸಿರಹಿಂದದ ಸುಭೇದಾರನ ಸಹಾಯವನ್ನು ಕೇಳಿಕೊಳ್ಳ ಹೊರಟನು. ಸುಭೇದಾರನು ಇಪ್ಪತ್ತುಸಾವಿರ ರೂಪಾಯಿಗಳನ್ನು ಪ್ರತಿಫಲವಾಗಿ ತಕ್ಕೊಂಡು ಎರಡು ಸಾವಿರ ಸೈನಿಕರನ್ನು ಅಜಮೇರಚಂದ್ರನ ಸಹಾಯಕ್ಕೆ ಕೊಟ್ಟನು. ಉತ್ಸಾಹಿತನಾದ ಅಜಮೇರಚಂದ್ರನು ಈ ಹೊಸಸೈನ್ಯವನ್ನೂ ತನ್ನ ಸೇನೆಯನ್ನೂ ತಕ್ಕೊಂಡು, ಮತ್ತೆ ಗೋವಿಂದಸಿಂಹನ ಮೇಲೆ ಸಾಗಿ ಹೋದನು. ಶೀಖರು ವಿಶೇಷ ಶೌರ್ಯವನ್ನೂ, ಸಾಹಸವನ್ನೂ ತೋರಿದರಾದರೂ, ಈ ಸಾರೆ ಜಯಶಾಲಿಗಳಾಗಲಿಲ್ಲ. ಗೋವಿಂದಸಿಂಹನು ಹಲವು ಸಾರೆ ಸೋತು, ಕೋಟೆಯೊಳಗೆ ಹೊಕ್ಕು, ಬಾಗಿಲವನ್ನು ಭದ್ರಪಡಿಸಿಕೊಂಡು ಕುಳಿತನು. ಆದರೆ ಕೋಟೆಯಲ್ಲಿ ಅನ್ನದ ಸಂಗ್ರಹವು ಸಾಕಷ್ಟು ಇರಲಿಲ್ಲ. ಇದಕ್ಕೋಸುಗ ಗೋವಿಂದಸಿಂಹನು ಅನುಕೂಲಸಮಯವು ದೊರೆತಾಗ ಕೋಟೆಯಿಂದ ಹೊರಬಿದ್ದು, ಶತ್ರುಗಳ ಸಾಮಾನುಗಳನ್ನು ಎತ್ತಿಕೊಂಡು ಪುನಃ ಕೋಟೆಯನ್ನು ಸೇರುತ್ತಿದ್ದನು. ಆದರೆ ಈ ರೀತಿಯ ಕಾಯಕವು ಎಷ್ಟುದಿವಸ ನಡೆಯಬೇಕು? ಎಷ್ಟುದಿವಸ ಕೋಟೆಯಲ್ಲಿ ಅಡಗಿರಲಿಕ್ಕಾದೀತು? ಕೋಟೆಯೊಳಗಿನ ಜನರಿಗೆ ಆಹಾರದ ಸಾಮಾನುಗಳ ಅಭಾವವಾಗಹತ್ತಿತು. ಕಡೆಯಲ್ಲಿ ಸೈನಿಕರಿಗೆ ಮಧ್ಯಾಹ್ನದ ಹೊತ್ತಿಗೆ ಹಿಡಿ ಧಾನ್ಯವನ್ನು ಕೊಡಲಿಕ್ಕೂ ಸಾಧ್ಯವಿಲ್ಲದಾಯಿತು. ಗೋವಿಂದಸಿಂಹನು ನಿರುಪಾಯನಾಗಿ ಕೋಟೆಯಿಂದ ಹೊರಬಿದ್ದನು. ಕೌಶಲದಿಂದ

ಶತ್ರುಗಳಕ್ಕೈಯಿಂದ ಪಾರಾಗಿ, ಶತದ್ರುನದಿಯನ್ನು ದಾಟಿ, ಬಸೋಹಲಿ ಸಂಸ್ಥಾನಕ್ಕೆ ಓಡಿ ಹೋದನು. ಬಸೋಹಲಿಯ ಸಂಸ್ಥಾನಿಕನು ಗೋವಿಂದ ಸಿಂಹನನ್ನು ಆದರದಿಂದ ಬರಮಾಡಿಕೊಂಡನು.

ಗೋವಿಂದಸಿಂಹನು ಬಸೋಹಲಿಯಲ್ಲಿರುವಾಗ ವೈಶಾಖಸಂಕ್ರಾಂತಿಯ ಹಬ್ಬವು ಬಂತು. ಗೋವಿಂದಸಿಂಹನು ಈ ಉತ್ಸವವನ್ನು ನೆರವೇರಿಸುವುದಕ್ಕೋಸುಗ ರವಾಲಸರ ಎಂಬ ಗ್ರಾಮಕ್ಕೆ ಹೋದನು. ಮತ್ತು ಅಲ್ಲಿ ಈ ಉತ್ಸವವನ್ನು ಬಹು ವಿಜೃಂಭಣೆಯಿಂದ ಕಡೆಗಾಣಿಸಿದನು. ಬಹುಜನ ಶೀಖರು ಈ ಸಮಾರಂಭಕ್ಕೆ ಬಂದಿದ್ದರು. ಗೋವಿಂದಸಿಂಹನು ಇವರ ಸಹಾಯದಿಂದ ಹೊಸಸೈನ್ಯವನ್ನೂ, ಸಾಮಾನುಗಳನ್ನೂ ಸಂಗ್ರಹಿಸಿದನು. ಉತ್ಸವದ ತರುವಾಯದಲ್ಲಿ ಆನಂದಪುರದ ಮೇಲೆ ಸಾಗಿಹೋಗಿ, ಆದನ್ನು ಕೈವಶ ಮಾಡಿಕೊಂಡನು (೧೭೦೧).

ಕೋಟೆಯು ದುರಸ್ತಿಗಾಗಿಯೂ, ಶಸ್ತ್ರಾಸ್ತ್ರಗಳ ಸಂಗ್ರಹಕ್ಕಾಗಿಯೂ ಗೋವಿಂದಸಿಂಹನು ಆನಂದಪುರದಲ್ಲಿ ಒಂದು ಉತ್ಸವವನ್ನು ಹಮ್ಮಿದನು. ದೂರದೂರದ ಶೀಖರಿಗೆ ಆಮಂತ್ರಣವು ಕಳುಹಲ್ಪಟ್ಟಿತು. ಗುರುವಿನ ಆಮಂತ್ರಣವನ್ನು ಸ್ವೀಕರಿಸಿ, ಅಸಂಖ್ಯ ಶೀಖರು ಆನಂದಪುರದಲ್ಲಿ ಸಮವೇತರಾದರು. ಗೋವಿಂದಸಿಂಹನು ಈ ಉತ್ಸವದಲ್ಲಿ ತನ್ನ ನಾಲ್ವರು ಮಕ್ಕಳ ಅಮೃತಸಂಸ್ಕಾರ ಅಥವಾ ದೀಕ್ಷಾಕ್ರಿಯೆಯನ್ನು ನೆರವೇರಿಸಿದನು.

ಉತ್ಸವವು ಮುಗಿದ ಬಳಿಕ ಗೋವಿಂದಸಿಂಹನು ದೇಶಸಂಚಾರಕ್ಕೆ ಹೊರಟನು. ಹಲವು ಸ್ಥಳಗಳನ್ನು ನೋಡಿಕೊಂಡು ಚಮಕೌಡದುರ್ಗಕ್ಕೆ ಹೋದನು. ಈ ಸಮಯದಲ್ಲಿ ಇಬ್ಬರು ಮೊಗಲ ಸೇನಾಪತಿಗಳು ಎರಡು ಸಾವಿರ ಸೈನಿಕರೊಂದಿಗೆ ಯುದ್ಧೋಪಯುಕ್ತವಾದ ಬಹು ಸಾಮಾನುಗಳನ್ನು ತಕ್ಕೊಂಡು ಲಾಹೋರಕ್ಕೆ ಹೊರಟಿದ್ದರು. ಈ ಸುದ್ದಿಯು ಗೋವಿಂದಸಿಂಹನಿಗೆ ತಿಳಿಯಿತು. ಗೋವಿಂದಸಿಂಹನು ಕಾಲವಿಲಂಬಮಾಡದೆ ತನ್ನ ಅನುಚರರೊಡನೆ ಆ ಮೊಗಲಸೇನಾಪತಿಗಳನ್ನು

ಸುಲಿಯು ಹೊರಟನು. ಅನುಕೂಲ ಸಮಯವನ್ನು ಸಾಧಿಸಿ ಮೊಗಲರ ಮೇಲೆ ಬಿದ್ದನು. ಯುದ್ಧವು ನಡೆಯಿತು. ಗೋವಿಂದಸಿಂಹನು ಅವರನ್ನು ಸೋಲಿಸಿ, ಅವರ ಸಾಮಾನುಗಳನ್ನೆಲ್ಲ ತಕ್ಕೊಂಡನು. ಮೊಗಲರು ಅಪಜಯದಿಂದ ನಾಚಿಕೊಂಡು ಲಾಹೋರದ ಕಡೆಗೆ ಓಡಿಹೋದರು.

ಗೋವಿಂದಸಿಂಹನು ತುಸುದಿವಸಗಳಲ್ಲಿಯೆ ಮತ್ತೆ ತಲೆಯೆತ್ತಿದುದನ್ನು ನೋಡಿ ಸಂಸ್ಥಾನಿಕರು ಭಯಗೊಂಡಿದ್ದರು. ಅವನು ಮೊಗಲ ಸೇನಾಪತಿಗಳನ್ನು ಸೋಲಿಸಿ, ಅವರ ಸಾಮಾನುಗಳನ್ನು ತಕ್ಕೊಂಡ ಸುದ್ದಿಯನ್ನು ಕೇಳಿ ಮತ್ತಷ್ಟು ಹೆದರಿದರು. ಅವನು ತಮ್ಮ ಮೇಲೆ ಸಾಗಿಬಂದು, ತಮ್ಮನ್ನು ಸೋಲಿಸಿ, ತಮ್ಮ ಸಂಸ್ಥಾನಗಳನ್ನು ಎತ್ತಿಹಾಕಬಹುದೆಂಬ ಅಂಜಿಕೆಯು ಸಂಸ್ಥಾನಿಕರ ಮನದಲ್ಲಿ ಮನೆಮಾಡಿಕೊಂಡಿತು. ಈ ಭಾವೀ ಅನರ್ಥಕಲ್ಪನೆಯಿಂದ ಸಂಸ್ಥಾನಿಕರಲ್ಲಿ ಬಹುಜನರು ಒಕ್ಕಟ್ಟಾದರು. ಒಂದೆಡೆಯಲ್ಲಿ ಸೇರಿ ಆಲೋಚನೆ ಮಾಡಿಕೊಂಡರು. ಬಾದಶಹನಿಗೆ ಶರಣು ಹೊಗುವುದನ್ನು ನಿರ್ಧರಿಸಿಕೊಂಡರು. ಬಾದಶಹನಿಗೆ ಒಂದು ವಿಜ್ಞಾಪನಾ ಪತ್ರವನ್ನು ಬರೆದರು. ಇದರಲ್ಲಿ ಸಂಸ್ಥಾನಿಕರು ತಮ್ಮ ದುರವಸ್ಥೆಯನ್ನೂ, ಗೋವಿಂದಸಿಂಹನ ಉನ್ನತಿಯನ್ನೂ ವಿಶದಗೊಳಿಸಿ, ತಮ್ಮ ಸಂರಕ್ಷಣೆ ಮಾಡಬೇಕೆಂದು ಬೇಡಿಕೊಂಡಿದ್ದರು. ಆದರೆ ಅವರಿಗೆ ಇಷ್ಟರಿಂದ ಸಮಾಧಾನವಾಗಲಿಲ್ಲ. ಅವರು ಅಜಮೇರಚಂದ್ರನನ್ನು ಮುಖ್ಯಸ್ಥನನ್ನಾಗಿ ಮಾಡಿ, ಬಾದಶಹನ ಬಳಿಗೆ ಶಿಷ್ಟಮಂಡಳಿಯನ್ನು ಕಳುಹಿದರು. ಗೋವಿಂದಸಿಂಹನು ತಮ್ಮೊಳಗಿನವನೊಬ್ಬನು; ಇವನಿಂದ ಪಂಜಾಬಕ್ಕಾಗಲಿ, ತಮಗಾಗಲಿ ಉಪದ್ರವವಾಗದು; ಗೋವಿಂದಸಿಂಹನ ಕಟಾಕ್ಷವು ಮೊಗಲರ ಮೇಲುಂಟು; ಗೋವಿಂದಸಿಂಹನು ಕೇವಲ ಮೊಗಲರ ಅತ್ಯಾಚಾರದ ವಿರುದ್ಧ ಹೋರಾಡತಕ್ಕವನು; ಎಂಬ ಸಂಗತಿಯನ್ನು ಅವರು ತಿಲಮಾತ್ರವಾದರೂ ವಿಚಾರಿಸಲಿಲ್ಲ.

ಔರಂಗಜೇಬನಿಗೂ ಇದೇ ಬೇಕಾಗಿತ್ತು. ಅವನು ಕ್ರಮೇಣ

ವರ್ಧಿಸುತ್ತ ನಡೆದಿದ್ದ ಶೀಖಶಕ್ತಿಯ ದಮನಕ್ಕೋಸುಗ ಹಲವು ಸಾರೆ ಪ್ರಯತ್ನಬಟ್ಟರೂ, ವಿಫಲಮನೋರಥನಾಗಿ ಚಟಪಡಿಸುತ್ತಿದ್ದನು. ಕಾರಣ ಅವನು ಈಗೊದಗಿದ ಸುಯೋಗವನ್ನು ವ್ಯರ್ಥಕಳಕೊಳ್ಳಲಿಲ್ಲ. ಸಂಸ್ಥಾನಿಕರನ್ನು ಗೋವಿಂದಸಿಂಹನ ವಿರುದ್ಧ ಮತ್ತಷ್ಟು ಹುರಿಗೊಳಿಸಿದನು; ಹಾಗು ಅವರಿಗೆ ತಾನು ಸಂಪೂರ್ಣ ಸಹಾಯಮಾಡುವೆನೆಂದು ಹೇಳಿದನು. ಇದಕ್ಕೋಸುಗ ಬಾದಶಹನು ಲಾಹೋರದ ಸುಭೇದಾರನಿಗೂ, ಸಿರಹಿಂದದ ಸುಭೇದಾರನಿಗೂ ಆಜ್ಞಾಪತ್ರಗಳನ್ನು ಬರೆದನು. ಈ ಆಜ್ಞಾಪತ್ರವು ಮುಟ್ಟುತ್ತಲೆ, ಆ ಅಮೀರರಿಬ್ಬರು ದೊಡ್ಡ ಸೈನ್ಯವನ್ನು ತಕ್ಕೊಂಡು ಗೋವಿಂದಸಿಂಹನ ಮೇಲೆ ಸಾಗಿಹೋದರು. ಸಂಸ್ಥಾನಿಕರು ತಮ್ಮ ಸೇನೆಯೊಡನೆ ಮೊಗಲರನ್ನು ಕೂಡಿದರು. ಈ ದೊಡ್ಡಸೈನ್ಯವು ಗೋವಿಂದಸಿಂಹನ ಮುಖವಾಲ ಕೋಟೆಯನ್ನು ಮುತ್ತಿತು (೧೭೦೧). ಔರಂಗಜೇಬನು ಕೇವಲ ತನ್ನ ಕೈಕೆಳಗಿನ ಸುಭೇದಾರರ ಮೇಲೆ ವಿಶ್ವಾಸವಿಡಲಾರದವನಾಗಿ, ಒಬ್ಬ ಮಗನನ್ನು ಸೈನ್ಯಸಮೇತ ಈ ಯುದ್ಧಕ್ಕೆ ಕಳುಹಿಕೊಟ್ಟಿದ್ದನೆಂದೂ ಕೆಲವರು ಹೇಳಿದ್ದಾರೆ.

ಗೋವಿಂದಸಿಂಹನು ಹೀಗೆ ಒಮ್ಮೆಂದೊಮ್ಮೆ ವಿಪುಲವಾಹಿನಿಯಿಂದ ಮುತ್ತಲ್ಪಟ್ಟನಾದರೂ ಭಯಗೊಳ್ಳಲಿಲ್ಲ. ಕ್ಷತ್ರಿಯೋಚಿತವಾದ ವೀರತ್ವ-ಸಾಹಸಗಳಿಂದ ಅವನು ಮಂಡಿತನಾದವನು. ಅವನು ಬಂದದ್ದನ್ನು ಎದುರಿಸಲಿಕ್ಕೆ ಒಳ್ಳೇ ಉತ್ಸಾಹದಿಂದ ಸಿದ್ಧನಾದನು. ತನ್ನ ಸೈನಿಕರನ್ನು ಹುರಿದುಂಬಿಸಿ, ಮೊಗಲರ ಮೇಲೇರಿ ಹೋದನು. ಮೊಗಲರು ಗೋವಿಂದಸಿಂಹನ ಈ ಸಾಹಸವನ್ನು ನೋಡಿ ಸ್ತಂಭಿತರಾದರು. ನೂರಾರು ವರ್ಷಗಳ ಹಿಂದೆ ನಡೆದಿದ್ದ ಒಂದು ಅದ್ಭುತ ಸಂಗತಿಯ ಸ್ಮರಣೆಯು ಅವರಿಗಾಯಿತು. ರಾಜಸ್ಥಾನದ ಮಹಾರಾಣಾ ಪ್ರತಾಪನೂ ಹೀಗೆಯೇ ಶತ್ರುಗಳ ಮೇರೆಮೀರಿದ ದಂಡನ್ನು ಉಪೇಕ್ಷಿಸಿ, ತನ್ನ ಅಲ್ಪಬಲದಿಂದ ವೈರಿಗಳಮೇಲೆ ಬೀಳುವುದಕ್ಕೆ ಸಾಹಸಗೊಂಡಿದ್ದನು. ಹಾಗು ಆ ಅತ್ಯಲ್ಪ

ಶಕ್ತಿಯಿಂದಲೇ ಮೊಗಲರನ್ನು ಹಣ್ಣುಮಾಡಿಬಿಟ್ಟಿದ್ದನು. ಆ ಸಂಗತಿಯನ್ನು ಮೊಗಲರು ಇಂದು ಪ್ರತ್ಯಕ್ಷ ಅನುಭವಿಸುವ ಪ್ರಸಂಗವನ್ನು ತಂದುಕೊಂಡಿದ್ದರು. ಗೋವಿಂದಸಿಂಹನು ದೇಶಬಾಂಧವರೇ ಆಗಿದ್ದ ಸಂಸ್ಥಾನಿಕರು ಇಂದು ತನ್ನ ವಿರುದ್ಧವಾಗಿ ಮೊಗಲರೊಡನೆ ಸೇರಿಕೊಂಡಿರುವುದನ್ನು ನೋಡಿ ಕಾತರನಾಗಲಿಲ್ಲ. ಮೊಗಲರ ಅಸಂಖ್ಯ ಸೈನ್ಯದ ವಿಷಯವಾಗಿಯೂ, ತನ್ನ ತುಸುದಂಡಿನ ಬಗ್ಗೆಯೂ ವಿಚಾರಿಸಿ, ಭಾವೀ ಅನರ್ಥವನ್ನು ಕಲ್ಪಿಸಿ ಭಯಗೊಳ್ಳಲಿಲ್ಲ. ಅವನ ಉಜ್ವಲವಾದ ದೇಶಪ್ರೇಮವೂ, ಪ್ರಬಲವಾದ ಸ್ವಾತಂತ್ರ್ಯಾಪೇಕ್ಷೆಯೂ ಜಾಗ್ರತವಾಗಿದ್ದುದರಿಂದ, ಈ ಶಕ್ತಿಯ ಬಲದಿಂದ ಅಸಾಧ್ಯಸಾಧನೆಯನ್ನು ಸಾಧಿಸಬಹುದೆಂದು ಅವನು ನಂಬಿದ್ದನು.

ಕೋಟೆಯ ಹೊರಭಾಗದಲ್ಲಿ ಎರಡೂ ಸೈನ್ಯಗಳ ನಡುವೆ ಕಡುತರ ಕಾಳಗವಾಯಿತು. ಈ ಯುದ್ಧದಲ್ಲಿ ಪರಸ್ಪರರು ಪರಸ್ಪರರ ಶಕ್ತಿಯ ಅಳವನ್ನು ಕಂಡುಕೊಂಡರು. ಯುದ್ಧವು ಅವಿಶ್ರಾಂತವಾಗಿ ಏಳು ತಿಂಗಳವರೆಗೆ ನಡೆಯಿತು. ವಿಜಯಲಕ್ಷ್ಮಿಯು ಯಾವಾಗಲೂ ಚಂಚಲಳು. ಇವಳು ಒಮ್ಮೆ ಮೊಗಲರ ಕೊರಳಲ್ಲಿ ಮಾಲೆ ಹಾಕುತ್ತಿದ್ದಳು. ಮತ್ತೊಮ್ಮೆ ಶೀಖರ ಕಂಠದಲ್ಲಿ ವಿಜಯಮಾಲೆಯನ್ನು ಹಾಕುತ್ತಿದ್ದಳು.

ಗೋವಿಂದಸಿಂಹನು ಎಷ್ಟೆ ದೃಢಪ್ರತಿಜ್ಞೆಯವನಾಗಿರಲಿ, ಎಷ್ಟೆ ವೀರತ್ವವನ್ನು ತೋರ್ಪಡಿಸಲಿ, ಮೊಗಲರ ವಿಪುಲ ಸೈನ್ಯದ ದೃಷ್ಟಿಯಿಂದ ಅವನ ಸೇನೆಯು ಅತ್ಯಲ್ಪವಾಗಿತ್ತು. ಅವನ ಈ ಶಕ್ತಿಯು ಮೊಗಲರೊಡನೆ ಪ್ರತಿಭಟಿಸುವುದಕ್ಕೆ ತಕ್ಕುದಾಗಿರಲಿಲ್ಲ. ಈ ಅಲ್ಪ ಶಕ್ತಿಯಿಂದಲೆ ಅವನು ಮೊಗಲರೊಡನೆ ಬಹು ದಿವಸ ಕಾದಾಡಿದ್ದುದು ಆಶ್ಚರ್ಯದ ಸಂಗತಿಯೆ ಸರಿ. ಇಂತಹ ವಿಸ್ಮಯಕರ ಸಂಗತಿಯನ್ನು ಜರುಗಿಸುವುದು ಗೋವಿಂದಸಿಂಹನಂತಹ ಲೋಕೋತ್ತರ ಮನುಷ್ಯನಿಗೆ ಮಾತ್ರ ಸಾಧ್ಯವಾದದ್ದು.

ಕಡೆಯಲ್ಲಿ ಗೋವಿಂದಸಿಂಹನು ಜಯದ ವಿಷಯದಲ್ಲಿ ನಿರಾಶನಾದನು. ಯುದ್ಧಮಾಡುವುದನ್ನು ಬಿಟ್ಟುಕೊಟ್ಟು ಉಳಿದ ಅಲ್ಪ ಸಂಖ್ಯಾಕರಾದ ಸೈನಿಕರನ್ನು ಕಟ್ಟಿಕೊಂಡು ಕೋಟೆಯನ್ನು ಸೇರಿದನು. ಕೋಟೆಯ ಬಾಗಿಲುಗಳನ್ನು ಇಕ್ಕಿಸಿ, ಒಳಗೆ ಕುಳಿತುಕೊಂಡನು. ಮೊಗಲರು ಕೋಟೆಯನ್ನು ಮುತ್ತಿಕೊಂಡು ಹೊರಗೆ ಕುಳಿತರು.

ಕೋಟೆಯೊಳಗೆ ಅನ್ನದ ಸಂಗ್ರಹವು ಬಹಳವಾಗಿರಲಿಲ್ಲ. ಅದು ಕೆಲವು ದಿವಸಗಳ ಮಟ್ಟಿಗೆ ಮಾತ್ರ ಸಾಲುವಂತಿತ್ತು. ಮೊಗಲರಿಗೆ ಶೀಖರ ಈ ಸ್ಥಿತಿಯು ಗೊತ್ತಿದ್ದುದರಿಂದ ಅವರು ನಿಶ್ಚಿಂತರಾಗಿ ಕಾಲಕಳೆಯುತ್ತಿದ್ದರು. ಶೀಖರಿಗೆ ಅನ್ನದ ಕೊರತೆಯಾಗಹತ್ತಿತು. ಅವರು ಉಪವಾಸ ಬೀಳಲಾರದವರಾಗಿ, ಓಡಿಹೋಗುವ ಆಲೋಚನೆಗೆ ತೊಡಗಿದರು. ಗೋವಿಂದಸಿಂಹನು ಸೈನಿಕರ ಈ ಮನೋಭಾವನೆಯನ್ನು ತಿಳಿದು, ಬಹಳವಾಗಿ ತಳಮಳಿಸಿದನು. ಆದರೆ ಮಾಡುವುದೇನು? ಈ ಸ್ಥಿತಿಯಲ್ಲಿ ಗೋವಿಂದಸಿಂಹನ ತಾಯಿಯು ಒಂದು ಅನಿಷ್ಟ ಸಂಗತಿಯನ್ನು ಜರುಗಿಸಿದಳು. ಅದಾವುದೆಂದರೆ: ಗೋವಿಂದಸಿಂಹನು ಅನ್ನಾಭಾವದ ಮೂಲಕ ಕೋಟೆಯ ರಕ್ಷಣೆಯನ್ನು ಬಹು ದಿವಸ ಮಾಡಲಾರನೆಂಬುದು ಗೋವಿಂದಸಿಂಹನ ತಾಯಿಗೆ ಹೊಳೆದಿತ್ತು. ಕೋಟೆಯು ಮೊಗಲರ ವಶವಾಯಿತೆಂದರೆ, ಶತ್ರುಗಳ ಅತ್ಯಾಚಾರಕ್ಕೆ ಎಲ್ಲರೂ ಬಲಿಯಾಗುವರೆಂದು ಅವಳು ಊಹಿಸಿದ್ದಳು. ಇಂತಹ ಸ್ಥಿತಿಯಲ್ಲಿ ಹೇಗಾದರೂ ಮಾಡಿ, ವಂಶರಕ್ಷಣೆ ಮಾಡಬೇಕೆಂದು ಅವಳು ನಿರ್ಧರಿಸಿಕೊಂಡಳು. ಗೋವಿಂದಸಿಂಹನಿಗೆ ನಾಲ್ವರು ಮಕ್ಕಳಿದ್ದರು. ಇವರೆಲ್ಲರು ಚಿಕ್ಕವಯಸ್ಸಿನವರು; ಕಡೆಯ ಇಬ್ಬರು ಬಾಲಕರು; ಇವರ ವಯಸ್ಸು ಎಂಟು-ಹತ್ತಕ್ಕಿಂತ ಹೆಚ್ಚಿಗಲಿಲ್ಲ. ಗೋವಿಂದಸಿಂಹನ ತಾಯಿಯು ತನ್ನ ವಂಶರಕ್ಷಣೆಯ ಸಲುವಾಗಿ ಇಬ್ಬರು ಚಿಕ್ಕ ಮೊಮ್ಮಕ್ಕಳನ್ನು ಕಟ್ಟಿಕೊಂಡು, ಗುಪ್ತರೀತಿಯಿಂದ ಕೋಟೆಯಿಂದ ಹೊರಬಿದ್ದು ಪಾರಾಗಿ ಹೋಗಬೇಕೆಂದು ಆಶಿಸಿದಳು.

ಅವಳು ದುರ್ಗವನ್ನು ಮುತ್ತಿಕೊಂಡಿದ್ದ ಒಬ್ಬ ಸಂಸ್ಥಾನಿಕನಿಗೆ ತನ್ನನ್ನು ಹೇಗಾದರೂ ಮಾಡಿ ಹೊರಗೆ ಹೋಗಗೊಡಬೇಕೆಂದು ಬೇಡಿಕೊಂಡಳು. ಸಂಸ್ಥಾನಿಕನಿಗೆ ದಯವುಂಟಾಗಿ, ಅವನು ಅವಳ ಮಾತಿಗೆ ಒಪ್ಪಿಕೊಂಡನು. ಅವಳು ಆ ಇಬ್ಬರು ಮೊಮ್ಮಕ್ಕಳನ್ನೂ, ಒಬ್ಬ ಅಡುಗೆಯವನನ್ನೂ ಸಂಗಡ ಕರಕೊಂಡು, ರಾತ್ರಿಯ ವೇಳೆಯಲ್ಲಿ ಗುಪ್ತರೀತಿಯಿಂದ ಹೊರ ಬಿದ್ದಳು. ಸುರಕ್ಷಿತ ಪಾರಾಗಿ ಸಿರಹಿಂದಕ್ಕೆ ಹೋಗಿ, ಅಲ್ಲಿ ಆ ಅಡಿಗೆಯವನ ಮನೆಯಲ್ಲಿ ಇರಹತ್ತಿದಳು.

ಮಾತೆಯು ಗೋವಿಂದಸಿಂಹನಿಗೆ ಈ ಸಂಗತಿಯನ್ನು ತಿಳಿಸಿರಲಿಲ್ಲ. ಅವಳು ತನ್ನ ಈ ಕಾರ್ಯವನ್ನು ಬಹುಗುಪ್ತರೀತಿಯಿಂದ ಜರುಗಿಸಿದ್ದಳು. ಮುಂದೆ ಗೋವಿಂದಸಿಂಹನಿಗೆ ಈ ಸಂಗತಿಯು ತಿಳಿಯುತ್ತಲೆ, ಕ್ರೋಧದಿಂದಲೂ, ದುಃಖದಿಂದಲೂ ಅವನ ಹೃದಯವು ವ್ಯಾಪಿಸಿ ಹೋಯಿತು. ಅವನು ಅತಿಶಯ ವ್ಯಾಕುಲನಾಗಿ ಇಂತೆಂದನು:"ಜನನಿಯು ನನ್ನನ್ನು ಬಿಟ್ಟು ಹೋದಳೆ? ಅವಳಿಗೆ ಆಶ್ರಯಗೊಡುವರಾರು? ಅವಳ ಪ್ರೀತಿಯ ಮೊಮ್ಮಕ್ಕಳನ್ನು ರಕ್ಷಿಸುವರಾರು? ಅವರು ಒಂದಿಲ್ಲೊಂದು ದಿನ ಮೊಗಲರ ಹಾವಳಿಗೆ ಬಲಿಯಾಗುವುದು ನಿಶ್ಚಿತ!" ಗೋವಿಂದಸಿಂಹನು ತಾಯಿಯನ್ನು ಹುಡುಕಲಿಕ್ಕೆ ನಾಲ್ಕೂ ಕಡೆಗೆ ಸೈನಿಕರನ್ನು ಕಳುಹಿಕೊಟ್ಟನು.

ಗೋವಿಂದಸಿಂಹನ ಕಠೋರವಾದ ಈ ಭವಿಷ್ಯದ್ವಾಣಿಯು ಬೇಗನೆ ಫಲಿಸಿತು. ಆ ಅಡಿಗೆಯವನು ಮುಸಲ್ಮಾನರು ತೋರಿದ ಹಣದಾಶೆಯಿಂದ ವಿಶ್ವಾಸಘಾತುಕನಾದನು. ಗೋವಿಂದಸಿಂಹನ ತಾಯಿಯನ್ನೂ ಮಕ್ಕಳನ್ನೂ ಮೊಗಲರ ಸ್ವಾಧೀನ ಮಾಡಿದನು. ನಮ್ಮ ದೇಶದಲ್ಲಿ ವಿಶ್ವಾಸಘಾತಕರಿಗೆ ಕೊರತೆಯಿಲ್ಲ. ಇತಿಹಾಸದ ಮಾತು ಒತ್ತಟ್ಟಿಗಿರಲಿ, ಮಹಾಭಾರತ-ರಾಮಾಯಣಾದಿ ಪುರಾಣ ಗ್ರಂಥಗಳಲ್ಲಿಯೂ ವಿಶ್ವಾಸಘಾತಕರ ಅಭಾವವಿಲ್ಲ. ಈ ತರದ ವಿಶ್ವಾಸಘಾತುಕರಿಗೆ ಎಡೆಗೊಟ್ಟದ್ದರಿಂದ ನಮ್ಮ ದೇಶದ ಹಾನಿಯು ಎಷ್ಟಾಗಿದೆಯೆಂಬದನ್ನು ಹೇಳಲಾಸಲ್ಲ!

ಹಿಂದುಸ್ಥಾನದ ಅವನತಿಯ ಮೀಮಾಂಸೆಗೆ ತೊಡಗಿದರೆ, ಈ ವಿಶ್ವಾಸಘಾತಕತನವು ನಮ್ಮ ಅಧಃಪತನದ ಪ್ರಧಾನಕಾರಣವೆಂದು ಗೊತ್ತಾಗದಿರದು!

ಮೊಗಲರು ಗೋವಿಂದಸಿಂಹನ ಮಕ್ಕಳನ್ನು ಮೊದಲು ಕತ್ತಲೆಯ ಕಾರಾಗಾರದಲ್ಲಿರಿಸಿದರು. ಬಳಿಕ ಸಿರಹಿಂದದ ಸುಭೇದಾರನು ಬಾದಶಹನ ಅಪ್ಪಣೆಯಂತೆ ನ್ಯಾಯವಿಚಾರಣೆಯ ನಾಟಕವಾಡಿ, ಆ ಬಾಲರಿಗೆ ಮರಣದಂಡನೆಯನ್ನು ವಿಧಿಸಿದನು. ಈ ಶಿಕ್ಷೆಯು ಬಳಿಕೆಯಲ್ಲಿ ಬರುವುದರ ಮೊದಲು ಸುಭೇದಾರನು ಆ ಬಾಲಕರಿಗೆ 'ನೀವು ಮುಸಲ್ಮಾನರಾದರೆ, ನಿಮ್ಮನ್ನು ಸುಮ್ಮನೆ ಬಿಟ್ಟುಕೊಡುವೆನು' ಎಂದು ಹೇಳಿದನು. ಬಾಲಕರು ಅಂಥಿಂಥವರಲ್ಲ—ಸಿಂಹಶಿಶುಗಳು—ವೀರಪುತ್ರರು. ಅವರು ಯಾವ ಆಶೆಗೂ ಒಳಗಾಗಲಿಲ್ಲ. ಮರಣಕ್ಕೆ ಭಯಗೊಳ್ಳಲಿಲ್ಲ. ಅವರು ಸುಭೇದಾರನ ಮಾತಿಗೆ ಒಪ್ಪಲಿಲ್ಲವಿಷ್ಟೇ ಅಲ್ಲ; ಆ ಮೊಗಲ ಅಧಿಕಾರಿಯನ್ನು ಬಹಳವಾಗಿ ತಿರಸ್ಕರಿಸಿದರು. ಸುಭೇದಾರನು ಬಾಲಕರ ಈ ಎದಿರುತ್ತರಗಳಿಂದ ಮತ್ತಷ್ಟು ಕೋಪಗೊಂಡನು. ಆ ಬಾಲರನ್ನು ಜೀವಂತರಾಗಿರುವಾಗಲೆ ಗೋಡೆಯಲ್ಲಿ ಹುಗಿಸಿಬಿಡಬೇಕೆಂದು ಅಪ್ಪಣೆಮಾಡಿದನು.

ಈ ಹೃದಯವಿದಾರಕ ಸುದ್ದಿಯನ್ನು ಕೇಳಿ, ಗೋವಿಂದಸಿಂಹನ ತಾಯಿಯು ಎದೆಯೊಡಕೊಂಡು ಸತ್ತುಹೋದಳು. ಬಾಲಕರು ಮರಣಸಮಯದಲ್ಲಿ ತೋರಿದ ಧೈರ್ಯವು ಅವರ್ಣನೀಯವಾದುದು. ಇವರು ದೀರ್ಘಜೀವಿಗಳಾಗಿದ್ದರೆ, ಹಿಂದುಸ್ಥಾನದ ಇತಿಹಾಸದ ಒಂದು ಪುಟವನ್ನಾದರೂ ಅಲಂಕರಿಸದೆ ಬಿಡುತ್ತಿರಲಿಲ್ಲ.

ಇತ್ತ ಮುಖವಾಲ ಕೋಟೆಯಲ್ಲಿಯ ಸೈನಿಕರು ಗೋವಿಂದಸಿಂಹನನ್ನು ಬಿಟ್ಟು ಪಲಾಯನ ಮಾಡುವ ಆಲೋಚನೆಯಲ್ಲಿದ್ದರೆಂದು ನಾವು ಹಿಂದೆ ಹೇಳಿದ್ದೇವೆ ಗೋವಿಂದಸಿಂಹನು ತನ್ನ ಸೈನಿಕರಿಗೆ ಹೀಗೆ ಹೇಡಿತನವನ್ನು ಮಾಡಕೂಡದೆಂದು ಬಹುಪರಿಯಾಗಿ ಉಪದೇಶಿಸಿದನು.

ಆದರೆ ಸೈನಿಕರ ಮನಸ್ಸು ತಿರುಗಲಿಲ್ಲ. ಅವರು ಓಡಿಹೋಗುವ ತಮ್ಮ ಸಂಕಲ್ಪವನ್ನು ಬಿಟ್ಟುಕೊಡಲಿಲ್ಲ. ಕಡೆಯಲ್ಲಿ ಗೋವಿಂದಸಿಂಹನು ಉತ್ತೇಜಿತ ಸ್ವರದಿಂದ ಹೇಳಹತ್ತಿದನು: "ವೀರರೆ, ಮರಣಕ್ಕಾಗಿ ಬೆದರುವಿರಾ? ಅದು ಒಂದಿಲ್ಲೊಂದು ದಿವಸ ಒದಗತಕ್ಕದ್ದೆ! ಹುಟ್ಟಿದ ಮನುಷ್ಯನು ಸಾಯಲೇಬೇಕು! ಸಾವಿನಿಂದ ಪಾರಾದವನು ಯಾವನೂ ಇಲ್ಲ! ಹೀಗಿರಲು ಮರಣಕ್ಕೋಸುಗ ಭಯವೆ? ಪ್ರಾಣರಕ್ಷಣೆಗಾಗಿ ಹೇಡಿಗಳಾಗಿ ಓಡಿಹೋಗಬೇಕೆ? ಪಲಾಯನ ಮಾಡಿದರೆ, ಆ ಮೃತ್ಯುವು ನಿಮ್ಮ ಬೆನ್ನು ಬಿಡುವುದೆ? ಬೇಡ! ಈ ತರದ ಕಾಪುರುಷತೆಯು ನಿಮ್ಮಂಥ ವೀರರಿಗೆ ಸಲ್ಲದು! ಶೂರರು ದನ-ಕರುಗಳಂತೆ, ಕುರಿ ಕೋಳಿಗಳಂತೆ ಸಾಯಕೂಡದು. ಅವರು ತಮ್ಮ ದೇಶಕ್ಕೋಸುಗ, ದೇಶಬಾಂಧವರಿಗೋಸುಗ ಆತ್ಮಯಜ್ಞ ಮಾಡಲಿಕ್ಕೆ ಸದಾ ಸಿದ್ಧರಿರಬೇಕು. ದೇಶೋದ್ಧಾರಕ್ಕೋಸ್ಕರ, ಸ್ವಧರ್ಮರಕ್ಷಣೆಯ ಸಲುವಾಗಿ ಪ್ರಾಣವನ್ನರ್ಪಿಸುವ ವೀರನ ಪುಣ್ಯಕ್ಕೆ ಎಣೆಯಿಲ್ಲ. ನಾವು ವೀರರಂತೆ ವೈರಿಗಳೊಡನೆ ಹೋರಾಡುತ್ತ ಮರಣವನ್ನು ಹೊಂದಿದರೆ, ದೇಶವಾಸಿಗಳು ನಮ್ಮನ್ನು ಗೌರವದೃಷ್ಟಿಯಿಂದ ನೋಡುವರು. ನಮ್ಮ ವೀರತ್ವವನ್ನು ವರ್ಣಿಸಿ, ನಮ್ಮನ್ನು ಹೊಗಳುವರು. ಜಯಶಾಲಿಗಳಾದರೆ, ಈ ದೇಶವು ನಮ್ಮದು! ನಾವಿಲ್ಲಿ ನಮ್ಮ ಜೀವಮಾನವಿರುವವರೆಗೆ ಸುಖದಿಂದಲೂ ಗೌರವದಿಂದಲೂ ಇರಬಲ್ಲೆವು. ಜಯಶಾಲಿಗಳಾಗದಿದ್ದರೆ, ಯುದ್ಧಭೂಮಿಯಲ್ಲಿ ಮಡಿಯುವುದಕ್ಕೆ ವ್ಯಥೆಗೊಳ್ಳಕೂಡದು! ಯಾಕೆಂದರೆ, ಈ ರೀತಿ ಸತ್ತವರು ವೀರಸ್ವರ್ಗವನ್ನು ಹೊಂದಿ ಚಿರಕಾಲ ಸುಖಿಗಳಾಗುವರು." ಗೋವಿಂದಸಿಂಹನ ಈ ಭಾಷಣವು ಫಲಕಾರಿಯಾಗಲಿಲ್ಲ. ಬೋರ್ಗಲ್ಲಮೇಲೆ ಮಳೆಗರೆದಂತಾಯಿತು. ಸೈನಿಕರು ಗೋವಿಂದಸಿಂಹನ ಮಾತಿಗೆ ಒಡಂಬಡಲಿಲ್ಲ. ಅವರು ಗುಂಪು ಗುಂಪಾಗಿ ಹೊರಬೀಳಹತ್ತಿದರು. ಕೋಟೆಯು ಸೇನಾಶೂನ್ಯವಾಗಹತ್ತಿತು. ಕೇವಲ ನಾಲ್ವತ್ತು ಜನ ಸೈನಿಕರು ಮಾತ್ರ

ಕೋಟೆಯಲ್ಲಿ ಉಳಿದರು.

ಸೈನಿಕರ ಪಲಾಯನದಿಂದ ಗೋವಿಂದಸಿಂಹನಿಗೆ ಅತಿಶಯ ದುಃಖ ವಾಯಿತು. ಕೋಪವು ಹೆಚ್ಚಿತು. ಅವನು ಕ್ರೋಧಭರದಲ್ಲಿ ಮೆಯ್ಮರೆದನು. ಕೋಟೆಯಲ್ಲಿ ಉಳಿದಿದ್ದ ನಾಲ್ವತ್ತು ಜನ ಸೈನಿಕರಿಗೂ ಕೋಟೆಯನ್ನು ಬಿಟ್ಟು ಹೊರಡಿರೆಂದು ಹೇಳಿದನು. ಆದರೆ ಗುರುಭಕ್ತರೂ ವಿಶ್ವಾಸುಕರೂ ಆಗಿದ್ದ ಆ ಸೈನಿಕರು ಸದ್ಯದ ಗುರುವಿನ ಮನಸ್ಥಿತಿಯನ್ನು ತಿಳಿದವರಾಗಿ ಕೋಪಗೊಳ್ಳಲಿಲ್ಲ. ಕೋಟೆಯನ್ನು ಬಿಟ್ಟು ಹೊರಬೀಳಲಿಕ್ಕೆ ಮನಸ್ಸು ಮಾಡಲಿಲ್ಲ. ಅವರು ದೃಢತೆಯಿಂದ ಗೋವಿಂದಸಿಂಹನಿಗೆ ಹೇಳಿದ್ದೇನಂದರೆ :"ಕೆಲವರು ಹೇಡಿಗಳಂತೆ ಓಡಿಹೋದುದನ್ನು ನೋಡಿ, ತಮಗೆ ಕೋಪಬಂದಿರಬಹುದು. ಅವರ ವರ್ತನವನ್ನು ನೋಡಿ, ನಮ್ಮ ವಿಷಯದಲ್ಲೂ ನಿಮಗೆ ಅಪನಂಬಿಗೆಯುಂಟಾಗಿರಬಹುದು. ಆದರೆ ನಾವು ಆ ವರ್ಗದವರಲ್ಲ. ನಾವು ನಿಮ್ಮ ಅನುಯಾಯಿಗಳು. ಎಲ್ಲೆಲ್ಲಿಯೂ ನಿಮ್ಮನ್ನು ಅನುಸರಿಸಿಕೊಂಡಿರತಕ್ಕವರು. ನಿಮ್ಮನ್ನು ಈ ಸ್ಥಿತಿಯಲ್ಲಿ ಬಿಟ್ಟುಹೋಗಲಿಕ್ಕೆ ನಮ್ಮ ಕಾಲುಗಳು ಎಂದೂ ಏಳವು. ನಿಮ್ಮ ಬದಿಯಲ್ಲಿ ನಿಂತು, ನಿಮ್ಮ ರಕ್ಷಣೆಗಾಗಿ ಶಿರಗಳನ್ನು ಧಾರೆಯೆರೆಯುವ ಪ್ರಸಂಗ ಬಂದರೂ ನಾವು ಹಿಂದೆಗೆಯತಕ್ಕವರಲ್ಲವಿಷ್ಟೇ ಅಲ್ಲ; ಆ ಪ್ರಸಂಗವನ್ನು ನಾವು ಸಂತೋಷದಿಂದ ಎದುರಿಸುತ್ತಿದ್ದೇವೆ. ನೀವು ವೃಥಾ ಸಂದೇಹಕ್ಕೊಳಗಾಗಕೂಡದು. ಪ್ರಸಂಗವಿಶೇಷದಲ್ಲಿ ನಮ್ಮ ಪರೀಕ್ಷೆ ಮಾಡಿ, ಮನವರಿಕೆಯು ಮಾಡಿಕೊಳ್ಳಬಹುದು. ಈಗ ನೀವು ಶಾಂತರಾಗಿರಿ. ಓಡಿಹೋದ ಆ ಸೈನಿಕರಿಗೆ ಕ್ಷಮೆದೋರಿರಿ." ಗೋವಿಂದಸಿಂಹನ ಕೋಪವು ಅಳಿಯಿತು. ಅವನ ಚಿತ್ತವು ಶಾಂತವಾಯಿತು. ಅವನು ಓಡಿಹೋದ ಸೈನಿಕರ ಅಪರಾಧವನ್ನು ಕ್ಷಮಿಸಿದೆನೆಂದು ಹೇಳಿದನು.

ಗುರುವು ಕ್ಷಮೆದೋರಿದ್ದೇನೋ ನಿಜ; ಆದರೆ ಈ ಗುರುವಿನ ಮೇಲೆ ಬೇರೊಬ್ಬ ಗುರುವಿದ್ದನು. ಅವನು ಆ ವಿಶ್ವಾಸಘಾತಕ ದಂಡಾಳು

ಗಳಿಗೆ ಕ್ಷಮೆದೋರಲ್ಲಿಲ್ಲ! ಸೈನಿಕರು ಮುಖವಾಲಕೋಟೆಯನ್ನು ಬಿಟ್ಟು ಹೊರಬೀಳುತ್ತಲೆ, ಮೊಗಲರು ಅವರ ಮೇಲೆ ಬಿದ್ದರು. ಬಹುಜನ ಶೀಖ ಸೈನಿಕರು ಮೊಗಲರ ಖಡ್ಗಗಳಿಗೆ ಆಹುತಿಯಾದರು. ಉಳಿದ ಅಲ್ಪಸಂಖ್ಯಾಕರಾದ ದಂಡಾಳುಗಳು ತಮ್ಮ ಪ್ರಾಣವನ್ನುಳಿಸಿಕೊಂಡು ಪಾರಾಗಿ ಹೋಗಬೇಕಾದರೆ ಸಾಕುಬೇಕಾಯಿತು.

## ಅಧ್ಯಾಯ ೧೫—ಚಮಕೌಡ ಕೋಟೆ.

ಗೋವಿಂದಸಿಂಹನು ಮುಖವಾಲ ಯುದ್ಧದಲ್ಲಿ ಸರ್ವಸ್ವವನ್ನೂ ಕಳಕೊಂಡನು. ಅವನ ಅನುಚರರಲ್ಲನೇಕರು ಹೇಡಿಗಳಂತೆ ಯುದ್ಧವಿಮುಖರಾಗಿ, ಗುರುವಿನ ವಿಷಯದಲ್ಲಿ ಕೃತಘ್ನರಾಗಿ, ಪಲಾಯನ ಮಾಡಿದರು. ಮೊಗಲರ ಬಲಾತ್ಕಾರಕ್ಕೆ ತಾಯಿಯೂ ಇಬ್ಬರು ಮಕ್ಕಳೂ ಆಹುತಿಯಾದರು. ಶೂರರೂ, ಸ್ವಾಮಿಭಕ್ತರೂ ಆದ ಹಲವರು ಯುದ್ಧಭೂಮಿಯಲ್ಲಿ ಮಡಿದರು. ಇದಕ್ಕೂ ಹೆಚ್ಚಿನ ಹಾನಿಯಿನ್ನಾವುದು? ಆದರೂ ಗೋವಿಂದಸಿಂಹನು ನಿರಾಶನಾಗಲಿಲ್ಲ. ಹೃದಯದಲ್ಲಿ ಸ್ಥಿರವಾಗಿಟ್ಟುಕೊಂಡಿದ್ದ ಉಚ್ಚಾಶೆಯು ಇಂದಿಲ್ಲ ಎಂದಾದರೊಂದು ದಿವಸ ಸಿದ್ಧಿಸಲೇ ಬೇಕೆಂದು ಅವನು ದೃಢವಾಗಿ ನಂಬಿದ್ದನು. ಈ ತನ್ನ ಆಶೆಯು ಸಫಲತೆಗೋಸುಗ ಹಲವು ಬಲಿಗಳನ್ನರ್ಪಿಸಬೇಕಾದುದು ಅನಿವಾರವಾದದ್ದೆಂಬುದನ್ನು ಅವನು ಅರಿತಿದ್ದನು. ಕಾರಣ ಅವನು ರಣಭೂಮಿಯಲ್ಲಿ ಮಡಿದ ವೀರರಿಗಾಗಿ ಶೋಕಿಸಲಿಲ್ಲ. ತಾಯಿಗೋಸುಗ ಅಳಲಿಲ್ಲ. ಮಕ್ಕಳಿಗಾಗಿ ಮಿಡುಕಲಿಲ್ಲ. ಇಂತಹ ದೃಢಮನಸ್ಸಿನವನು ಗೋವಿಂದಸಿಂಹನಾದುದರಿಂದಲೆ ನಿರಾಶೆಯು ಅವನನ್ನು ಎಂದೂ ಆವರಿಸಲಿಲ್ಲ.

ಗೋವಿಂದಸಿಂಹನು ಕೇವಲ ನಾಲ್ವತ್ತು ಜನ ಸೈನಿಕರೊಡನೆ ಮುಖ

ವಾಲಕೋಟೆಯಲ್ಲಿ ಮರಣದ ದಾರಿಯಕಾಯುತ್ತ ಕುಳ್ಳಿರುವುದು ಅನಿಷ್ಟ ಕರ ಸಂಗತಿಯೆಂದು ಭಾವಿಸಿದನು. ಕಾರಣ ಅವನು ಸ್ಥಾನಾಂತರ ಮಾಡುವ ಸಂಕಲ್ಪಮಾಡಿಕೊಂಡನು. ಮೊಗಲರಿಗೆ ಗೋವಿಂದಸಿಂಹನ ಸದ್ಯದ ಸ್ಥಿತಿಯು ತಿಳಿದಿದ್ದರೆ, ಕೋಟೆಯುಲ್ಲಿ ಪ್ರವೇಶಿಸಲಿಕ್ಕೆ ಪ್ರಯತ್ನ ಮಾಡದೆ ಬಿಡುತ್ತಿದ್ದಿಲ್ಲ. ಕಾರಣ ಗೋವಿಂದಸಿಂಹನು ತನ್ನ ಈ ಅಸಹಾಯ ಸ್ಥಿತಿಯು ಮೊಗಲರಿಗೆ ಹೊಳೆಯುವುದರೊಳಗಾಗಿ ಕೋಟೆಯುನ್ನು ಬಿಟ್ಟು ಹೊರಡಬೇಕಿತ್ತು. ಆದ್ದರಿಂದ ಅವನು ಮಧ್ಯರಾತ್ರಿಯಲ್ಲಿ ಅಸು ಚರರೊಡನೆ ಕೋಟೆಯಿಂದ ಗುಪ್ತವಾಗಿ ಹೊರಬಿದ್ದು, ಓಡಿಹೋಗಿ ಚಮಕೌಡ ಕೋಟೆಯನ್ನು ಸೇರಿಕೊಂಡನು.

ಚಮಕೌಡದಲ್ಲಿ ಮೊದಲಿನಿಂದಲೂ ತುಸು ಸೈನ್ಯವಿತ್ತು. ಗೋವಿಂದಸಿಂಹನು ಇಲ್ಲಿಗೆ ಬಂದಬಳಿಕ ಮತ್ತೆ ಕೆಲವರು ಸೈನಿಕರು ಬಂದು ಸೇರಿದರು. ಈ ಸೈನ್ಯವು ಮೊಗಲಸೇನೆಯ ದೃಷ್ಟಿಯಿಂದ ಅತ್ಯಲ್ಪವಾಗಿದ್ದರೂ, ಗೋವಿಂದಸಿಂಹನು ಕೆಲಮಟ್ಟಿಗೆ ಸಮಾಧಾನ ಹೊಂದಿದನು.

ಗೋವಿಂದಸಿಂಹನು ಮುಖವಾಲ ಕೋಟೆಯನ್ನು ಬಿಟ್ಟು ಪಲಾಯನ ಮಾಡಿದ ಸುದ್ದಿಯು ಮೊಗಲರ ಬಳಿಯಲ್ಲಿ ಬಹುಕಾಲ ಗುಪ್ತವಾಗಿ ಉಳಿಯಲಿಲ್ಲ. ಅವರು ಕೌಶಲದಿಂದ ಗೋವಿಂದಸಿಂಹನ ಪಲಾಯನ ವಾರ್ತೆಯನ್ನರಿತು, ಬೆನ್ನುಹತ್ತಿದರು. ಚಮಕೌಡ ದುರ್ಗಕ್ಕೆ ಬಂದು ಮುತ್ತಿಗೆ ಹಾಕಿದರು. ಗೋವಿಂದಸಿಂಹನು ದುರ್ಗದ ಬಾಗಿಲಗಳನ್ನು ಭದ್ರಪಡಿಸಿಕೊಂಡು ವಾಸಿಸಿದ್ದನು. ಇಷ್ಟದೇವತೆಯಾದ ನಯನಾದೇವಿಯ ಪೂಜೆಯನ್ನಾರಂಭಿಸಿದ್ದನು.

ದಿನಗಳು ಕ್ರಮಿಸಿದಂತೆ ಗೋವಿಂದಸಿಂಹನು ಹೆಚ್ಚು ಹೆಚ್ಚು ವಿಪತ್ತಿಗೊಳಗಾಗಹತ್ತಿದನು. ಕೋಟೆಯುಲ್ಲಿಯ ಧಾನ್ಯದ ಸಂಗ್ರಹವು ತೀರುತ್ತ ನಡೆದಿತ್ತು. ಸೈನಿಕರನ್ನು ಪೋಷಿಸುವುದು ಅಸಂಭವವಾಯಿತು. ಗೋವಿಂದಸಿಂಹನು ತನ್ನ ವಿಶ್ವಾಸುಕ ಸೈನಿಕರನ್ನು ಕುರಿತು ಹೇಳಿದ್ದೇನಂದರೆ:

"ಇನ್ನು ನಮಗೆ ಮರಣದ ಹೊರತು ಬೇರೆ ಗತಿಯಿಲ್ಲ! ನೀವೆಲ್ಲರು ಮನಸ್ಸನ್ನು ಗಟ್ಟಿಮಾಡಿಕೊಳ್ಳಿರಿ! ವೀರೋಚಿತ ಮರಣಕ್ಕಾಗಿ ಸಿದ್ಧರಾಗಿರಿ! ನಾವೀಗ ಮರಣಕ್ಕೆ ಹೆದರಿ, ಹೀಗೆಯೇ ಕುಳಿತುಕೊಂಡರೆ, ಇನ್ನು ತುಸು ದಿನಗಳಲ್ಲಿ ಮುಸಲ್ಮಾನರ ಕೈವಶರಾಗಿ ಹೇಡಿಗಳಂತೆ ಶೋಚನೀಯ ಮರಣವನ್ನನುಭವಿಸಬೇಕಾಗುವದು!" ಸೈನಿಕರು ಗೋವಿಂದಸಿಂಹನ ಪ್ರಸ್ತಾಪಕ್ಕೆ ಒಪ್ಪಿದರು. ಯುದ್ಧಮಾಡಲಿಕ್ಕೆ ತಾವು ಸಿದ್ಧರಿರುವೆವೆಂಬದನ್ನು ಜಯಘೋಷದಿಂದ ವ್ಯಕ್ತಗೊಳಿಸಿದರು.

ದುರ್ಗವನ್ನು ಮುತ್ತಿಕೊಂಡಿದ್ದ ಮೊಗಲ ಸೇನಾಪತಿಯು ಗೋವಿಂದಸಿಂಹನ ಬಳಿಗೆ ಒಬ್ಬ ದೂತನನ್ನು ಕಳುಹಿಕೊಟ್ಟನು. ಈ ದೂತನು ಗೋವಿಂದಸಿಂಹನ ಹತ್ತಿರ ಬಂದು ಇಂತು ಹೇಳಿದನು: "ಹೊರಗೆ ಮುತ್ತಿಗೆ ಹಾಕಿಕೊಂಡು ಕುಳಿತವರು ನಿಮ್ಮ ಸ್ವದೇಶಬಾಂಧವರಾದ ಸಂಸ್ಥಾನಿಕರಲ್ಲ; ಮಹಾ ಪರಾಕ್ರಮಶಾಲಿಗಳಾದ ದಿಲ್ಲಿಯ ಸಾಮ್ರಾಟರ ಶೂರ ಸೈನಿಕರು. ಇವರೊಡನೆ ವಿರೋಧ ಬೆಳೆಸುವುದು ನಿಮಗೆ ತರವಲ್ಲ! ಬಾದಶಹನಿಗೆ ಮನ್ನಣೆಯನ್ನು ತೋರಿ, ಶರಣು ಬನ್ನಿರಿ; ಹಾಗು ಪವಿತ್ರವಾದ ಇಸ್ಲಾಮಧರ್ಮವನ್ನು ಸ್ವೀಕರಿಸಿ, ಚಿರಸುಖವನ್ನು ಹೊಂದಿರಿ!" ದೂತನು ಕ್ಷಣಕಾಲ ಸುಮ್ಮನಿದ್ದು ಮತ್ತೆ ಹೇಳಹತ್ತಿದನು: "ಇಂದಿಗೆ ಮೊಗಲರು ವಿಸ್ತಾರವಾದ ಈ ಭರತಖಂಡದ ಸಾರ್ವಭೌಮರು! ಇವರ ಬಳಿಯಲ್ಲಿ ನಿಮ್ಮ ಆಟವು ನಡೆದೀತೇ? ಇಂತಹ ಹುಚ್ಚು ಸಾಹಸಕ್ಕೊಳಗಾಗಬೇಡಿರಿ! ಜಗತ್ತಿನ ಸಕಲ ಧರ್ಮಗಳಲ್ಲಿ ಮಹಮ್ಮದೀಯ ಧರ್ಮವೊಂದೇ ಸತ್ಯವಾದದ್ದು. ಉಳಿದವೆಲ್ಲವು ಸುಳ್ಳು! ನೀವು ಸತ್ಯಧರ್ಮದ ವಿಷಯದಲ್ಲಿ ಭ್ರಾಂತರಾಗಿ ಕೋಪಗೊಂಡಿರುವಿರಿ! ಇದು ಒಳಿತಲ್ಲ! ಇಸ್ಲಾಮಧರ್ಮವನ್ನು ಅಂಗೀಕರಿಸಿ ನೋಡಿರಿ! ನಿಮಗೆ ನನ್ನ ಮಾತಿನ ಸತ್ಯತೆಯು ಪಟಾಯಿಸದಿರದು! ಹಟಕ್ಕೊಳಗಾಗಿ ನಿರರ್ಥಕ ಹಾನಿಯನ್ನು ಮಾಡಿಕೊಳ್ಳುವದು ಬುದ್ಧಿವಂತರಿಗೆ ಉಚಿತವಲ್ಲ!!"

ಈ ಸಮಯದಲ್ಲಿ ಗೋವಿಂದಸಿಂಹನ ಹಿರಿಯಮಗನಾದ ಅಜಿತಸಿಂಹನು ಸಭೆಯಲ್ಲಿದ್ದನು. ಇವನು ಸ್ವಧರ್ಮದ ಹಾಗು ತಂದೆಯ ನಿಂದೆಯನ್ನು ಕೇಳಿ ಸಹಿಸಲಾರದನು. ದೂತನು ಕೇವಲ ಸುದ್ದಿಯನ್ನು ಮುಟ್ಟಿಸತಕ್ಕವನು. ಅವನಿಗೆ ಧರ್ಮದ ಮೇಲೂ, ಗೋವಿಂದಸಿಂಹನ ಶಕ್ತಿಯ ವಿಷಯದಲ್ಲೂ ಟೀಕೆ ಮಾಡಲಿಕ್ಕೆ ಅಧಿಕಾರವಿರಲಿಲ್ಲ. ಹೀಗೆ ಅವ್ಯಾಪಾರೇಷು ವ್ಯಾಪಾರ ಮಾಡಿದ್ದ ದೂತನ ವಿಷಯದಲ್ಲಿ ಅತ್ಯಂತ ಕುಪಿತನಾಗಿದ್ದ ಅಜಯಸಿಂಹನು ಅಂದದ್ದು:"ಎಚ್ಚರಿಕೆಯಿಂದಿರು! ಬಾಯಿ ಮುಚ್ಚು! ಇನ್ನೊಂದು ಶಬ್ದವನ್ನುಚ್ಚರಿಸಿದರೆ, ನಾನು ನಿನ್ನ ಶಿರವನ್ನು ಹಾರಿಸುವೆನು! ನಮ್ಮ ಧರ್ಮವನ್ನು ಹಳಿಯುವ ಹಾಗು ಗುರುಗಳನ್ನು ನಿಂದಿಸುವ ಅಧಿಕಾರವು ನಿನಗಿಲ್ಲ. ಬಾಯಿಗೆ ಬಂದಂತೆ ಬೊಗಳಿದರೆ, ನಾನು ನಿನ್ನನ್ನು ಕಡಿದು ಚೂರು ಚೂರು ಮಾಡೇನು!!" ದೂತನು ಅಪಮಾನದಿಂದ ಉರಿಯುತ್ತ, ಗೋವಿಂದಸಿಂಹನಿಗೆ ಭಯಪ್ರದರ್ಶನ ಮಾಡುತ್ತ, ಕೋಟೆಯಿಂದ ಹೊರಬಿದ್ದು ನಡೆದನು. ನಡೆದ ಸಂಗತಿಯನ್ನು ಮೊಗಲಸೇನಾಪತಿಗೆ ತಿಳುಹಿದನು.

ಗೋವಿಂದಸಿಂಹನು ಸಾಮೋಪಚಾರದಿಂದಾಗಲಿ, ತೋರಿದ ಭಯಕ್ಕೆ ಬೆದರಿಯಾಗಲಿ, ತನಗೆ ಶರಣು ಬರತಕ್ಕವನಲ್ಲವೆಂಬದನ್ನು ಮೊಗಲಸೇನಾಪತಿಯು ತಿಳಕೊಂಡನು. ಕಾರಣ ಅವನು ತನ್ನ ಸೈನಿಕರನ್ನು ಹುರಿದುಂಬಿಸಿ, ಲಗ್ಗೆಹತ್ತಿ ಕೋಟೆಯನ್ನು ಕೈವಶ ಮಾಡಿಕೊಳ್ಳುವ ಕಾರ್ಯಕ್ಕೆ ತೊಡಗಿದನು. ಗೋವಿಂದಸಿಂಹನು ನೇಟಿನಿಂದ ಪ್ರತೀಕಾರ ಮಾಡಹತ್ತಿದನು. ತುಮುಲ ಯುದ್ಧವು ನಡೆಯಿತು. ಗೋವಿಂದಸಿಂಹನ ಇಬ್ಬರು ಹಿರಿಯ ಮಕ್ಕಳು ತಮ್ಮ ಸಿಂಹಪರಾಕ್ರಮವನ್ನು ತೋರಿ, ರಣಭೂಮಿಯಲ್ಲಿ ತಂದೆಯ ಸಮಕ್ಷಮ ಪ್ರಾಣಬಿಟ್ಟರು.

ಶೀಖರು ಮರಣಕ್ಕೆ ಸಿದ್ಧರಾಗಿಯೆ ಯುದ್ಧಹೂಡಿದ್ದರು. ಈ ಸ್ಥಿತಿಯಲ್ಲಿ ಜಯದ ಆಶೆಯನ್ನು ಮಾಡುವುದು ಆಕಾಶ-ಕುಸುಮದಂತೆ ಅಸಂಭವ

ವಾದುದೆಂದು ಅವರು ಭಾವಿಸಿಕೊಂಡಿದ್ದರು. ಗೋವಿಂದಸಿಂಹನು ಈ ಯುದ್ಧದಲ್ಲಿ ಅದ್ವಿತೀಯ ಪರಾಕ್ರಮವನ್ನು ತೋರಿಸಿದನು. ಇವನು ತನ್ನ ಕೈಯಿಂದ ಮೊಗಲಸೇನಾಪತಿಯನ್ನೂ ಅಸಂಖ್ಯ ಸೈನಿಕರನ್ನೂ ಸಂಹರಿಸಿದನು. ಹಲವರನ್ನು ಗಾಯಗೊಳಿಸಿದನು. ಆದರೆ ಗೋವಿಂದ ಸಿಂಹನ ಈ ಶೂರತ್ವಪ್ರದರ್ಶನವು ಫಲಕಾರಿಯಾಗಲಿಲ್ಲ. ಇವನು ಎಷ್ಟೇ ಸಾಹಸವನ್ನು ಕೈಕೊಂಡರೂ, ಜಯದ ಆಶೆಯನ್ನು ಮಾಡುವಂತಿರಲಿಲ್ಲ. ಕಾರಣ ಇವನು ಓಡಿಹೋಗುವ ಸಂಕಲ್ಪ ಮಾಡಿಕೊಂಡನು. ತನ್ನೊಬ್ಬ ಅನುಚರನಿಗೆ ತನ್ನ ವೇಷವನ್ನು ಹಾಕಿ, ಅವನನ್ನು ಮೊಗಲರ ಎದುರಿನಲ್ಲಿ ನಿಲ್ಲಿಸಿದನು. ತಾನು ಕತ್ತಲೆಯ ರಾತ್ರಿಯಲ್ಲಿ ಚಮಕೌಡದುರ್ಗದಿಂದ ಹೊರಬಿದ್ದು ಪಲಾಯನ ಮಾಡಿದನು.

ಶೀಖರ ಇತಿಹಾಸದಲ್ಲಿ ಈ ಯುದ್ಧವು ಬಹು ಮಹತ್ವದ್ದು. ರಜಪೂತರಿಗೆ ಹಳದೀಘಟ್ಟದ ಯುದ್ಧವು ಹೇಗೆ ಚಿರಸ್ಮರಣೀಯವೋ ಹಾಗೆಯೆ ಶೀಖರಿಗೆ ಚಮಕೌಡ ಯುದ್ಧವು ಚಿರಸ್ಮರಣೀಯವಾದುದು. ಈ ಕಾಳಗದಲ್ಲಿ ಶೀಖರ ಕಡೆಯ ಜೀವನಸಿಂಹನು ಅತಿಶಯ ವೀರತ್ವವನ್ನು ತೋರ್ಪಡಿಸಿದನು. ಇಂದಿನ ಇವನ ಯುದ್ಧವನ್ನು ಹಳದೀಘಟ್ಟದ ಯುದ್ಧದಲ್ಲಿಯ ದೈಲಬಾರಾಧಿಪತಿಯಾದ ಮಾನ್ನಾನ ಸಮರಕ್ಕೆ ಹೋಲಿಸಬಹುದಾಗಿದೆ. ಇವನೂ ಮಾನ್ನಾನಂತೆ ಸ್ವದೇಶಕ್ಕೋಸುಗ, ಸ್ವಾಮಿಗೋಸುಗ ಆತ್ಮಯಜ್ಞ ಮಾಡಿದನು. ಇವನು ಗುರುವಿನ ಜೀವನ ರಕ್ಷಣೆಗೋಸುಗ ಗುರುವಿನ ವೇಷದಿಂದ ಮೊಗಲರ ಮೇಲೇರಿ ಹೋದನು. ಭಯಂಕರ ಸಂಹಾರಕಾರ್ಯವನ್ನಾರಂಭಿಸಿದನು. ಮೊಗಲರು ಇವನೇ ಗೋವಿಂದ ಸಿಂಹನೆಂದು ಭಾವಿಸಿ, ಇವನನ್ನು ಸಂಹರಿಸಿದರು. ಶೀಖರು ಈ ವೀರ ಶ್ರೇಷ್ಠನಿಗೆ ಸನ್ಮಾನವನ್ನೂ ಕೃತಜ್ಞತೆಯನ್ನೂ ತೋರಿಸುವುದಕ್ಕಾಗಿ, ಗೋವಿಂದಸಿಂಹನ ಮಕ್ಕಳ ಸಮಾಧಿಯ ಬಳಿಯಲ್ಲಿಯೆ, ಇವನ ಸಮಾಧಿಯನ್ನು ನಿರ್ಮಿಸಿದ್ದಾರೆ.

# ಅಧ್ಯಾಯ ೧೬-ಕಠೋರ ಪರೀಕ್ಷೆ.

ಗೋವಿಂದಸಿಂಹನು ಚಮಕೌಡದುರ್ಗದಿಂದ ಪಲಾಯನ ಮಾಡಿದ್ದೇನೊ ನಿಜ. ಆದರೆ ಎಲ್ಲಿಗೆ ಹೋಗಬೇಕು? ಏನು ಮಾಡಬೇಕು? ಎಂಬುದನ್ನವನು ಗೊತ್ತುಮಾಡಿಕೊಳ್ಳಲಾರದವನಾಗಿದ್ದನು. ಅಸಂಖ್ಯ ಭಕ್ತವೃಂದದಿಂದ ಪೂಜೆಗೊಳ್ಳುತ್ತಿದ್ದ ಶೀಖಧರ್ಮಸಿಂಹಾಸನಾಧಿಕಾರಿಯಾದ ಗೋವಿಂದಸಿಂಹನು ಇಂದು ದಾರಿಯ ಮೇಲಿನ ಬಿಕ್ಕೆಗಾರನಿಗಿಂತಲೂ ಹೀನಸ್ಥಿತಿಯವನಾಗಿದ್ದನು. ಅವನಿಗೆ ಇಂದು ಆಪ್ತೇಷ್ಟರಿರಲಿಲ್ಲ. ಅನುಚರವೃಂದವಿರಲಿಲ್ಲ. ಹಣವಿರಲಿಲ್ಲ. ರಾಜ್ಯವಿರಲಿಲ್ಲ. ಯಾನವಾಹನಗಳ ಸಹಾಯವೂ ಇರಲಿಲ್ಲ. ಇಂತಹ ತೀರ ವಿಷಮಸ್ಥಿತಿಯಲ್ಲೂ ಗೋವಿಂದಸಿಂಹನು ತನ್ನ ಮಂತ್ರವನ್ನು ಬಿಡದವನಾಗಿದ್ದನು. ತಾನು ಪೋಷಿಸಿಕೊಂಡಿದ್ದ ಸ್ವಾತಂತ್ರ್ಯದ ಆಕಾಂಕ್ಷೆಯನ್ನು ತ್ಯಜಿಸದವನಾಗಿದ್ದನು. ಅವನು ಇದುವರೆಗೆ ತನ್ನ ಹೃದಯದಲ್ಲಿ ಶೀಖರ ಸ್ವಾತಂತ್ರ್ಯದೇವಿಯನ್ನು ಪ್ರತಿಷ್ಠಿಸಿಕೊಂಡು, ಆ ದೇವಿಯ ಆರಾಧನೆಯನ್ನು ಏಕಮನಸ್ಸಿನಿಂದ ಮಾಡುತ್ತ ಬಂದಿದ್ದನು. ಅನ್ಯವಿಚಾರಗಳಿಗೆ ಅವನ ಹೃದಯದಲ್ಲಿ ಸ್ಥಳವಿರಲಿಲ್ಲ. ಇಷ್ಟು ಅತ್ಯಾಚಾರಗಳನ್ನು ಸಹಿಸಿಯೂ ಶೀಖರು ಉನ್ನತಿಯನ್ನು ಪಡೆಯುವರು, ಇಷ್ಟು ವಿಪತ್ತುಗಳನ್ನು ನೀಗಿಯೂ ಶೀಖರು ಸ್ವತಂತ್ರರಾಗುವರು, ಭಾರತದ ಭಾಗ್ಯಾಕಾಶದಲ್ಲಿ ನವಭಾಸ್ಕರನು ಉದಿತನಾಗಿ, ಭಾರತೀಯರನ್ನು ಯವನರ ಕಬಳದಿಂದ ಮುಕ್ತಗೊಳಿಸುವನು, ಎಂಬ ಆಶೆಯನ್ನು ಅವನು ಎಂದೂ ಬಿಟ್ಟುಕೊಡಲಾರದವನಾಗಿದ್ದನು. ಈ ಕಾರಣದಿಂದ ಯುರೋಪಿಯನ್ ಇತಿಹಾಸಕಾರರಲ್ಲಿಯ ಒಬ್ಬನು ಗೋವಿಂದಸಿಂಹನನ್ನು ವಿಚಾರಶಕ್ತಿವಿಹೀನಹುಚ್ಚನೆಂದು ಕರೆದಿದ್ದಾನೆ.

ಗೋವಿಂದಸಿಂಹನು ನಿಜವಾಗಿಯೂ ಹುಚ್ಚನು! ಆದರೆ ಆ ಹುಚ್ಚು

ತನವು ವಿಚಾರಶಕ್ತಿಹೀನತೆಯ ದ್ಯೋತಕವಲ್ಲ. ವಿಶೇಷ ರೀತಿಯಿಂದ ವಿಚಾರ ಮಾಡಿದ ತರುವಾಯ ಉಂಟಾದ ಕಾರ್ಯತತ್ಪರತೆಯು ನಿದರ್ಶಕವು. ಈ ಕಾರ್ಯತತ್ಪರತೆಗೆ ಯಾವುದೊಂದು ವಿಪತ್ತಿನ ಹೆದರಿಕೆಯನ್ನು ತೋರಿ, ತಡೆಯನ್ನುಂಟುಮಾಡಲಿಕ್ಕೆ ಬಾರದು. ಈ ತರದ ಹುಚ್ಚು ಹುಟ್ಟಿದ ಹೊರತು ಯಾವ ಮಂತ್ರವೂ ಸಾಧಿಸದು. ಈ ತರದ ಹುಚ್ಚು ಇದ್ದ ಹೊರತು ಯಾವ ಮಹತ್ಕಾರ್ಯವೂ ನೆರವೇರದು. ಈ ತರದ ಹುಚ್ಚು ಹಿಡಿದದ್ದರಿಂದಲೆ ರಾಜಪುತ್ರ ಸಿದ್ಧಾರ್ಥನು ಜಗತ್ತಿನ ತಾರಕನಾಗಿ ಶ್ರೀ ಬುದ್ಧದೇವನೆಂದು ಹೆಸರುಗೊಂಡನು; ಸಾಮಾನ್ಯಸಾದೊಬ್ಬ ಬ್ರಾಹ್ಮಣನ ಮಗನಾದ ಶಂಕರಾಚಾರ್ಯನು ಹಿಂದುಸ್ಥಾನದಲ್ಲಿ ಧರ್ಮಕ್ರಾಂತಿಯನ್ನೂ ವಿಚಾರ ಕ್ರಾಂತಿಯನ್ನೂ ಹುಟ್ಟಿಸಿ, ಲೋಕಪೂಜ್ಯನಾದನು; ನಾನಕನು ಹಿಂದೂ-ಮುಸಲ್ಮಾನರ ಐಕ್ಯದ ನವಮಾರ್ಗವನ್ನು ತೋರಿದನು; ವಿದ್ಯಾರಣ್ಯನು ಕರ್ನಾಟಕದಲ್ಲಿ ನವ ಜಾಗ್ರತೆಯನ್ನುಂಟು ಮಾಡಿ, ದಕ್ಷಿಣ ಹಿಂದುಸ್ಥಾನವನ್ನು ಮಹಮ್ಮದೀಯರ ಅತ್ಯಾಚಾರದಿಂದ ಮುಕ್ತಗೊಳಿಸಿದನು; ಮಹಾರಾಣಾ ಪ್ರತಾಪಸಿಂಹನು ತನ್ನ ಹೆಸರನ್ನು ಸಾರ್ಥಕ ಮಾಡಿಕೊಂಡನು, ಶಿವಾಜಿಯು ಆದರ್ಶಪುರುಷನಾಗಿ, ಛತ್ರಪತಿ ಎಂಬ ಗೌರವವನ್ನು ಹೊಂದಿದನು. ಈ ತರದ ಹುಚ್ಚುತನವೆ ಮನುಷ್ಯರ ಮನುಷ್ಯತ್ವವನ್ನು ಪ್ರಕಾಶಗೊಳಿಸುವುದು; ಅನ್ಯರಿಗಾಗಿ ಆತ್ಮಯಜ್ಞ ಮಾಡಲು ಪ್ರವೃತ್ತಿಗೊಳಿಸುವುದು ಈ ಹುಚ್ಚುತನವೆ. ಸಮಾಜದ ಸಲುವಾಗಿ, ದೇಶಕ್ಕೋಸುಗ, ಧರ್ಮದ ಸಲುವಾಗಿ, ಸತ್ಯಕ್ಕೋಸುಗ ಆತ್ಮಯಜ್ಞ ಮಾಡುವುದೇ ಸರ್ವಶ್ರೇಷ್ಠ ಯಜ್ಞವೆಂದು ಮಹಾತ್ಮರು ಹೇಳಿದ್ದಾರೆ. ಗೋವಿಂದಸಿಂಹನು ಈ ತರದ ಯಜ್ಞಕ್ಕೆ ಸಿದ್ಧನಾಗಿದ್ದನು. ಆದುದರಿಂದ ಇವನ ಹುಚ್ಚುತನವು ಸಾಧಾರಣವಾದುದಲ್ಲ. ಅದು ಕರ್ಮವೀರನ ಕರ್ಮೋನ್ಮಾದನೆಯು. ಈ ತರದ ಹುಚ್ಚು ಗೌರವಾಭಿಲಾಷಿಗಳ ಆದರ್ಶವಾಗಿರುವುದು ಇಷ್ಟವಾದದ್ದು.

ಗೋವಿಂದಸಿಂಹನು ವಿಚಾರಪರನಾಗಿ ಮುಂದೆ ಸಾಗಿದ್ದನು. ಕೋಟೆಯನ್ನು ಬಿಟ್ಟು ತುಸು ದೂರ ಬರುತ್ತಲೆ ಅವನಿಗೆ ಇಬ್ಬರು ಪಠಾಣರ ಭೆಟ್ಟಿಯಾಯಿತು. ಈ ಪಠಾಣರು ಮೊದಲು ಗೋವಿಂದಸಿಂಹನಿಂದ ಉಪಕಾರ ಹೊಂದಿದವರಾಗಿದ್ದರು. ಈಗ ಅವರು ಶತ್ರುಪಕ್ಷದ ದಂಡಾಳುಗಳಾಗಿದ್ದರೂ, ಗೋವಿಂದಸಿಂಹನ ಮುನ್ನಿನ ಉಪಕಾರವನ್ನು ಮರೆದಿರಲಿಲ್ಲ. ಅವರು ಗೋವಿಂದಸಿಂಹನ ದರ್ಶನದಿಂದ ಆನಂದಿತರಾಗಿ ತಮ್ಮ ಸಂತೋಷವನ್ನು ವ್ಯಕ್ತಮಾಡಿದರು; ಹಾಗು ಈ ವಿಪತ್ಪ್ರಸಂಗದಲ್ಲಿ ಸಹಾಯ ಮಾಡುವ ಮನಸ್ಸು ತಮಗಿದೆಯೆಂದು ತಿಳುಹಿದರು. ಗೋವಿಂದಸಿಂಹನು ಅವರ ಸಹಾಯವನ್ನು ಅಲ್ಲಗಳೆಯಲಿಲ್ಲ. ಪಠಾಣರು ಗೋವಿಂದಸಿಂಹನ ಮಾರ್ಗದರ್ಶಕರಾಗಿ ಹೊರಟರು. ಗೋವಿಂದಸಿಂಹನು ಅವರ ಬೆನ್ನುಹತ್ತಿ ನಡೆದನು. ಇವರು ನಡೆಯುತ್ತ ನಡೆಯುತ್ತ ಶತ್ರುಶಿಬಿರದ ಹತ್ತಿರ ಬಂದರು. ಕಾವಲುಗಾರನಿಗೆ ಇವರ ವಿಷಯದಲ್ಲಿ ಸಂದೇಹವುಂಟಾಯಿತು. ಅವನು ಇವರ ಪರೀಕ್ಷೆಗಾಗಿ ದೀಪವನ್ನು ತರುವುದಕ್ಕೆ ಹೋದ ಸಮಯದಲ್ಲಿ ಮೂವರೂ ತಪ್ಪಿಸಿ ಹೊರಟು, ಓಡುತ್ತೋಡುತ್ತ ಮುಂದೆ ಸಾಗಿ ಲುಧಿಯಾನಾ ಜಿಲ್ಹೆಯಲ್ಲಿಯ ಬೆಹಲಾಲಪುರಕ್ಕೆ ಹೋದರು.

ಗೋವಿಂದಸಿಂಹನು ಬೆಹಲಾಲಪುರದಲ್ಲಿಯ ಕಾಜಿಪೀರಮಹಮ್ಮದನೆಂಬವನ ದರ್ಶನ ತಕ್ಕೊಂಡನು. ಈ ಕಾಜಿಯು ಮೊದಲು ಗೋವಿಂದಸಿಂಹನಿಗೆ ಕುರಾಣ ಹಾಗು ಇತರ ಮುಸಲ್ಮಾನೀಧರ್ಮಗ್ರಂಥಗಳ ಅಭ್ಯಾಸ ಮಾಡಿಸಿದವನಾಗಿದ್ದನು. ಕಾಜಿಯು ಬಹುಕಾಲದ ತರುವಾಯ ಪ್ರಿಯ ಶಿಷ್ಯನನ್ನು ನೋಡಿ ಆನಂದಿತನಾದನು; ಆದರೆ ಗೋವಿಂದಸಿಂಹನ ಪ್ರಕೃತ ದುರವಸ್ಥೆಯನ್ನು ತಿಳಿದು ಚಿಂತಾಕ್ರಾಂತನಾದನು. ಅವನು ವಿಚಾರ ಮಾಡಿ, ಗೋವಿಂದಸಿಂಹನಿಗೆ ವೇಷಾಂತರ ಮಾಡಿಕೊಳ್ಳುವ ಪರಾಮರ್ಶೆಯನ್ನು ಕೊಟ್ಟನು. ಈ ಸಮಯದಲ್ಲಿ ಬೆಹಲಾಲಪುರದಲ್ಲಿ ಮೊಗಲಸೇನೆ

ಯ ಒಂದು ಪಥಕವು ವಾಸಿಸುತ್ತಿತ್ತು. ಈ ಸೈನಿಕರಿಗೆ ಗೋವಿಂದಸಿಂಹನ ಆಗಮನವಾರ್ತೆಯು ಗೊತ್ತಾದರೆ, ಅನರ್ಥವೊದಗುವ ಸಂಭವವಿತ್ತು. ಕಾರಣ ಗೋವಿಂದಸಿಂಹನು ಗುರುವಿನ ಹೇಳಿಕೆಯ ಮೇರೆಗೆ ವೇಷ ಬದಲಿಸಿಕೊಳ್ಳಲಿಕ್ಕೆ ಒಡಂಬಟ್ಟನು. ಶೀಖಧರ್ಮೋಚಿತ ವಸ್ತ್ರಭೂಷಣಗಳನ್ನು ಳಿದು, ಮುಸಲ್ಮಾನರ ನೀಲವರ್ಣದ ವಸ್ತ್ರವನ್ನು ಧರಿಸಿದನು; ತಲೆಯ ಕೂದಲುಗಳನ್ನು ಇಳಿಬಿಟ್ಟನು. ಗೋವಿಂದಸಿಂಹನು ದೀಕ್ಷೆಯ ತರುವಾಯ ಈ ಕೂದಲುಗಳನ್ನು ಸದಾ ಕಟ್ಟಿ ಇರಿಸುತ್ತಿದ್ದನು. ಯಾವಾಗಲೂ ಕೂದಲುಗಳನ್ನು ಇಳಿಬಿಟ್ಟುಕೊಂಡಿರುವುದು ಶೀಖಧರ್ಮದ ವಿಧಿನಿಷಿದ್ಧಕಾರ್ಯವು. ಆದರೆ ಸಂಕಟದಲ್ಲಿ ಸಿಕ್ಕಿದ್ದ ಗೋವಿಂದಸಿಂಹನು ಧರ್ಮನಿಯಮವನ್ನು ಉಲ್ಲಂಘಿಸಬೇಕಾಯಿತು. ಹೊತ್ತು ಬಂದತ್ತ ಕೊಡದಿರುವಲೆ ಬೇಕು! ವಿಪತ್ಪ್ರಸಂಗದಲ್ಲಿ ಸಕಲಧರ್ಮವಿಧಿಗಳನ್ನು ಸಾಂಗವಾಗಿ ಸಾಗಿಸಿಯೇ ತೀರುವೆನೆಂದು ಹಟಹಿಡಿಯುವುದು ಬುದ್ಧಿವಂತಿಕೆಯ ಕೆಲಸವಲ್ಲ.

ಗೋವಿಂದಸಿಂಹನು ಫಕೀರನಾದನು. ಅನುಚರರು ಗೋವಿಂದಸಿಂಹನನ್ನು ಮಂಚದ ಮೇಲೆ ಮಲಗಿಸಿ, ಮಂಚವನ್ನು ಹೊತ್ತುಕೊಂಡರು. ಮಾಛಿವಾಡಾ ಪಟ್ಟಣದ ಕಡೆಗೆ ಸಾಗಿದರು. ಇವರು ತುಸು ದೂರ ಹೋಗುವಷ್ಟರಲ್ಲಿ ಮೊಗಲಸೇನೆಯ ಒಂದು ತಂಡವು 'ಅಲ್ಲಾಹೊ ಅಕಬರ' ಎಂಬ ಜಯಘೋಷ ಮಾಡುತ್ತ ಇವರ ಹತ್ತಿರ ಬಂದಿತು. ಗೋವಿಂದಸಿಂಹನ ಪ್ರಾಣರಕ್ಷಣೆ ಮಾಡುವುದು ಕಠಿಣವಾಯಿತು. ಮಂಚವನ್ನು ಹೊತ್ತುಕೊಂಡವರು ಗಾಬರಿಯಾಗಿ ಹೋದರು.

ಮೊಗಲಸೈನಿಕರು ಮಂಚದ ಹತ್ತಿರ ಬಂದು, ಮಂಚದ ಮೇಲೆ ಮಲಗಿದ್ದವನು ಯಾವನು? ಎಂದು ಕೇಳಿದರು. ವಾಹಕರು ದಿಗಿಲುಗೊಂಡರು. ಸುಮ್ಮನಿದ್ದರೆ, ಅನರ್ಥವು ತಪ್ಪುವಂತಿರಲಿಲ್ಲ. ಅವರು ಆಲೋಚನೆಗೊಳಗಾದರು. ಈ ಸಮಯದಲ್ಲಿ ಸಮೀಪದಲ್ಲಿ ಒಬ್ಬ ಮುಸ

ಲ್ಮಾನ ಸಾಧುವಿದ್ದನು. ಜನರು ಇವನನ್ನು ಪೀರನೆಂದು ಕರೆಯುತ್ತಿದ್ದರು. ಈ ಸಾಧುವಿನ ವಿಷಯದಲ್ಲಿ ಜನರೆಲ್ಲರು ಪೂಜ್ಯಭಾವನೆಯುಳ್ಳವರಾಗಿದ್ದರು. ಕಾರಣ ವಾಹಕರು ಬಂದ ಕುತ್ತಿನಿಂದ ಪಾರಾಗುವುದಕ್ಕೆ "ಮೇಲೆ ಮಲಗಿದ್ದವರು ಪೀರಸಾಹೇಬರು" ಎಂದು ಹೇಳಿದರು. ಪೀರಸಾಹೇಬರ ಹೆಸರು ಕೇಳುತ್ತಲೆ ಮೊಗಲಸೈನಿಕರು ಹಿಂಜರಿಯಬೇಕಾಯಿತು. ಆದರೆ ಅವರ ಮನಸ್ಸಿನೊಳಗಿನ ಸಂದೇಹವು ದೂರಾಗಿರಲಿಲ್ಲ. ಕಾರಣ ಅವರು ಮತ್ತೆ ಹೇಳಿದ್ದೇನಂದರೆ:"ಪೀರಸಾಹೇಬರಿದ್ದರೆ, ಬಹಳ ನೆಟ್ಟಗಾಯಿತು. ನಾವು ಅವರ ಆದರ-ಸತ್ಕಾರಗಳನ್ನು ಮಾಡಲೇಬೇಕು. ಮಂಚವನ್ನು ಒಂದು ಸ್ಥಳದಲ್ಲಿ ಇಳಿಸಿರಿ. ನಾವು ಈಗ ಊಟದ ಸಿದ್ಧತೆ ಮಾಡುವೆವು. ಪೀರಸಾಹೇಬರು ನಮ್ಮೊಡನೆ ಊಟಮಾಡಲಿ."

ಗೋವಿಂದಸಿಂಹನು ಯವನರ ಅನ್ನವನ್ನು ಉಣ್ಣುತ್ತಿರಲಿಲ್ಲ. ಮೊಗಲಸೈನಿಕರ ಮಾತುಕೇಳಿ, ಅವನು ಪೇಚಿನಲ್ಲಿ ಬಿದ್ದನು. ಮುಂದೇನು ಮಾಡಬೇಕೆಂಬದು ಅವನಿಗೆ ಹೊಳೆಯಲಿಲ್ಲ. ಅವನು ಸುಮ್ಮನಿದ್ದುಬಿಟ್ಟನು. ಗೋವಿಂದಸಿಂಹನ ಮನಸ್ಥಿತಿಯನ್ನರಿತು ಒಬ್ಬ ವಾಹಕನು ಅಂದದ್ದೇನಂದರೆ:"ಪೀರಸಾಹೇಬರು ನಮ್ಮ ನಿಮ್ಮಂತೆ ಊಟಮಾಡತಕ್ಕವರೆ? ಅವರು ಯೋಗಾಭ್ಯಾಸಿಗಳು. ಯಾವಾಗಾದರೊಮ್ಮೆ ಹಣ್ಣು-ಹಂಪಲಗಳನ್ನು ತಿನ್ನತಕ್ಕವರು. ಇಂತಹ ಸಾಧುಗಳಿಗೆ ನೀವು ಊಟದ ಜುಲುಮೆ ಮಾಡುವುದು ತರವಲ್ಲ! ಬೇಕಾದರೆ ನಾವು ನಿಮ್ಮ ಸಂಗಡ ಊಟ ಮಾಡುವೆವು. ನಾವು ಊಟ ಮಾಡಿದರೆ, ನಮ್ಮ ಗುರುಗಳು ಊಟ ಮಾಡಿದಂತಾಯಿತು." ಮೊಗಲಸೈನಿಕರು ಒಪ್ಪಿಕೊಂಡರು. ವಾಹಕರೂ ಸೈನಿಕರೂ ಒಂದೆಡೆಯಲ್ಲಿ ಭೋಜನ ಮಾಡಿದರು. ಸೈನಿಕರ ಸಂದೇಹವು ದೂರಾಯಿತು. ಅವರು ಮತ್ತೆ ಮಂಚದ ಬಳಿಗೆ ಬರಲಿಲ್ಲ.

ಮುಂದೆ ಕೆಲವು ದಿವಸಗಳ ಮೇಲೆ ಗೋವಿಂದಸಿಂಹನು ತಾನು ಧರಿಸಿದ್ದ ನೀಲವರ್ಣದ ವಸ್ತ್ರವನ್ನು ಬಿಟ್ಟುಕೊಟ್ಟನು. ಆ ವಸ್ತ್ರದ ಕೆಲವು

ಭಾಗವನ್ನು ಸುಟ್ಟನು. ಉಳಿದ ಭಾಗವನ್ನು ತನ್ನ ಒಬ್ಬ ಪ್ರೀತಿಯ ಶಿಷ್ಯನ ಕೈಯಲ್ಲಿ ಕೊಟ್ಟು, ಶೀಖಧರ್ಮದಲ್ಲಿ ಹೊಸದೊಂದು ಪಂಥವನ್ನು ಸ್ಥಾಪಿಸಹೇಳಿದನು. ಗುರುವಿನ ಅಪ್ಪಣೆಯಂತೆ ಆ ಶಿಷ್ಯನು 'ನಿಹಂ' ಅಥವಾ ಆಕಾಲೀ ಎಂಬ ಪಂಥವನ್ನು ಸ್ಥಾಪಿಸಿದನು. 'ನಿಹಂ' ಅಂದರೆ ಅಹಂಕಾರವಿರಹಿತ. ಆಕಾಲಿ ಅಂದರೆ ಚಿರಕಾಲವಿರುವುದು. ಆಕಾಲಿ ಪಂಥದ ಶೀಖರು ನೀಲವರ್ಣದ ವಸ್ತ್ರವನ್ನು ಧರಿಸುತ್ತಾರೆ.

ಮಾಛಿವಾಡದಲ್ಲಿ ಗೋವಿಂದಸಿಂಹನ ಒಬ್ಬ ಶಿಷ್ಯನಿದ್ದನು. ಇವನ ಹೆಸರು ಗುಲಾಬಸಿಂಹ. ಇವನ ಮನೆಯು ಹತ್ತಿರ ಮಸೀದೆಯಿತ್ತು. ಈ ಮಸೀದೆಯೊಳಗಿನ ಮುಲ್ಲಾನು ಧರ್ಮಾಂಧನೂ ಹಿಂಸಾಪರಾಯಣನೂ ಆಗಿದ್ದನು. ಗೋವಿಂದಸಿಂಹನು ಮಸೀದೆಯ ಮಾರ್ಗವಾಗಿ ಶಿಷ್ಯನ ಮನೆಗೆ ಹೊರಟಿರುವಾಗ ಮುಲ್ಲಾನು ಗೋವಿಂದಸಿಂಹನನ್ನು ಗುರುತಿಸಿದನು; ಹಾಗು ಶೀಖಗುರುವನ್ನು ಕಾಡಲಿಕ್ಕೆ ಇದೊಳ್ಳೆ ಸಮಯವೆಂದು ಭಾವಿಸಿದನು. ಅವನು ಗೋವಿಂದಸಿಂಹನಿಗೆ ಮನಬಂದಂತೆ ಮಾತಾಡ ಹತ್ತಿದನು. ಗೋವಿಂದಸಿಂಹನು ಗಾಬರಿಯಾದನು. ಅವನು ಪ್ರತಿಕಾರಕ್ಕೆ ತೊಡಗುವಂತಿರಲಿಲ್ಲ. ಮುಲ್ಲಾನು ಅಂದದ್ದನ್ನು ಅನಿಸಿಕೊಂಡು ಸುಮ್ಮನಿದ್ದನು. ಇದರಿಂದ ಮುಲ್ಲಾನಿಗೆ ಸಮಾಧಾನವಾಗಲಿಲ್ಲ. ಅವನು ಮತ್ತಷ್ಟು ಜೋರಿನಿಂದ ಒದರಾಡ ಹತ್ತಿದನು. ಗುಲಾಬಸಿಂಹನು ಗದ್ದಲವನ್ನು ಕೇಳಿ ಹೊರಗೆ ಬಂದನು. ನಡೆದಿದ್ದ ಸಂಗತಿಯನ್ನು ತಿಳಿದು ಭಯಗೊಂಡನು. ಮುಲ್ಲಾನನ್ನು ಸಮಾಧಾನಗೊಳಿಸಲಿಕ್ಕೆ ಪ್ರಯತ್ನಿಸ ಹತ್ತಿದನು. ಸವಿಸವಿ ಮಾತಾಡಿದನು. ದುಡ್ಡಿನ ಆಶೆಯನ್ನು ತೋರಿದನು. ಆದರೂ ಮುಲ್ಲಾನು ಹಾದಿಗೆ ಬರಲಿಲ್ಲ. ಅವನು ಹಟದಿಂದ ನುಡಿದನೇನಂದರೆ:"ಗೋವಿಂದಸಿಂಹನು ಇಂದು ನನ್ನ ಕೈಯಿಂದ ಮುಸಲ್ಮಾನೀ ಧರ್ಮವನ್ನು ಸ್ವೀಕರಿಸಬೇಕು; ಇಲ್ಲವೆ ಗೋಮಾಂಸವನ್ನು ತಿಂದು ವ್ರತಚ್ಯುತನಾಗಬೇಕು; ಇವೆರಡೂ ಬೇಡಾಗಿದ್ದರೆ, ಮರಣಕ್ಕೆ ಸಿದ್ಧ

ನಾಗಬೇಕು!"

ಮುಲ್ಲಾನು ಕೂಡಲೆ ತನ್ನ ಅನುಚರರಿಂದ ಒಂದು ಆಕಳನ್ನು ತರಿಸಿದನು. ಅದರ ಮಾಂಸವನ್ನು ತೆಗೆಸಿದನು. ಅದರ ಕೆಲವು ಭಾಗವನ್ನು ಗೋವಿಂದಸಿಂಹನ ಮುಂದಿರಿಸಿ, ತಿನ್ನುವಂತೆ ಅಪ್ಪಣೆ ಮಾಡಿದನು. ಗೋವಿಂದಸಿಂಹನು ಉಭಯವಿಧಸಂಕಟಕ್ಕೊಳಗಾದನು. ಒಂದು ಕಡೆಯಲ್ಲಿ ಧರ್ಮ. ಬೇರೊಂದು ಕಡೆಯಲ್ಲಿ ಪ್ರಾಣ ಹಾಗು ಅದರ ಉಚ್ಚಾಶೆಗಳು. ಗೋವಿಂದಸಿಂಹನು ದೀರ್ಘವಾದ ಆಲೋಚನೆಗೊಳಗಾದನು.

ಪರಧರ್ಮಿಗಳ ಅಸಹಾಯದ ದೈನ್ಯಾವಸ್ಥೆಯ ಲಾಭ ತಕ್ಕೊಂಡು ಈ ರೀತಿ ಆಚರಿಸುವುದು ಯಾವ ಧರ್ಮಕ್ಕೂ ಸಮ್ಮತವಲ್ಲ. ಹೀಗೆ ಆಚರಿಸುವುದು ಕಾಪುರುಷತೆಯ ಲಕ್ಷಣವಲ್ಲದೆ ಬೇರಿಲ್ಲ. ಆದರೆ ಧರ್ಮಾಂಧನಾದ ಆ ಮುಲ್ಲಾನು ಉದಾತ್ತ ವಿಚಾರಕ್ಕೊಳಗಾಗಲಿಲ್ಲ. ಹೀನತೆಯನ್ನು ತೋರಿಸಲಿಕ್ಕೆ ಹಿಂಜರಿಯಲಿಲ್ಲ.

ಧರ್ಮಪ್ರಸಾರವು ಮುಸಲ್ಮಾನೀಧರ್ಮದ ಅಂಗವಾಗಿರಬಹುದು. ಆದರೆ ಧರ್ಮಪ್ರಸಾರದ ಕಾರ್ಯದಲ್ಲಿ ಬಲಾತ್ಕಾರವು ಉಪಯುಕ್ತವಾದುದಲ್ಲ. ಪರಧರ್ಮಿಗಳು ಸ್ವೇಚ್ಛೆಯಿಂದ ತಮ್ಮ ಧರ್ಮಕ್ಕೆ ಸೇರಿಕೊಳ್ಳುವಂತೆ ಮಾಡುವುದು ಧರ್ಮಪ್ರಸಾರಕನ ಕರ್ತವ್ಯವು. ಅಲ್ಲದೆ, ಅಧಿಕಾರದ ಇಲ್ಲವೆ ಶಕ್ತಿಯ ದುರುಪಯೋಗಮಾಡಿ, ಪರಧರ್ಮಿಗಳನ್ನು ಜುಲುಮೆಯಿಂದ ಕುಲಗೆಡಿಸುವುದನ್ನು ಯಾವ ಧರ್ಮವೂ ಅನುಮೋದಿಸದು. ಇಸ್ಲಾಮಧರ್ಮದ ಆಜ್ಞೆಗಳಾದರೂ ಇದಕ್ಕೆ ವಿಪರೀತವಾಗಿಲ್ಲ. ಆದರೆ ಔರಂಗಜೇಬನ ಆಳಿಕೆಯ ಕಾಲದಲ್ಲಿ ಹಿಂದುಸ್ಥಾನದ ಮುಸಲ್ಮಾನರು ಸ್ವ-ಧರ್ಮದ ತತ್ವಗಳನ್ನು ಮರೆದು, ಧರ್ಮಾಂಧತೆಗೊಳಗಾಗಿ, ವಿಧರ್ಮಿಗಳ ಮೇಲೆ ಬಲಾತ್ಕಾರ ಮಾಡಲಿಕ್ಕೆ ಸಿದ್ಧರಾಗಿದ್ದರು. ಅಧರ್ಮವನ್ನೆ ಧರ್ಮವೆಂದು ತಿಳಕೊಂಡಿದ್ದರು. ಈ ಧಾರ್ಮಿಕ ಅವನತಿಯು ಮುಂದೆ ಮುಸಲ್ಮಾನರಿಗೆ ಆಳಿಗಾಲವನ್ನುಂಟುಮಾಡದೆ ಬಿಡಲಿಲ್ಲ.

ಮುಲ್ಲಾನ ಕೃತ್ಯದಿಂದ ಗೋವಿಂದಸಿಂಹನಿಗೆ ಕೋಪವುಂಟಾಯಿತು. ಆದರೆ ಮಾಡುವುದೇನು? ಗೋವಿಂದಸಿಂಹನು ಯಾವದೇ ರೀತಿಯಿಂದಾಗಲಿ ಜೀವದಿಂದ ಪಾರಾಗಬೇಕಿತ್ತು. ಕಾರಣ ಅವನು ಕೆಲ ಹೊತ್ತು ಅನುಮಾನಿಸಿ, ಕಡೆಗೆ ನಿರ್ಧಾರ ಮಾಡಿಕೊಂಡು, ಆ ಮಾಂಸವನ್ನು ತನ್ನಲ್ಲಿಯ ಆಯುಧದಿಂದ ಚೂರು ಚೂರಾಗಿ ಕತ್ತರಿಸಿ ತಿಂದು ಬಿಟ್ಟನು.

ಗೋವಿಂದಸಿಂಹನ ಈ ವ್ಯವಹಾರವು ಶೀಖಧರ್ಮಸಮ್ಮತವಲ್ಲವೆಂಬದನ್ನು ಬೇರೆ ಹೇಳಬೇಕಿಲ್ಲ. ಆದರೆ ಗೋವಿಂದಸಿಂಹನು ಕೇವಲ ಧಾರ್ಮಿಕನಾಗಿರದೆ, ರಾಜಕಾರಣಿಯೂ ಆಗಿದ್ದನು. ಧರ್ಮರಕ್ಷಣೆಯೂ, ಪ್ರಸಾರವೂ ಅವನ ಕರ್ತವ್ಯಗಳಾಗಿದ್ದಂತೆ, ಸ್ವಾತಂತ್ರ್ಯಸಂಪಾದನೆಯೂ, ಸ್ವತಂತ್ರರಾಜ್ಯದ ಪ್ರತಿಷ್ಠಾಪನೆಯೂ ಅವನ ಉದ್ದೇಶಗಳಾಗಿದ್ದುವು. ಇದಕ್ಕಾಗಿ ಅವನು ಇನ್ನು ಕೆಲವು ಕಾಲ ಬದುಕಬೇಕಿತ್ತು. ಒದಗಬಹುದಿದ್ದ ಅಕಾಲಿಕ ಮರಣದಿಂದ ಪಾರಾದರೆ ಮಾತ್ರ ಅವನು ತನ್ನ ಉದ್ದೇಶಗಳನ್ನು ಸಾಧಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡಬಹುದಿತ್ತು. ಕಾರಣ ಅವನು ಅನಿವಾರ್ಯದಿಂದ ಕ್ಷಣಿಕ ಅಧರ್ಮಕ್ಕೆ ಸ್ಥಳಗೊಟ್ಟನಲ್ಲದೆ, ಮರಣವನ್ನು ವರಿಸಲಿಲ್ಲ. ಬಲಾತ್ಕಾರಕ್ಕೊಳಗಾಗಿ ಆಚರಿಸಿದ ಈ ಅಧಾರ್ಮಿಕ ಕೃತ್ಯದಿಂದ ಹೆಚ್ಚಿನ ಪಾಪವು ಘಟಿಸದೆಂದೂ, ಉಂಟಾದ ಅಲ್ಪ ದೋಷವನ್ನು ಹಲವು ಸತ್ಕೃತ್ಯಗಳಿಂದ ಕಳೆದುಕೊಳ್ಳಬಹುದೆಂದೂ ಅವನು ಭಾವಿಸಿರಬಹುದು! ಅವನು ಸ್ವತಂದ ಹಿತಾಹಿತ-ಧರ್ಮಾಧರ್ಮ-ಪಾಪಪುಣ್ಯಗಳಿಗಿಂತ ತನ್ನ ಸಮಾಜದ ಹಿತಾಹಿತ-ಧರ್ಮಾಧರ್ಮ-ಪಾಪಪುಣ್ಯಗಳು ಹೆಚ್ಚಿನವೆಂದೂ, ಇವುಗಳ ರಕ್ಷಣೆಗಾಗಿ ಏನನ್ನಾದರೂ ಮಾಡಬೇಕೆಂದೂ ತಿಳಕೊಂಡವನು. ಕಾರಣ ಅವನು ಅಭಕ್ಷ್ಯಭಕ್ಷಣ ಮಾಡಿಯೂ ಸ್ವಸಮಾಜದ ಹಿತಸಾಧನೆಗೋಸುಗ ಜೀವದಿಂದಿರಲಿಕ್ಕೆ ಆಶಿಸಿದನು. ಗೋವಿಂದಸಿಂಹನ ಈ ಆಚರಣೆಯಿಂದ ಮುಂದೆ ಶೀಖಧರ್ಮದಲ್ಲಿ ಗೋಮಾಂ

ಸವು ಅನಿವಾರ್ಯ ಪ್ರಸಂಗದಲ್ಲಿ ಭಕ್ಷ್ಯವೆಂದು ನಿರ್ಣಯಿಸಲ್ಪಟ್ಟಿತು. ಅಂತೆಯೇ ಶೀಖರಾಜನಾದ ಬಾಂದಾನು ವೈರಿಗಳು ಕೋಟೆಯನ್ನು ಮುತ್ತಿದಾಗ ಆಹಾರದ ಪದಾರ್ಥಗಳ ಕೊರತೆಯಾಗಲು ಗೋಮಾಂಸವನ್ನು ತಿಂದು ಜೀವಿಸಲಿಕ್ಕೆ ಹಿಂದುಮುಂದೆ ನೋಡಲಿಲ್ಲ.

---

## ಅಧ್ಯಾಯ ೧೭—ಮುಕ್ತಸರ.

ಗೋವಿಂದಸಿಂಹನು ಮರುದಿನವೆ ಆ ಗ್ರಾಮವನ್ನು ಬಿಟ್ಟು ಹೊರಟು, ಕನ್ನೀಚಾ ಎಂಬ ಊರಿಗೆ ಹೋದನು. ಇಲ್ಲಿ ಗೋವಿಂದಸಿಂಹನ ಒಬ್ಬ ಶಿಷ್ಯನ ಮನೆಯಿತ್ತು. ಗೋವಿಂದಸಿಂಹನು ಶಿಷ್ಯನ ಮನೆಗೆ ಹೋಗಿ, ಒಂದು ಕುದುರೆಯನ್ನು ಬೇಡಿದನು. ಆದರೆ ಮೊಗಲರ ಭಯದಿಂದ ಭೀತನಾದ ಆ ಶಿಷ್ಯನು ಗುರುವಿಗೆ ಕುದುರೆಯನ್ನು ಕೊಡಲಿಲ್ಲ. ಗೋವಿಂದಸಿಂಹನು ನಡೆಯುತ್ತಲೆ ಪ್ರವಾಸಮಾಡಬೇಕಾಯಿತು. ಇವನು ತನ್ನ ಶಿಷ್ಯರಿರುವ ಕಡೆಯಲ್ಲೆಲ್ಲ ಸಂಚರಿಸಿದನು. ಆದರೆ ಯಾವ ಶಿಷ್ಯನೂ ಸಹಾಯ ಮಾಡಲಿಲ್ಲ. ಶಿಷ್ಯರು ಮುಸಲ್ಮಾನರ ಹೆದರಿಕೆಯಿಂದ ಗುರುವಿನ ಆದರೋಪಚಾರ ಮಾಡಲಿಕ್ಕೆ ಸಹ ಹಿಂದೆಗೆಯುತ್ತಿದ್ದರು. ಕಾರಣ ಗೋವಿಂದಸಿಂಹನು ಶಿಷ್ಯರ ಉಸಾಬರಿಯನ್ನು ಬಿಟ್ಟುಕೊಟ್ಟು ಗುಪ್ತರೀತಿಯಿಂದ ಸಂಚಲಸ ಹತ್ತಿದನು. ಒಂದು ಸ್ಥಳದಲ್ಲಿ ಒಂದು ದಿವಸಕ್ಕಿಂತ ಹೆಚ್ಚು ಕಾಲವಿರುತ್ತಿರಲಿಲ್ಲ. ಈ ರೀತಿ ಅವನು ಜಲಂದರದ ದುಆಬಪ್ರದೇಶದಲ್ಲೂ, ಪತಿಯಾಲಾ ರಾಜ್ಯದಲ್ಲೂ ಹಲವು ದಿವಸಗಳ ವರೆಗೆ ಪ್ರವಾಸ ಮಾಡಿದನು.

ಗೋವಿಂದಸಿಂಹನು ದೇಶಪರ್ಯಟನ ಮಾಡುತ್ತ ಮಾಡುತ್ತ ಜಲಪೂರವೆಂಬ ಹಳ್ಳಿಗೆ ಹೋದನು. ಅಲ್ಲಿ ಎಂಟು ದಿವಸವಿದ್ದು, ಬಳಿಕ

ತನ್ನ ನಿಜವೇಷವನ್ನು ಧರಿಸಿ, ಭತಾದದ ಅಡವಿಯ ಅಂಚಿನ ಪ್ರದೇಶದಲ್ಲಿ ಪ್ರಯಾಣ ಬೆಳಿಸಿದನು. ಈ ಸೀಮೆಯಲ್ಲಿ ಹರಿಗೋವಿಂದನ ಹಾಗು ತೇಗ ಬಹದ್ದೂರನ ಕಾಲದಲ್ಲಿ ಶೀಖಧರ್ಮವನ್ನು ಸ್ವೀಕರಿಸಿದ್ದ ಶಿಷ್ಯರ ಸಂಖ್ಯೆಯು ಹೆಚ್ಚಿತ್ತು. ಈ ಶಿಷ್ಯರು ಗೋವಿಂದಸಿಂಹನ ಆಗಮನ ವಾರ್ತೆಯನ್ನು ಕೇಳಿ, ಗುರುದರ್ಶನಕ್ಕೋಸುಗ ಗುಂಪುಗಟ್ಟಿಕೊಂಡು ಬರ ಹತ್ತಿದರು. ಇವರು ಗೋವಿಂದಸಿಂಹನು ಚಮಕೌಡಕೋಟೆಯಲ್ಲಿ ಮಡಿ ದನೆಂಬ ಸುಳ್ಳುಸುದ್ದಿಯನ್ನು ಕೇಳಿದವರಾಗಿದ್ದರು. ಕಾರಣ ಇವರು ಈಗ ಗುರುದರ್ಶನವನ್ನು ಹೊಂದಿ, ತಾವು ಕೇಳಿದ ಸುದ್ದಿಯು ಅಸತ್ಯ ವೆಂದು ಮನಗಂಡು, ಪರಮಾಹ್ಲಾದವನ್ನು ಹೊಂದಿದರು.

ಈ ಪ್ರವಾಸದಲ್ಲಿ ಗೋವಿಂದಸಿಂಹನು ಹಲವು ವಿಧದ ಕಷ್ಟಗಳನ್ನು ಅನುಭವಿಸಬೇಕಾಯಿತು. ತನ್ನ ಬೆನ್ನಹತ್ತಿದ್ದ ಮೊಗಲರ ಕೈಯಲ್ಲಿ ಎಲ್ಲಿ ಸಿಗುವೆನೋ ಎಂಬ ಭಯವಂತೂ ಸದಾ ಇದ್ದೇ ಇತ್ತು. ಅಲ್ಲದೆ, ಶಿಷ್ಯರು ಸಹ ಭಯಗ್ರಸ್ತರಾಗಿ ಗುರುವಿಗೆ ಸಹಾಯ ಮಾಡುವುದಕ್ಕೆ ಹಿಂದೆಗೆಯು ತ್ತಿದ್ದರು. ಇದರಿಂದ ಗೋವಿಂದಸಿಂಹನು ಕೆಲವು ದಿವಸ ಅರ್ಧಾಹಾರ ದಿಂದ, ಕೆಲವು ದಿವಸ ಕದಾಹಾರದಿಂದ, ಕೆಲವು ದಿವಸ ಅನಾಹಾರದಿಂದ ಕಾಲ ಕಳೆಯಬೇಕಾಯಿತು. ಅನ್ನ-ನೀರುಗಳ ಹಾಗು ನಿದ್ರೆಯ ಈ ಅನಿ ಯಮಿತತ್ವವು ಗೋವಿಂದಸಿಂಹನ ದೇಹದ ಮೇಲೆ ಪರಿಣಾಮವನ್ನು ಮಾಡದೆ ಬಿಡಲಿಲ್ಲ. ಗೋವಿಂದಸಿಂಹನು ಸಂಚರಿಸುತ್ತ ಸಂಚರಿಸುತ್ತ ಕಾಪುರಕ್ಕೆ ಬಂದಕೂಡಲೆ ಜಡ್ಡಿಗೆ ಬಿದ್ದನು. ಕಾರಣ ಇವನು ಉಂಟಾದ ದೇಹಾಲಸ್ಯವನ್ನು ಕಳಕೊಳ್ಳಲಿಕ್ಕೆ ಕಾಪುರದಲ್ಲಿ ಕೆಲವು ದಿವಸ ವಾಸಿಸ ಬೇಕಾಯಿತು.

ಗೋವಿಂದಸಿಂಹನು ಸೈನ್ಯಸಂಗ್ರಹಕ್ಕಾಗಿ ಸದಾ ಯತ್ನಿಸುತ್ತಿ ದ್ದನು. ಹೋದ ಗೌರವವನ್ನು ಪುನಃ ಸಂಪಾದಿಸುವ ಹಾಗು ಶೀಖರ ಸ್ವಾತಂತ್ರ್ಯಪ್ರಾಪ್ತಿಯ ವಿಚಾರಗಳು ಅವನ ತಲೆಯಲ್ಲಿ ಸಗಾ ಮನೆಮಾಡಿ

ಕೊಂಡಿದ್ದುವು. ಆದರೆ ಅವನು ಇದುವರೆಗೆ ತನ್ನ ಈ ಮಹತ್ವಾಕಾಂಕ್ಷೆಯ ಸಫಲತೆಗೆ ಸುಯೋಗವನ್ನು ಹೊಂದಿರಲಿಲ್ಲ. ಅವನು ಎಷ್ಟೋ ಪ್ರಯತ್ನಿಸಿದ್ದರೂ, ಈ ವರೆಗೆ ದಂಡಾಳುಗಳು ಕೂಡಿದ್ದಿಲ್ಲ. ಎಷ್ಟೋ ಉಪದೇಶ ಮಾಡಿದರೂ, ಶೀಖರು ಗೋವಿಂದಸಿಂಹನ ಸೈನ್ಯದಲ್ಲಿ ಸೇರುವುದಕ್ಕೆ ಧೈರ್ಯ ಹೊಂದಿದ್ದಿಲ್ಲ. ಹೀಗಿದ್ದರೂ ಗೋವಿಂದಸಿಂಹನು ನಿರಾಶನಾಗಿದ್ದಿಲ್ಲ.

ಸಾಹಸಭರದಿಂದ ದೀರ್ಘೋದ್ಯೋಗಕ್ಕೆ ಸದಾ ಯತ್ನಿಸುತ್ತಿರುವವನು ಎಂತಹ ಕೆಲಸವನ್ನಾದರೂ ನೆರವೇರಿಸಬಲ್ಲನು. ಇವನಿಗೆ ಅಸಾಧ್ಯವಾದ ಕೆಲಸವೊಂದೂ ಇಲ್ಲ. ಜಗತ್ತನ್ನು ಗೆಲ್ಲಲಪೇಕ್ಷಿಸಿದ ಶೂರಶ್ರೇಷ್ಠ ನೆಪೊಲಿಯನನು ಅಸಾಧ್ಯವೆಂಬ ಶಬ್ದವು ಮೂರ್ಖರಿಂದ ಬರೆಯಲ್ಪಟ್ಟ ಕೋಶದಲ್ಲಿ ಮಾತ್ರ ದೊರೆಯಬಹುದಲ್ಲದೆ, ಅನ್ಯತ್ರ ದೊರೆಯದೆಂದು ಹೇಳಿರುವ ಮಾತಿನ ಗುಟ್ಟಾದರೂ ಇದೆ. ನಿರಾಶನಾಗಿ ಕುಳ್ಳಿರುವುದು ಪುರುಷಶ್ರೇಷ್ಠನ ಕಾರ್ಯವಲ್ಲ; ಹೇಡಿಯ ಆಲಸ್ಯತನ ದ್ಯೋತಕವು.

ಗೋವಿಂದಸಿಂಹನು ಸತತ ಪ್ರಯತ್ನದಿಂದ ಕೃತಕಾರ್ಯನಾದನು. ಅವನು ಈ ಪರ್ವತದ ಅಂಚಿನ ಪ್ರದೇಶದಲ್ಲಿ ಅಲ್ಲಲ್ಲಿ ಸಂಚರಿಸಿ, ಬಹಳ ಕಷ್ಟಬಟ್ಟು ಹನ್ನೆರಡು ಸಾವಿರ ಸೈನ್ಯವನ್ನು ಸಂಗ್ರಹಿಸಿದನು. ಇವರಲ್ಲಿ ಕೆಲವರು ಕಾಲಾಳುಗಳಿದ್ದರು. ಕೆಲವರು ಕುದುರೆಯ ಸವಾರರಿದ್ದರು. ಇವರೆಲ್ಲರು ಗೋವಿಂದಸಿಂಹನ ಉಪದೇಶದಂತೆ ಶೀಖ ಸಮಾಜದ ಉದ್ಧಾರಕ್ಕಾಗಿ ತಮ್ಮ ದೇಹವನ್ನು ಬಲಿಗೊಡಲು ಸಿದ್ಧರಾದರು. ಗೋವಿಂದಸಿಂಹನು ತನ್ನ ಸೈನಿಕರ ರಣೋತ್ಸಾಹವನ್ನು ನೋಡಿ ಹಿರಿ ಹಿರಿ ಹಿಗ್ಗಿ ಮುಂದಿನ ಕಾರ್ಯಕ್ಕೆ ಪ್ರವೃತ್ತನಾದನು.

ಗೋವಿಂದಸಿಂಹನು ಹೀಗೆ ಸೈನ್ಯಸಂಗ್ರಹ ಮಾಡಿಕೊಂಡಿರುವುದು ಮೊಗಲರಿಗೆ ಗೊತ್ತಾಯಿತು. ಮೊಗಲರು ಗೋವಿಂದಸಿಂಹನ ದೀರ್ಘೋದ್ಯೋಗವನ್ನು ತಿಳಿದು ಸೋಜಿಗಗೊಂಡರು. ಆದರೆ ಅವರು ಗೋವಿಂದ

ಸಿಂಹನ ಮೇಲೆ ದಯೆದೋರುವಂತಿರಲಿಲ್ಲ. ಸುಮ್ಮನಿದ್ದು ಗೋವಿಂದ ಸಿಂಹನ ಉಚ್ಚಾಶೆಗಳ ಸಾಫಲ್ಯಕ್ಕೆ ಮಾರ್ಗಮಾಡಿಕೊಡುವಂತಿರಲಿಲ್ಲ. ಅವರು ಗೋವಿಂದಸಿಂಹನ ಶಕ್ತಿಕ್ಷಯಕ್ಕಾಗಿ ಮತ್ತೆ ಟೊಂಕಕಟ್ಟಿದರು. ಸಿರಹಿಂದದ ಸುಭೇದಾರನು ಸೇನಾಪತಿಯಾಗಿ ಏಳು ಸಾವಿರ ಸೈನಿಕರೊಡನೆ ಗೋವಿಂದಸಿಂಹನ ಮೇಲೆ ಸಾಗಿ ನಡೆದನು. ಗೋವಿಂದಸಿಂಹನು ಈ ಸಂಗತಿಯನ್ನರಿತು, ಮೊಗಲರನ್ನು ಎದುರಿಸಲಿಕ್ಕೆ ಮುಂದೆ ಸಾಗಿದನು. ಅನುಕೂಲವಾದ ಸ್ಥಳವನ್ನು ಹುಡುಕಿಕೊಂಡು, ಶಿಬಿರ ಬಿಟ್ಟುಕೊಂಡಿದ್ದು, ಮೊಗಲರ ಮಾರ್ಗಪ್ರತೀಕ್ಷೆ ಮಾಡಹತ್ತಿದನು.

ಸಿರಹಿಂದದ ಸುಭೇದಾರನು ಭರದಿಂದ ಬರುತ್ತಿದ್ದನು. ಗೋವಿಂದ ಸಿಂಹನ ಛಾವಣಿಯನ್ನು ಸಮೀಪಿಸಿದ್ದನು. ಇಷ್ಟರಲ್ಲಿಯೆ ಕೆಲವರು ಶೀಖರು ಮೊಗಲ ಸೈನಿಕರ ಮೇಲೆ ಬಿದ್ದರು. ಶೀಖರು ಹೀಗೆ ತಮ್ಮ ಮೇಲೆ ಬೀಳಬಹುದೆಂದು ಮೊಗಲರು ಕನಸು-ಮನಸುಗಳಲ್ಲಿ ಸಹ ನೆನಿಸಿದವರಲ್ಲ. ಕಾರಣ ಅವರು ಗಾಬರಿಯಾದರು. ಈ ಶೀಖರು ಗೋವಿಂದ ಸಿಂಹನ ಈಗಿನ ಸೈನಿಕರಲ್ಲ; ಮೊದಲು ಗೋವಿಂದಸಿಂಹನ ಸೈನಿಕರಾಗಿದ್ದು, ಮುಖವಾಲ ದುರ್ಗದಲ್ಲಿ ಗೋವಿಂದಸಿಂಹನನ್ನು ಅಸಹಾಯ ಸ್ಥಿತಿಯಲ್ಲಿರಿಸಿ ಪಲಾಯನ ಮಾಡಿದವರಾಗಿದ್ದರು. ಇವರು ಓಡಿಹೋಗಿ ಪಾ-ರಾದ ಒಳಿಕ, ಕೃತಕರ್ಮವನ್ನು ನೆನೆದು ಪಶ್ಚಾತ್ತಾಪಬಟ್ಟು, ಪ್ರಾಯಶ್ಚಿತ್ತಕ್ಕೆ ಸಿದ್ಧರಾಗಿದ್ದರು. ಅನುಕೂಲ ಸಮಯವನ್ನು ಕಾಯ್ದುಕೊಂಡಿದ್ದು, ಗುರುವಿಗೆ ನೆರವಾಗಿ, ಹೇಡಿಗಳೆಂಬ ತಮ್ಮ ದುರ್ನಾಮವನ್ನು ಕಳೆದುಕೊಳ್ಳಲಿಕ್ಕೆ ಮನಸ್ಸು ಮಾಡಿಕೊಂಡಿದ್ದರು. ಇವರಿಗೆ ಇಂದು ಆ ಸುಯೋಗವು ದೊರಕಿತು. ಇವರು ಸಂಖ್ಯೆಯಿಂದ ತೀರ ಕಡಿಮೆ ಇದ್ದರೂ—ಕೇವಲ ನಾಲ್ವತ್ತೇ ಜನರಿದ್ದರೂ—ಅಸಿಮಿಸಿಮಾಡದೆ ಮೊಗಲರ ಮೇಲೇರಿ ಹೋದರು. ಅಡಗಿಕೊಂಡಿದ್ದ ಗುಪ್ತಸ್ಥಳದಿಂದ ಹೊರಬಿದ್ದು ಒಮ್ಮೆಲೆ ಮೊಗಲರನ್ನು ಆಕ್ರಮಿಸಿದರು. ಮೊಗಲರು ಇವರು

ಯಾರು? ಎಲ್ಲಿಂದ ಹೇಗೆ ಬಂದರು? ಎಂಬದನ್ನು ವಿಚಾರಿಸಿ ತಿಳಿಯದಾದರು. ಮೊಗಲರಿಗೂ ಅಲ್ಪ ಸಂಖ್ಯಾಕರಾದ ಈ ಶೀಖರಿಗೂ ಯುದ್ಧವು ನಡೆಯಿತು. ಶೀಖರಿಗೆ ಜಯುದ ಆಶೆಯಿರಲಿಲ್ಲ. ಅವರು ಮರಣಕ್ಕಾಗಿಯೆ ಯುದ್ಧ ಹೂಡಿದ್ದರು. ಯುದ್ಧ ಮಾಡುತ್ತ ಮಾಡುತ್ತಲೆ ಮಡಿದುಹೋದರು. ಈ ಜನರ ಸಾಹಸವನ್ನೂ, ಶೂರತನವನ್ನೂ ನೋಡಿ ಮೊಗಲರು ಸ್ತಂಭಿತರಾಗಿ ಹೋದರು.

ಗೋವಿಂದಸಿಂಹನು ದೂರದಲ್ಲಿದ್ದು ಈ ಯುದ್ಧವನ್ನು ನೋಡುತ್ತಿದ್ದನು. ಆ ಶೀಖರು ಯಾರು? ಎಲ್ಲಿಂದ ಬಂದರು? ಹೀಗೆ ಮೊಗಲರನ್ನು ಮುತ್ತಿದ್ದೇಕೆ? ಎಂಬದನ್ನು ತಿಳಿದುಕೊಳ್ಳಲಿಕ್ಕೆ ಅವನು ಉತ್ಸುಕನಾಗಿದ್ದನು. ಆದರೆ ಸುದ್ದಿಯನ್ನು ತರಿಸಿ ತನ್ನ ಕುತೂಹಲತೆಯನ್ನು ಕಳಕೊಳ್ಳಲಿಕ್ಕೆ ಅವನಿಗೆ ಅವಕಾಶವಿರಲಿಲ್ಲ. ಮೊಗಲರು ಮುಂದೆ ಸಾಗಿದ್ದರು. ಗೋವಿಂದಸಿಂಹನು ಮೊಗಲರನ್ನು ಎದುರಿಸಲಿಕ್ಕೆ ಸಿದ್ಧನಾಗಿ ನಿಂತನು. ಶೀಖಸೈನಿಕರು ತಮ್ಮ ಜ್ಞಾತಿಬಾಂಧವರ ಆತ್ಮಯಜ್ಞವನ್ನು ಕಣ್ಮುಟ್ಟ ನೋಡಿ, ವಿಶೇಷ ಉತ್ಸಾಹಿತರಾಗಿದ್ದರು. ಅವರು ಜಯವನ್ನಾಗಲಿ ಮರಣವನ್ನಾಗಲಿ ಹೊಂದಲೇ ಬೇಕೆಂದು ನಿರ್ಧರಿಸಿಕೊಂಡರು. ಗುರುವಿನ ಜಯಘೋಷದಿಂದ ದಿಕ್ತಟವನ್ನು ವ್ಯಾಪಿಸಿಬಿಟ್ಟರು.

ಯುದ್ಧವು ನಡೆಯಿತು (೧೭೦೬). ಧರ್ಮಕ್ಕೂ ಸ್ವಾತಂತ್ರ್ಯಕ್ಕೂ ಜೀವಕೊಡಲಿಕ್ಕೆ ಸಿದ್ಧರಾಗಿದ್ದ ಶೀಖರ ಎದುರಿನಲ್ಲಿ ವಿಲಾಸಪರಾಯಣರಾದ ಮೊಗಲರ ಆಟವು ನಡೆಯಲಿಲ್ಲ. ಮೊಗಲರು ಕ್ರಮಶಃ ಹೀನಬಲರಾಗುತ್ತ ನಡೆದು, ಕಡೆಗೆ ಜಯದ ಆಶೆಯನ್ನು ಬಿಟ್ಟುಕೊಟ್ಟು, ಪಲಾಯನ ಮಾಡಹತ್ತಿದರು. ಆದರೆ ಈ ಪಲಾಯನವು ಅವರಿಗೆ ಸುಖಕರವಾಗಲಿಲ್ಲ. ಯುದ್ಧಕ್ಷೇತ್ರದ ಆ ಮರುಭೂಮಿಯಲ್ಲಿ ಸಾಕಷ್ಟು ಜಲಾಶಯಗಳಿರಲಿಲ್ಲ. ಇದ್ದ ಕೆಲವು ಜಲಾಶಯಗಳನ್ನು ಶೀಖರು ಆಕ್ರಮಿಸಿದ್ದರು. ಮೊಗಲರು ತಮ್ಮ ಸಂಗಡ ಸಂಗ್ರಹಿಸಿ ತಂದಿದ್ದ ನೀರು ಯುದ್ಧಕಾಲದ

ಲ್ಲಿಯೆ ಸಾಲಲಿಲ್ಲ. ಯುದ್ಧ ಮಾಡುವಾಗ ಮೊಗಲರಿಗೆ ನೀರಿನ ತುಟಾಗ್ರತೆ ಯಾದರೂ, ಅದನ್ನವರು ಸ್ಪರ್ಶಿಸಿಕೊಳ್ಳಲು ಸಮರ್ಥರಾಗಲಿಲ್ಲ. ಶೀಖರ ಜಯಕ್ಕೆ ಇದೊಂದು ಪ್ರಬಲಕಾರಣವಾಯಿತೆಂದು ಹೇಳಿದರೆ ತಪ್ಪಾಗದು.

ಓಡಿ ಹೋಗುತ್ತಿರುವ ಮೊಗಲ ಸೈನಿಕರು ಕುಡಿಯಲಿಕ್ಕೆ ನೀರ ಕಾಣದೆ, ಬಹುಜನರು ಆ ಮರುಭೂಮಿಯಲ್ಲಿ ದಾರುಣ ಯಾತನೆಯಿಂದ ಮಡಿದು ಹೋದರು. ಕುಸು ಜನರಿಗೆ ತಮ್ಮ ಪ್ರಾಣವುಳಿಸಿಕೊಂಡು ಪಾರಾಗಿ ಹೋಗಬೇಕಾದರೆ ಸಾಕುಬೇಕಾಯಿತು.

ಯುದ್ಧದ ತರುವಾಯ ಗೋವಿಂದಸಿಂಹನು ಗಾಯಗೊಂಡವರ ಉಪಚಾರಕ್ಕೆ ಹೊರಟನು. ಗಾಯಾಳುಗಳನ್ನು ಪರೀಕ್ಷಿಸಿ, ಉಪಚರಿಸಿ, ಅವರನ್ನು ಬೇರೆ ಕಡೆಗೆ ಕಳುಹಿಕೊಟ್ಟನು. ಹೀಗೆ ಮಾಡುತ್ತ ಮಾಡುತ್ತ ಮುಂದೆ ಸಾಗಿದನು. ಮೊದಲಿನ ಯುದ್ಧಭೂಮಿಗೆ ಬಂದನು. ಆ ನಾ-ಲ್ವತ್ತು ಜನ ಶೀಖರಲ್ಲಿ ಬಹುತರ ಎಲ್ಲರೂ ಮಡಿದಿದ್ದರು; ಕೇವಲ ಒಬ್ಬ ಸೈನಿಕನು ಮಾತ್ರ ಮರಣೋನ್ಮುಖನಾಗಿ ಉಸಿರಾಡಿಸುತ್ತಿದ್ದನು. ಗೋ-ವಿಂದಸಿಂಹನು ಅವನ ಹತ್ತಿರ ಹೋಗಿ ಉಪಚರಿಸಿದನು. ಇದರಿಂದ ಆ ಸೈನಿಕನು ತುಸುಹೊತ್ತಿನ ವರೆಗೆ ಮಾತನಾಡುವ ಶಕ್ತಿಯನ್ನು ಹೊಂದಿದನು. ಅವನು ತಮ್ಮ ಪಂಗಡದವರ ಗತ ಇತಿಹಾಸವನ್ನು ಹೇಳಿ, ಕಡೆಗೆ ಗೋವಿಂದಸಿಂಹನ ಕ್ಷಮೆಯನ್ನು ಬೇಡಿಕೊಂಡನು. ಗೋವಿಂದಸಿಂಹನು ದೇವರ ಮಹಿಮೆಗೆ ಅಚ್ಚರಿಗೊಂಡು, ಅವರೆಲ್ಲರನ್ನು ಮನಃಪೂರ್ವಕ ಕ್ಷಮಿಸಿದನು. ಗುರುವಿನ ಕ್ಷಮಾಪಣೆಯ ಶಬ್ದಗಳನ್ನು ಕೇಳುತ್ತ ಆ ಸೈನಿಕನು ಸಂತೋಷದಿಂದ ಪ್ರಾಣಬಿಟ್ಟನು.

ಗೋವಿಂದಸಿಂಹನು ಈ ಯುದ್ಧಭೂಮಿಯಲ್ಲಿ ದೊಡ್ಡದೊಂದು ಕೆರೆಯನ್ನು ಕಡಿಸಿದನು. ಹಾಗು ಇದಕ್ಕೆ ಮುಕ್ತಸರವೆಂದು ಹೆಸರಿಟ್ಟನು. ಮುಂದೆ ಇಲ್ಲಿ ಒಂದು ಗ್ರಾಮವು ಸ್ಥಾಪಿತವಾಯಿತು. ಇಂದಿಗೂ ಈ ಸ್ಥಳವು ಶೀಖರ ಪ್ರಮುಖ ತೀರ್ಥಸ್ಥಳವಾಗಿದೆ. ಇಲ್ಲಿ ಪ್ರತಿವರ್ಷ

ಮಾಘಮಾಸದಲ್ಲಿ ದೊಡ್ಡ ಜಾತ್ರೆಯಾಗುವುದು. ದೂರದೂರದ ಶೀಖರು ಈ ಜಾತ್ರೆಗೆ ಆಗಮಿಸಿ, ತೀರ್ಥಸ್ಥಳದ ದರ್ಶನ ತಕ್ಕೊಳ್ಳುತ್ತಾರೆ.

ಈ ಸ್ಥಳವು ಗೋವಿಂದಸಿಂಹನ ಜಯದ ಸ್ಮಾರಕವು. ಅವನು ಅನೇಕ ಶೀಖರು ಈ ಯುದ್ಧಭೂಮಿಯಲ್ಲಿ ಮಡಿದು ಮುಕ್ತಿಯನ್ನು ಹೊಂದಿದ್ದರ ನೆನಪಿಗಾಗಿ ಈ ಸ್ಥಳಕ್ಕೆ ಮುಕ್ತಸರವೆಂದು ಹೆಸರ ಕೊಟ್ಟಿರ ಬಹುದು.

## ಅಧ್ಯಾಯ ೧೮-ರಾಜಧಾನಿಯ ಮಾರ್ಗದಲ್ಲಿ

ಗೋವಿಂದಸಿಂಹನು ಮುಕ್ತಸರದಲ್ಲಿ ಕೆಲವು ದಿವಸ ಇದ್ದು, ವಿಶ್ರಾಂತಿಯನ್ನು ತಕ್ಕೊಂಡನು. ಬಳಿಕ ತನ್ನ ಅನುಚರರೊಡನೆ ಆನಂದ ಪುರದ ಕಡೆಗೆ ಪ್ರಯಾಣ ಬೆಳಿಸಿದನು. ಇವನು ದಾರಿಯಲ್ಲಿ ಮಾಳವ ಪ್ರದೇಶದೊಳಗಿನ ಒಂದು ಹಳ್ಳಿಯ ಸೃಷ್ಟಿಸೌಂದರ್ಯಕ್ಕೆ ಮುಗ್ಧನಾಗಿ, ಅಲ್ಲಿ ಕೆಲವು ದಿವಸ ವಾಸವಾಗಿದ್ದನು. ಇವನ ವಾಸಕ್ಕಾಗಿ ನಿರ್ಮಿತ ವಾದ ಮನೆಯು 'ದಮದಮಾ ಸಾಹಿಬ' ಎಂಬ ಹೆಸರಿನಿಂದ ಹೆಸರಾ ಯಿತು. ಈ ಮನೆಯ ಹೆಸರಿನಿಂದ ಉತ್ತರ ಕಾಲದಲ್ಲಿ ಆ ಗ್ರಾಮಕ್ಕೆ 'ದಮದಮಾ' ಎಂಬ ಹೆಸರುಂಟಾಯಿತು. ಶೀಖರು ಈ ಸ್ಥಳವು ಪವಿತ್ರ ವಾದದ್ದೆಂದು ಭಾವಿಸುವರು. ಹಿಂದುಗಳಿಗೆ ಹೇಗೆ ಕಾಶಿಯೋ ಹಾಗೆ ಶೀಖರಿಗೆ ದಮದಮಾವು ಪವಿತ್ರ ಕ್ಷೇತ್ರಸ್ಥಳವು. ಶೀಖರು ಈ ಸ್ಥಳದಲ್ಲಿ ವಾಸಿಸುವುದು ಸೌಭಾಗ್ಯದ ಹಾಗು ಪುಣ್ಯದ ಸಂಗತಿಯೆಂದು ಭಾವಿಸು ವರು. ಮೂರ್ಖನಾದ ಮನುಷ್ಯನು ಸಹ ಇಲ್ಲಿ ವಾಸ ಮಾಡಿದರೆ ಪಂಡಿತನಾಗುವನೆಂದು ಅವರು ಹೇಳುತ್ತಾರೆ. ಈ ಸ್ಥಳವು ವಿದ್ಯೆಯಿಂದ ಹೆಸರಾದದ್ದು. ಇಲ್ಲಿಯ ಕವಿಗಳು ಪಂಜಾಬೀ ಭಾಷೆಯಲ್ಲಿ ಹಲವು ಕಾವ್ಯ ಗಳನ್ನು ರಚಿಸಿದ್ದಾರೆ.

ಗೋವಿಂದಸಿಂಹನಿಗೆ ಮೂವರು ಹೆಂಡಿರಿದ್ದರೆಂದು ನಾವು ಹಿಂದೆ ಹೇಳಿದ್ದೇವೆ. ಗೋವಿಂದಸಿಂಹನು ಮುಖವಾಲ ಕೋಟೆಯನ್ನು ಬಿಟ್ಟು ಚಮಕೌಡ ಕೋಟೆಗೆ ಪಲಾಯನ ಮಾಡುವ ಪ್ರಸಂಗದಲ್ಲಿ ಇಬ್ಬರು ಹೆಂಡಂದಿರನ್ನು ತನ್ನ ವಿಶ್ವಾಸುಕ ಅನುಚರರೊಡನೆ ಬೇರೆ ಕಡೆಗೆ ಕಳುಹಿ ಕೊಟ್ಟಿದ್ದನು; ಒಬ್ಬ ಹೆಂಡತಿಯನ್ನು ಸಂಗಡ ಕರೆದೊಯ್ದಿದ್ದನು. ಈ ಹೆಂಡತಿಯು ಚಮ-ಕೌಡ ಕೋಟೆಯಲ್ಲಿಯೆ ಮಡಿದಳು. ಇವಳ ಮರಣವು ಹೇಗಾಯಿತೆಂಬದನ್ನು ಹೇಳುವದಕ್ಕೆ ನಿಶ್ಚಿತ ಪ್ರಮಾಣಗಳಿಲ್ಲ. ಆದರೂ ಇವಳು ಮೊಗಲರ ಅತ್ಯಾಚಾರಕ್ಕೊಳಗಾಗಿ ಅವರ ಕೈಯಿಂದ ಮರಣವನ್ನು ಹೊಂದಿದಳೆಂದು ಹೇಳಬಹುದಾಗಿದೆ.

ಉಳಿದಿದ್ದ ಇಬ್ಬರು ಹೆಂಡಿರು ದಿಲ್ಲೀನಗರದಲ್ಲಿ ಗುಪ್ತರೀತಿಯಿಂದ ವಾಸವಾಗಿದ್ದರು. ಇವರು ಪತಿಯ ವಿಜಯವಾರ್ತೆಯನ್ನು ಕೇಳಿ, ಅತ್ಯಂತ ಹರ್ಷಿತರಾಗಿ, ಪತಿಸಂದರ್ಶನಕ್ಕೋಸುಗ ದಮದಮೆಗೆ ಬಂದರು. ದೀರ್ಘಕಾಲದ ವಿರಹದ ತರುವಾಯದ ಈ ಮಿಲನದಲ್ಲಿ ಪತಿಪತ್ನಿಗಳಿಗಾದ ಆನಂದವನ್ನು ವರ್ಣಿಸಲಳವಲ್ಲ. ಆದರೆ ಈ ಆನಂದವು ಬಹುಕಾಲವುಳಿಯಲಿಲ್ಲ. ಈ ಸಂತೋಷದ ಪ್ರಸಂಗದಲ್ಲಿ ಆ ಮಡದಿಯರಿಗೆ ಮಕ್ಕಳ ನೆನಪಾಗದಿರಲಿಲ್ಲ. ಅವರು ಶೋಕಭರದಿಂದ ನಮ್ಮ ಮಕ್ಕಳೆಲ್ಲಿ? ಎಂದು ಪತಿಯನ್ನು ಕೇಳಿದರು. ಗೋವಿಂದಸಿಂಹನು ಸತಿಯರನ್ನು ಸಮಾಧಾನಗೊಳಿಸಲಿಕ್ಕೆ ಹೇಳಿದ್ದು:“ವೀರಪತ್ನಿಯರೆ, ಶೋಕಿಸಬೇಡಿರಿ! ಮಕ್ಕಳನ್ನು ಬಲಿಗೊಟ್ಟು ಜಯಸಂಪಾದಿಸಿದ್ದೇನೆ! ಮಕ್ಕಳ ಆತ್ಮಯಜ್ಞದಿಂದ ಶೀಖಸಮಾಜದ ಹೃದಯವನ್ನು ಆಕ್ರಮಿಸಿದ್ದೇನೆ. ಇನ್ನು ಈ ಶೀಖರೆಲ್ಲರು ನಮ್ಮ ಮಕ್ಕಳು. ನಾಲ್ವರ ಬದಲು ಅಸಂಖ್ಯ ಜನರು ನಮ್ಮ ಮಕ್ಕಳಾಗಿದ್ದಾರೆ. ನೀವು ನನ್ನ ಶಿಷ್ಯಸಮೂಹವನ್ನು ಮಕ್ಕಳಂತೆ ಪ್ರೀತಿಸಿ ಸಂತೋಷ ಹೊಂದಿರಿ”

ಗೋವಿಂದಸಿಂಹನು ದಮದಮೆಯಲ್ಲಿರುವಾಗ ದಶರಾ ಪಾತಶಾಹಕಾ

ಗ್ರಂಥಸಾಹಿಬದ ಒಂದು ಅಧ್ಯಾಯವಾದ ವಿಚಿತ್ರನಾಟಕವೆಂಬ ಭಾಗ ವನ್ನು ರಚಿಸಿದನು. ಇದರಲ್ಲಿ ಸಂಸ್ಕೃತವು ಬಹಳವಾಗಿ ಕೂಡಿಕೊಂಡಿದೆ. ಇದು ಛಂದೋಬದ್ಧವಾಗಿದ್ದು, ಗೋವಿಂದಸಿಂಹನ ಜೀವನ ವೃತ್ತಾಂತ ವನ್ನೊಳಗೊಂಡಿದೆ.

ಶೀಖಗುರುಗಳೆಲ್ಲರೂ ಕೆಲವು ಸ್ತೋತ್ರಗಳನ್ನು ರಚಿಸುತ್ತ ಬಂದಿ ದ್ದರು. ಐದನೆಯ ಗುರುವು ಈ ಸ್ತೋತ್ರಗಳನ್ನೂ, ಭಕ್ತರ ಕೆಲವು ಸ್ತೋತ್ರಗಳನ್ನೂ ಒಟ್ಟುಗೂಡಿಸಿ ಒಂದು ಗ್ರಂಥವನ್ನು ರಚಿಸಿದ್ದನು. ಇದೇ ಮುಂದಿನ ಕಾಲದಲ್ಲಿ ಆದಿಗ್ರಂಥವೆಂದು ಹೆಸರಾಯಿತು. ಮುಂದೆ ಇದರಲ್ಲಿ ಒಂಬತ್ತನೇ ಗುರುವಿನ ಸ್ತೋತ್ರಗಳನ್ನು ಸೇರಿಸುವುದರಲ್ಲಿ ಬಂತು. ಆದರೆ ಹತ್ತನೆಯ ಗುರುವು ನೂತನ ಪದ್ಧತಿಯಿಂದ ಒಂದು ಗ್ರಂಥವನ್ನು ರಚಿಸಿದನು. ಆದಿಗ್ರಂಥವು ಕೇವಲ ಸ್ತೋತ್ರಗಳ ಸಮ ಷ್ಟಿಯು. ಆದರೆ ಗೋವಿಂದಸಿಂಹನಿಂದ ರಚಿತವಾದ 'ದಶರಾ ಪಾತಶಾಹಕಾ ಗ್ರಂಥದ'ಲ್ಲಿ ಭಗವಂತನ ಸ್ತೋತ್ರಗಳಲ್ಲದೆ ರಾಜನೈತಿಕ ಆಲೋಚನೆ ಯೂ, ಆ ಕಾಲದ ಇತಿಹಾಸವೂ ಅಡಕವಾಗಿದೆ.

ಗೋವಿಂದಸಿಂಹನು ಕೆಲವು ದಿವಸ ದಮದಮೆಯಲ್ಲಿದ್ದು, ಬಳಿಕ ಮುಂದೆ ನಡೆದನು. ದಾರಿಯಲ್ಲಿ ಸಿರಹಿಂದನಗರವು ಹತ್ತಿತು. ಮೊಗಲರು ಈ ಸ್ಥಳದಲ್ಲಿಯೆ ಗೋವಿಂದಸಿಂಹನ ಇಬ್ಬರು ಮಕ್ಕಳನ್ನು ಕೊಲ್ಲಿಸಿದ್ದರು. ಈ ಕೊಲೆಯಿಂದ ಸಿರಹಿಂದದ ಇತಿಹಾಸವಷ್ಟೇ ಅಲ್ಲ; ಮೊಗಲರ ಆಳಿಕೆಯ ಇತಿಹಾಸವೂ ಕಲಂಕಿತವಾಗಿದೆ. ಗೋವಿಂದಸಿಂಹನು ಈ ನಗರವನ್ನು ನೋಡಿ, ಗತಸಂಗತಿಯ ಸ್ಮರಣೆಯನ್ನು ಹೊಂದಿ, ಕೋಪಪರವಶನಾ ದನು. ಶೀಖರು ಈ ಪಾಪಪುರವನ್ನು ನೆಲಸಮಮಾಡಿ ಬಿಡಲುದ್ಯುಕ್ತ ರಾದರು. ಆದರೆ ಗೋವಿಂದಸಿಂಹನು ಅನುಯಾಯಿಗಳ ಈ ಪ್ರವೃತ್ತಿ ಯನ್ನು ತಡೆದನು. ಕೆಲವರ ಪಾಪಕೃತಿಗಾಗಿ ಇಡಿ ಪಟ್ಟಣಕ್ಕೆ ದಂಡ ವನ್ನು ವಿಧಿಸಲಿಕ್ಕೆ ಅವನ ಮನಸ್ಸು ಒಪ್ಪಲಿಲ್ಲ. ಅವನು ಅನ್ಯಮನಸ್ಕನಾಗಿ

ಮಕ್ಕಳನ್ನು ಹುಗಿದಿರಿಸಿದ್ದ ಗೋಡೆಯ ಬಳಿಗೆ ಹೋಗಿ ಕುಳಿತು ಚಿಂತಾಕ್ರಾಂತನಾದನು. ದುಃಖವು ಒತ್ತರಿಸಿ ಬರಹತ್ತಿತು. ಆ ಅಸಮಸಾಹಸಿಗೆ ಒತ್ತಿಬರುವ ದುಃಖವನ್ನು ತಡೆಯಲಿಕ್ಕಾಗಲಿಲ್ಲ. ಆ ಧೀರನು ಪುತ್ರಶೋಕವನ್ನು ನೆನೆನೆನೆದು ಕಣ್ಣೀರ ಉದುರಿಸ ಹತ್ತಿದನು. ಅವನ ಸಂಯಮವೂ, ಕಠೋರತೆಯೂ ಸಂಪೂರ್ಣವಾಗಿ ಅಳಿದು ಹೋಯಿತು. ಅಸಾಧಾರಣ ಪುರುಷನಾಗಿದ್ದ ಅವನು ಸಾಧಾರಣ ಮನುಷ್ಯನಂತೆ ಶೋಕಿಸ ಹತ್ತಿದನು. ಯಾವ ಅಪೂರ್ವ ಮಾನಸಿಕ ತೇಜದಿಂದ ಅವನು ಈ ವರೆಗೆ ಕಷ್ಟವನ್ನು ಸುಖವೆಂದೂ, ವಿಪತ್ತನ್ನು ತನ್ನ ಪರೀಕ್ಷೆಯ ಒರೆಗಲ್ಲೆಂದೂ ಭಾವಿಸಿ ಮುಂದಡಿಯಿಟ್ಟಿದ್ದನೋ ಆ ತೇಜವು ಇಂದು ಉಳಿಯಲಿಲ್ಲ. ಅವನು ಎಷ್ಟೋ ಹೊತ್ತು ಶೋಕಿಸಿ ಶೋಕಿಸಿ ಸುಮ್ಮನಾದನು. ಅವನಿಗೆ ಆ ಸ್ಥಳದಲ್ಲಿ ಬಹಳಕಾಲವಿರಲಿಕ್ಕಾಗಲಿಲ್ಲ. ಅವನು ಬೇಗನೆ ಆ ಸ್ಥಳದಿಂದ ಹೊರಟನು. ಹೋಗುವಾಗ್ಗೆ ಗೋವಿಂದಸಿಂಹನು ಆ ನಗರಕ್ಕೆ ಶಾಪವನ್ನು ಕೊಟ್ಟನು. ಆ ಶಾಪವು ಸುಳ್ಳಾಗಲಿಲ್ಲ. ಕರ್ಮಯೋಗಿಯಾದ ಶೀಖಗುರುವಿನ ಶಾಪವದು! ವ್ಯರ್ಥವಾದೀತೆ? ಈಗ ಆ ಸಿರಹಿಂದ ನಗರವಿಲ್ಲ. ಆ ಸ್ಥಳದಲ್ಲಿ ಮುನ್ನಿನ ಮಹಡಿಗಳಿಲ್ಲ. ಜನಕೋಲಾಹಲವಿಲ್ಲ. ಕೆಲವು ಅವಶೇಷಗಳು ಮಾತ್ರ ನೀರವವಾಗಿದ್ದು, ಪ್ರಾಚೀನ ದುಷ್ಕೃತಿಯನ್ನು ನೆನಿಸುತ್ತಿವೆ.

ಗೋವಿಂದಸಿಂಹನು ಸಿರಹಿಂದವನ್ನು ಬಿಟ್ಟು ಹೊರಡುವಾಗ್ಗೆ ತನ್ನ ಅನುಚರರಿಗೆ ಆಜ್ಞಾಪಿಸಿದ್ದೇನಂದರೆ:''ಯಾವನೇ ಶೀಖನಾಗಲಿ, ಈ ನಗರವನ್ನು ದಾಟಿ ಗಂಗಾಸ್ನಾನಕ್ಕೆ ಹೊರಟನೆಂದರೆ, ಅವನು ಹೋಗುವಾಗಲೂ ಬರುವಾಗಲೂ ಹೆಂಡಿಯ ತುಂಡೊಂದನ್ನು ಯಮುನಾ ನದಿಯಲ್ಲೂ ಶತದ್ರು ನದಿಯಲ್ಲೂ ಚಲ್ಲಿಕೊಡಬೇಕು; ಇಲ್ಲವಾದರೆ ಅವನಿಗೆ ಗಂ[illegible]ತ್ರೆಯ ಪುಣ್ಯವು ಲಭಿಸದು!'' ಶೀಖರು ಇಂದಿಗೂ ಭಕ್ತಿಭರದಿಂದ ಗೋವಿಂದಸಿಂಹನ ಈ ಅಪ್ಪಣೆಯನ್ನು ಪಾಲಿಸುತ್ತಾರೆ.

ಗೋವಿಂದಸಿಂಹನು ಸಿರಹಿಂದಕ್ಕೆ ಒಂದು ಹೊಸ ಹೆಸರ ಕೊಟ್ಟನು. ಇದು ಆ ನಗರದ ಅಪಕೀರ್ತಿಕರ ಕಾರ್ಯದ ದ್ಯೋತಕವು—ಗುರು ಪುತ್ರರ ಹತ್ಯೆಯ ನಿದರ್ಶಕವು. ಗೋವಿಂದಸಿಂಹನು ಆ ನಗರಕ್ಕೆ ಗುರು ಮಾರ (ಗುರುವಿನ ಹತ್ಯಾಕಾರಿ) ಎಂದು ಹೆಸರಿಟ್ಟನು.

ಸತ್ತ ಮಕ್ಕಳ ಸ್ಮರಣೆಯು ಶೀಖ ಸಮಾಜದಲ್ಲಿ ಚಿರಕಾಲ ಜಾಗೃತ ಇರಬೇಕೆಂದು ಗೋವಿಂದಸಿಂಹನು ಆ ಪಟ್ಟಣದಲ್ಲಿ ಒಂದು ಗುಡಿಯನ್ನು ಕಟ್ಟಿಸಿದನು. ಇದು ಆ ಹಾಳುನಗರದಲ್ಲಿ ಈಗಲೂ ಇದೆ. ಶೀಖರು ಇಂದಿಗೂ ಆ ಮಂದಿರ ಸಂದರ್ಶನದಿಂದ ತಮ್ಮ ಪ್ರಾಚೀನ ಗೌರವಮಯ ಇತಿಹಾಸವನ್ನು ಸ್ಮರಿಸಿಕೊಳ್ಳುತ್ತಾರೆ; ನಿರಾಶೆಯ ಮಧ್ಯದಲ್ಲೂ ಆಶೆಯ ಕ್ಷೀಣಜ್ಯೋತಿಯನ್ನು ಕಾಣುತ್ತಾರೆ.

---

## ಅಧ್ಯಾಯ ೧೯—ಜೀವನ-ಸಂಧ್ಯಾ.

ಗೋವಿಂದಸಿಂಹನು ಬಹುಕಾಲದ ತರುವಾಯ ತನ್ನ ರಾಜಧಾನಿಯಾದ ಮುಖವಾಲಕ್ಕೆ ಮರಳಿಬಂದನು. ಈ ಸಮಯದಲ್ಲಿ ಔರಂಗಜೇಬನು ದಕ್ಷಿಣ ಹಿಂದುಸ್ಥಾನದಲ್ಲಿದ್ದನು. ಗೋವಿಂದಸಿಂಹನು ಪ್ರಯತ್ನ ಮಾಡಿದ್ದರೆ, ತನ್ನ ಮನೋವಾಂಛಿತವನ್ನು ಸುಲಭವಾಗಿ ನೆರವೇರಿಸಿಕೊಳ್ಳಬಹುದಿತ್ತು. ಪಂಜಾಬವು ಸ್ವತಂತ್ರರಾಜ್ಯವಾಗಿ ಮೊಗಲರ ದಾಸತ್ವದ ಶೃಂಖಲೆಗಳನ್ನು ಹರಿದೊಗೆಯಬಹುದಿತ್ತು. ಆದರೆ ಗೋವಿಂದಸಿಂಹನು ಮೊದಲಿನಂತೆ ಪ್ರಯತ್ನಿಸಲಿಲ್ಲ. ಇದಕ್ಕೆ ಮುಖ್ಯಕಾರಣವೆಂದರೆ, ಅವನಿಗುಂಟಾಗಿದ್ದ ಅವಸಾದವು. ಆ ಮುನ್ನಿನ ಹುರುಪು, ಆ ಮೊದಲಿನ ಸಾಹಸ, ಆ ಪೂರ್ವದ ತೇಜ, ಆ ಪ್ರಾಚೀನ ಶೂರತ್ವ ಗೋವಿಂದಸಿಂಹನಲ್ಲಿ ಉಳಿದಿರಲಿಲ್ಲ. ಗೋವಿಂದಸಿಂಹನು ಎಷ್ಟೆ ವೀರನಾಗಿರಲಿ, ಎಷ್ಟೆ

ದೇವತ್ವಸಂಪನ್ನನಿರಲಿ, ಅವನು ಈ ಭೂಮಿಯಲ್ಲಿ ಹುಟ್ಟಿಬಂದ ಮನುಷ್ಯನು. ಅಂದಬಳಿಕ ಮನುಷ್ಯಸಹಜವಾದ ಅವಸನ್ನತೆಯಿಂದಲೂ ಕ್ಲೇಶದಿಂದಲೂ ಹೇಗೆ ಮುಕ್ತನಾಗಬೇಕು? ಇಂದು ಅವನ ಮಕ್ಕಳು ಬದುಕಿದ್ದರೆ, ಅವನಿಗೆ ಎಷ್ಟು ಆನಂದವಾಗಬಹುದಿತ್ತು? ಅವನು ಆನಂದಪುರವನ್ನು ಎಷ್ಟು ವಿಜೃಂಭಣೆಯಿಂದ ಪ್ರವೇಶಿಸಬಹುದಿತ್ತು? ಆದರೆ ದೈವೀಯ ಸಂಕೇತದಿಂದ ಗೋವಿಂದಸಿಂಹನಿಗೆ ಹಾಗೆ ಮಾಡಲಿಕ್ಕೆ ಆಸ್ಪದವಿದ್ದಿಲ್ಲ. ಗೋವಿಂದಸಿಂಹನು ಮರ್ಮಾಹತನಾಗಿ ಹೋಗಿದ್ದನು. ಅವನಿಗೆ ಆನಂದಪುರವು ನಿರಾನಂದಮಯವಾಗಿ ತೋರಿತು. ಮಕ್ಕಳು ಮಡಿದ ಮನದಳವನ್ನೂ ಮನೆಯ ಶೂನ್ಯತೆಯನ್ನೂ ನೆನೆಸಿನೆನೆಸಿ ಯಾವನ ಹೃದಯವು ಇಬ್ಭಾಗವಾಗದು? ಮನುಷ್ಯನಾದವನು ಈ ಶೋಕವನ್ನು ಹೊಂದಿದರೆ ಕೊರಗಲೇ ಬೇಕು! ಅವಸನ್ನನಾಗಲೇಬೇಕು! ಮಹಾರಾಣಾಪ್ರತಾಪಸಿಂಹನು ಬಾಲಿಕೆಯಾದ ಮಗಳು ತಿನ್ನುತ್ತಿರುವ ರೊಟ್ಟಿಯನ್ನು ಬೆಕ್ಕು ಒಯ್ದುದನ್ನೂ, ಇದಕ್ಕಾಗಿ ಆ ಬಾಲೆಯು ಕಾತರಿಸಿದುದನ್ನೂ ನೋಡಿ, ಅತ್ಯಂತ ವ್ಯಥಿತನಾದನು; ಈ ವೇದನೆಯನ್ನು ಸಹಿಸದವನಾಗಿ, ತನ್ನ ಚಿರಕಾಲಿಕ ವ್ರತಕ್ಕೆ ಜಲಾಂಜಲಿಯಿತ್ತು, ಮೊಗಲರ ಅಧೀನತೆಯನ್ನೊಪ್ಪಿಕೊಳ್ಳಲು ಸಿದ್ಧನಾಗಿದ್ದನು. ಆದರೆ ಪ್ರತಾಪಸಿಂಹನ ಆ ವ್ಯಥೆಗಿಂತಲೂ ಗೋವಿಂದಸಿಂಹನ ಈ ವೇದನೆಯು ಹೆಚ್ಚಿನದು. ಗೋವಿಂದಸಿಂಹನ ಇಬ್ಬರು ಮಕ್ಕಳು ವೀರಸ್ವರ್ಗವನ್ನು ಹೊಂದಿದ್ದರು. ಇವರಿಗಾಗಿ ಗೋವಿಂದಸಿಂಹನು ಹೆಚ್ಚು ಶೋಕಿಸಿದವನಲ್ಲ. ಆದರೆ ಇಬ್ಬರು ಚಿಕ್ಕಮಕ್ಕಳು ತಂದೆಯ ಅಪರೋಕ್ಷದಲ್ಲಿ ಅಸಹಾಯಸ್ಥಿತಿಯಲ್ಲಿ ಮೊಗಲರ ಬಲಾತ್ಕಾರಕ್ಕೆ ಬಲಿಯಾಗಿ, ಜೀವಂತ ಸಮಾಧಿಯನ್ನು ಹೊಂದಿದ್ದರು. ಗೋವಿಂದಸಿಂಹನು ಈ ವ್ಯಥೆಯನ್ನು ಮರೆಯದವನಾಗಿದ್ದನು. ಇಂದು ಅವನು ಯಾರನ್ನು ಮಕ್ಕಳೆಂದು ಕರೆಯಬೇಕು? ಯಾರ ಲೀಲೆಗಳಿಂದ ದೈಹಿಕಶ್ರಮವನ್ನು ಕಳೆದುಕೊಳ್ಳಬೇಕು? ಯಾರ ಮುದ್ದುಮಾತುಗಳಿಂದ

ಮನಸ್ಸನ್ನು ಸಮಾಧಾನಪಡಿಸಿಕೊಳ್ಳಬೇಕು? ಇಂತಹ ಮುದ್ದು ಮಕ್ಕಳು ಅಕಾಲದಲ್ಲಿ ಶೋಚನೀಯ ಮರಣವನ್ನು ಹೊಂದಿದಾಗ ಯಾವ ತಂದೆಯು ಸುಮ್ಮನಿದ್ದಾನು? ಅಂತೆಯೇ ಗೋವಿಂದಸಿಂಹನು ಕಾತರತೆಯಿಂದ ಮುಚ್ಚಿಹೋಗಿದ್ದನು. ಆದರೆ ಅವನು ಈ ಕಾತರತೆಯನ್ನು ಕೆಲವು ದಿವಸಗಳ ಮಟ್ಟಿಗೆ ಮುಚ್ಚಿಟ್ಟುಕೊಂಡಿದ್ದನು. ಇಂತಹ ಮರ್ಮಯಾತನೆಯ ಪ್ರಸಂಗದಲ್ಲಿ ಅವನು ಅತ್ಯಂತ ಕಷ್ಟವನ್ನು ಸಹಿಸಲು ಸಿದ್ಧನಾಗಿ ದೇಶ ದೇಶ ಅಲೆದನು; ನಾನಾತರದ ಅಪಮಾನವನ್ನು ಸಹಿಸಿದನು; ಕಷ್ಟಬಟ್ಟು ಸೈನ್ಯವನ್ನು ಸಂಗ್ರಹಿಸಿದನು. ಮುಕ್ತಸರದ ಯುದ್ಧದಲ್ಲಿ ಆ ಶ್ರಮದ ಸಾರ್ಥಕತೆಯನ್ನು ಮಾಡಿಕೊಂಡನು. ಬಳಿಕ ಅಡಗಿದ್ದ ಆ ಕಾತರತೆಯು ತಲೆಯೆತ್ತಿತು. ಗೋವಿಂದಸಿಂಹನ ಹುರುಪನ್ನೂ ತೇಜವನ್ನೂ ನಾಶ ಮಾಡಿಬಿಟ್ಟಿತು. ಗೋವಿಂದಸಿಂಹನು ನಿರ್ವೀರ್ಯನಾಗಿ ಪ್ರಯತ್ನವಿಲ್ಲದೆ ಕುಳಿತುಬಿಟ್ಟನು.

ಗೋವಿಂದಸಿಂಹನಿಗೆ ವಿಶ್ರಾಂತಿಯು ಬೇಕಿತ್ತು. ಅವನಿಗೆ ಧಾರ್ಮಿಕ ಕ್ರಿಯೆಗಳನ್ನಾಗಲಿ, ರಾಜಕೀಯ ಕಾರ್ಯಗಳನ್ನಾಗಲಿ ಮಾಡುವುದು ಬೇಕಿದ್ದಿಲ್ಲ. ಅವನು ಏಕಾಂತವಾಸಿಯಾಗಿ, ಶಾಂತತೆಯಲ್ಲಿ ಕಾಲಕಳೆಯುವ ಮನಸ್ಸು ಮಾಡಿದ್ದನು. ಆದರೆ ಅವನ ಭಾರವನ್ನು ತನ್ನ ಮೇಲೆ ಹೊತ್ತುಕೊಂಡು, ಗೋವಿಂದಸಿಂಹನನ್ನು ಗುರುಭಾರದಿಂದ ಮುಕ್ತನನ್ನಾಗಿ ಮಾಡುವ ತೇಜಸ್ವಿಯಾದ ಶಿಷ್ಯನೊಬ್ಬನೂ ಇರಲಿಲ್ಲ. ಇಂತಹ ಶಿಷ್ಯನು ದೊರೆತಿದ್ದರೆ ಗೋವಿಂದಸಿಂಹನು ಅವನ ಮೇಲೆ ಎಲ್ಲ ಕಾರ್ಯಗಳ ಹೊರೆಯನ್ನು ಹೊರಿಸಿ, ತಾನು ನಿಶ್ಚಿಂತನಾಗುತ್ತಿದ್ದನು. ಆದರೆ ಅವನು ಇಂತಹ ಶಿಷ್ಯನ ಅಭಾವದ ಮೂಲಕ ಅನಿಚ್ಛೆಯಿಂದ ಗುರುಗಿರಿಯನ್ನು ನಡಿಸಬೇಕಾಯಿತು. ರಾಜಕಾರಣವನ್ನು ಸಾಗಿಸಬೇಕಾಯ್ತು.

ಈ ಸಮಯದಲ್ಲಿ ದಕ್ಷಿಣಹಿಂದುಸ್ಥಾನದಲ್ಲಿದ್ದ ಔರಂಗಜೇಬನು ಗೋವಿಂದಸಿಂಹನ ಸಂಗಡ ಸಂಧಿಯ ಮಾಡಿಕೊಳ್ಳಬಯಸಿ, ಒಂದು

ಪತ್ರವನ್ನು ಬರೆದನು. ಬಾದಶಹನು ಈ ಪತ್ರದಲ್ಲಿ ಗೋವಿಂದಸಿಂಹನಿಗೆ ತನ್ನೆಡೆಗೆ ಬರಬೇಕೆಂದು ಸ್ನೇಹದಿಂದ ಹೇಳಿಕೊಂಡಿದ್ದನು. ಔರಂಗಜೇಬನು ಮುಕ್ತಸರದಲ್ಲಾದ ಮೊಗಲರ ಪರಾಭವದ ಸುದ್ದಿಯನ್ನು ಕೇಳಿ, ವಿಶೇಷ ಚಿಂತಿತನಾಗಿದ್ದನು. ಮೊಗಲ ಸಾಮ್ರಾಜ್ಯದ ಆಧಾರಸ್ತಂಭ ಸ್ವರೂಪರಾಗಿದ್ದ ವೀರರೆಲ್ಲರು ದಕ್ಷಿಣದ ಯುದ್ಧದಲ್ಲಿ ತೊಡಗಿದ್ದರು. ಇಂತಹ ಸ್ಥಿತಿಯಲ್ಲಿ ಗೋವಿಂದಸಿಂಹನು ಇಡೀ ಪಂಜಾಬವನ್ನು ಸಹಜವಾಗಿ ಗೆದ್ದುಕೊಳ್ಳಬಹುದೆಂಬ ಭಯವು ಬಾದಶಹನಿಗೆ ಉಂಟಾಗಿತ್ತು. ಅಂತೆಯೇ ಆ ಕಪಟಿಯು ಸವಿ ಮಾತುಗಳಿಂದಲೂ, ತೋರಿಕೆಯ ಶಿಷ್ಟವ್ಯವಹಾರದಿಂದಲೂ ಗೋವಿಂದಸಿಂಹನನ್ನು ಕೈವಶ ಮಾಡಿಕೊಳ್ಳುವ ಮನಸ್ಸುಮಾಡಿದ್ದನು. ಆದರೆ ಗೋವಿಂದಸಿಂಹನು ಬಾದಶಹನ ನಿಮಂತ್ರಣವನ್ನು ಸ್ವೀಕರಿಸಲಿಲ್ಲ. ಇವನು ಬಾದಶಹನ ಪತ್ರದ ಉತ್ತರಸ್ವರೂಪವಾಗಿ ಹದಿನಾಲ್ಕುನೂರು ಶ್ಲೋಕಗಳುಳ್ಳ ಪತ್ರವನ್ನು ಬರೆದು, ಅದನ್ನು ತನ್ನ ಐಯ್ವರು ಶಿಷ್ಯರ ಕೈಯಲ್ಲಿ ಕೊಟ್ಟು, ಅವರನ್ನು ಬಾದಶಹನ ಕಡೆಗೆ ಕಳುಹಿದನು. ಈ ಪತ್ರವು 'ಹಿಕಾಯತ್ ಜಾಫರನಾಮಾ' ಎಂಬ ಹೆಸರನ್ನು ಹೊಂದಿ, 'ದಶರಾ ಪಾತಶಾಹಕಾ ಗ್ರಂಥ'ದಲ್ಲಿ ಅಡಕವಾಗಿದೆ. ಈ ಪತ್ರದ ಕಡೆಯಲ್ಲಿ ಗೋವಿಂದಸಿಂಹನು ಬರೆದಿರುವುದೇನಂದರೆ: "ಬಾದಶಹನ ವಿಷಯದಲ್ಲಿ ನನಗೆ ವಿಶ್ವಾಸವಿಲ್ಲ. ಖಾಲಸಾವು ಇನ್ನೂ ಮೊಗಲರ ಸೇಡು ತೀರಿಸಿಕೊಳ್ಳುವ ಪ್ರಯತ್ನದಲ್ಲಿದೆ." ತನ್ನ ಮಕ್ಕಳಿಲ್ಲದಿರುವಿಕೆಯು ಉಲ್ಲೇಖಮಾಡಿ ಸೂಚಿಸುವುದೇನಂದರೆ: "ಇನ್ನು ನನಗೆ ಸಾಂಸಾರಿಕ ಯಾವ ಬಂಧನವೂ ಇಲ್ಲ. ಈಗ ನಾನು ಮರಣದ ಮಾರ್ಗವನ್ನು ನಿರೀಕ್ಷಿಸುತ್ತಿದ್ದೇನೆ. ರಾಜ ರಾಜನಾದ ಆ ಏಕಮಾತ್ರ ಈಶ್ವರನ ಹೊರತು ನನಗೀಗ ಬೇರೆ ಯಾವನ ಭಯವೂ ಇಲ್ಲ."

ಔರಂಗಜೇಬನು ಗೋವಿಂದಸಿಂಹನ ಪತ್ರವನ್ನು ಓದಿಕೊಂಡು, ಕೋಪಗೊಂಡನು. ಆದರೆ ಬಾಹ್ಯತಃ ಕೋಪವನ್ನು ತೋರಲಿಲ್ಲ.

ಪತ್ರವನ್ನು ಒಯ್ದಿದ್ದ ಶೀಖರ ಸಂಗಡ ಶಿಷ್ಟರೀತಿಯಿಂದ ವ್ಯವಹರಿಸಿದನು. ಹಾಗು ಮತ್ತೆ ನಿಮಂತ್ರಣ ಪತ್ರಿಕೆಯನ್ನು ಬರಿಸಿ, ಆ ಶೀಖರ ಕೈಯಲ್ಲಿ ಕೊಟ್ಟು, ಅವರನ್ನು ಗೋವಿಂದಸಿಂಹನ ಬಳಿಗೆ ಕಳುಹಿಕೊಟ್ಟನು. ಗೋವಿಂದಸಿಂಹನು ಈ ಸಾರೆಯೂ ಬಾದಶಹನ ಕರೆಯುವಿಕೆಯನ್ನು ಅಲ್ಲಗಳೆದನು. ಇದರಿಂದ ಬಾದಶಹನ ಕೋಪವು ಮತ್ತಷ್ಟು ಹೆಚ್ಚಿದ್ದು ಸೋಜಿಗವಲ್ಲ, ಆದರೆ ಅವನು ಗೋವಿಂದಸಿಂಹನ ಈ ಉದ್ಧಟತನದ ಪ್ರತೀಕಾರ ಮಾಡಬೇಕೆಂದಿರುವಷ್ಟರಲ್ಲಿಯೆ, ಅಹಮ್ಮದನಗರದಲ್ಲಿ ದೇಹಾವಸಾನ ಹೊಂದಿದನು (೧೭೦೭).

ಔರಂಗಜೇಬನ ಮರಣದ ತರುವಾಯ ರಾಜ್ಯದಲ್ಲಿ ಅರಾಜಕತೆಯುಂಟಾಯಿತು. ಬಾದಶಹನ ಸತ್ಪುತ್ರರು ಸಿಂಹಾಸನದ ಲೋಭದಿಂದ ಆತ್ಮಕಲಹಕ್ಕೊಳಗಾದರು. ಅಣ್ಣತಮ್ಮಂದಿರು ಒಬ್ಬನೊಬ್ಬನ ಕುತ್ತಿಗೆಯ ಹಿಚುಕಲಿಕ್ಕೆ ಸಿದ್ಧರಾದರು. ಈ ಸ್ಥಿತಿಯಲ್ಲಿ ಮುಅಜಿಮನು ಎಲ್ಲ ವಿಘ್ನಗಳನ್ನು ದಾಟಿ, ಸಹೋದರರ ರಕ್ತದಿಂದ ಖಡ್ಗವನ್ನು ಕಲಂಕಿತ ಮಾಡಿ, ಬಹದ್ದೂರಶಹನೆಂಬ ಹೆಸರಿಟ್ಟುಕೊಂಡು, ದಿಲ್ಲಿಯ ಸಿಂಹಾಸನವೇರಿದನು. ಈ ಹೊಸ ಬಾದಶಹನು ಸಿಂಹಾಸನವೇರಿದಾಗ ಅರವತ್ತೇಳು ವರ್ಷದವನಾಗಿದ್ದನು.

ದಿಲ್ಲಿಯ ಸಿಂಹಾಸನದ ಸಲುವಾಗಿ ನಡೆದ ಗೃಹಕಲಹದಲ್ಲಿ ಗೋವಿಂದಸಿಂಹನು ಮೌನವನ್ನವಲಂಬಿಸಿರಲಿಲ್ಲ. ಇವನು ಬಹದ್ದೂರಶಹನ ಪಕ್ಷಪಾತಿಯಾಗಿ, ಅವನಿಗೆ ಸಹಾಯ ಮಾಡಿದನು; ಹಾಗು ಅವನ ಅಧೀನತೆಯನ್ನು ಒಪ್ಪಿಕೊಂಡನು. ಇದಕ್ಕೆ ಕಾರಣವೇನಿರಬಹುದೆಂಬದನ್ನು ಹೇಳಲಿಕ್ಕೆ ಬರುವಂತಿಲ್ಲ.

ಗೋವಿಂದಸಿಂಹನ ಈ ಸಹಾಯದಿಂದಲೂ, ಅಧೀನತೆಯಿಂದಲೂ ಬಾದಶಹನಿಗೂ, ಗೋವಿಂದಸಿಂಹನಿಗೂ ಸ್ನೇಹದ ಒಪ್ಪಂದವಾಯಿತು. ಸಾಮ್ರಾಟನು ಗೋವಿಂದಸಿಂಹನನ್ನು ಐದುಸಾವಿರ ಸೈನಿಕರ ಮೇಲಾಧಿ

ಕಾರಿಯನ್ನಾಗಿ ಮಾಡಿ, ದಕ್ಷಿಣಕ್ಕೆ ಕಳುಹಿಕೊಡುವ ಮನಸ್ಸು ಮಾಡಿದನು. ಗೋವಿಂದಸಿಂಹನು ಬಾದಶಹನ ಈ ಇಷ್ಟಿಯನ್ನು ಅಲ್ಲಗಳೆಯಲಿಲ್ಲ.

ಗೋವಿಂದಸಿಂಹನು ಸ್ವದೇಶವನ್ನು ಬಿಟ್ಟು ಹೊರಡುವ ಮೊದಲು ಪಂಜಾಬಸಂಸ್ಥಾನಿಕರೊಡನೆ ಮತ್ತೊಮ್ಮೆ ಯುದ್ಧಹೂಡಬೇಕಾಯಿತು. ಈ ಯುದ್ಧದಲ್ಲಿ ಸಂಸ್ಥಾನಿಕರು ಸಂಪೂರ್ಣ ಪರಾಜಯವನ್ನು ಹೊಂದಿ, ಬಹಳ ಹಾನಿಯನ್ನು ಹೊಂದಬೇಕಾಯಿತು. ಯುದ್ಧದ ತರುವಾಯ ಗೋವಿಂದಸಿಂಹನು ಶೀಖಸಮಾಜದ ವ್ಯವಸ್ಥೆಯನ್ನು ಸರಿಪಡಿಸಿ, ದಕ್ಷಿಣದ ಕಡೆಗೆ ಹೊರಟನು. ಈ ಸಮಯದಲ್ಲಿ ಅವನು ತನ್ನ ಇಬ್ಬರು ಹೆಂಡಿರನ್ನು ದಿಲ್ಲಿಯಲ್ಲಿ ಇರಿಸುವ ಮನಸ್ಸು ಮಾಡಿದನು. ಆದರೆ ಒಬ್ಬ ಹೆಂಡತಿಯು ಇದಕ್ಕೆ ಒಪ್ಪಲಿಲ್ಲ. ಕಾರಣ ಗೋವಿಂದಸಿಂಹನು ಒಬ್ಬಳನ್ನು ದಿಲ್ಲಿಗೆ ಕಳುಹಿದನು. ಬೇರೊಬ್ಬಳನ್ನು ಸಂಗಡ ಕರಕೊಂಡು ಹೊರಟನು. ಆದರೆ ಅವನು ತುಸುದಿವಸಗಳಲ್ಲಿ ಇವಳನ್ನೂ ದಿಲ್ಲಿಗೆ ಕಳುಹಿಕೊಟ್ಟನು. ಗೋವಿಂದಸಿಂಹನ ಈ ಇಬ್ಬರು ಹೆಂಡಂದಿರು ದಿಲ್ಲಿಯಲ್ಲಿಯು ಶೀಖಭಕ್ತರಿಂದ ಮನ್ನಣೆಯನ್ನು ಹೊಂದಿ, ಪತಿಯ ಕ್ಷೇಮಚಿಂತನೆಯಲ್ಲಿ ಕಾಲಕಳೆಯಹತ್ತಿದರು.

ಗೋವಿಂದಸಿಂಹನು ತನ್ನ ಆಯುಷ್ಯದ ಅಂತಿಮಕಾಲದಲ್ಲಿ ಸ್ವದೇಶವಾದ ಪಂಜಾಬವನ್ನು ಏಕೆ ಬಿಟ್ಟು ಹೊರಟನು? ಎಂಬದು, ಅವನು ಮೊಗಲರ ಅಧೀನತೆಯನ್ನೇಕೆ ಒಪ್ಪಿಕೊಂಡನು? ಎಂಬದರಂತೆಯೆ ಗೂಢ ಸಂಗತಿಯಾಗಿದೆ. ಗೋವಿಂದಸಿಂಹನು ದಕ್ಷಿಣಕ್ಕೆ ಏಕೆ ಹೋದನು? ಯಾರೊಡನೆ ಹುದ್ಧಮಾಡುವುದಕ್ಕೆ ಹೋದನು? ಎಂಬದರ ಉತ್ತರವು ಇತಿಹಾಸದಲ್ಲಿ ದೊರೆಯುವಂತಿಲ್ಲ. ಒಂದುವೇಳೆ ಗೋವಿಂದಸಿಂಹನು ಮರಾಟಿಗರೊಡನೆ ಯುದ್ಧಕ್ಕೆ ಹೊರಟಿದ್ದನೆಂದು ತರ್ಕಿಸಿದರೆ, ಬಾದಶಹನ ಕೌಶಲ್ಯವನ್ನು ಕೊಂಡಾಡಬೇಕಾಗುವುದು. ಬಾದಶಹನು ದುರ್ಧರ್ಷವೈರಿಗಳಾಗಿದ್ದ ಮರಾಟಿಗರನ್ನು ಸೋಲಿಸುವುದಕ್ಕೆ ಗೋವಿಂದಸಿಂಹನನ್ನು

ಹುರಿಗೊಳಿಸಿರಬಹುದು. ಯಾಕೆಂದರೆ, ಹೀಗೆ ಮಾಡುವುದರಿಂದ ಮೊಗಲರು ತೊಗರಿಯ ಕಟ್ಟಿಗೆಯಿಂದ ತೊಗರಿಯನ್ನು ಜಾಡಿಸಿದಂತಾಗುತಿತ್ತು; ಸ್ವಂತದ ಹಾನಿಯಿಲ್ಲದೆ ವೈರಿಗಳನ್ನು ಹಣ್ಣಿಗೆ ತಂದಂತಾಗುತ್ತಿತ್ತು. ಆದರೆ ಗೋವಿಂದಸಿಂಹನು ಮೊಗಲರ ಈ ತರದ ಕುಯುಕ್ತಿಗೆ ಒಲಿಬೀಳತಕ್ಕವನಾಗಿರಲಿಲ್ಲ. ಧೂರ್ತರಗಳ ಮಾತು ಕೇಳಿ, ಸ್ವದೇಶಬಾಂಧವರ ಮೇಲೆ ಕಾರಣವಿಲ್ಲದೆ ಶಸ್ತ್ರವೆತ್ತಿ, ದೇಶದ್ರೋಹಿಯೆನಿಸಿಕೊಳ್ಳುವಷ್ಟು ಹೀನವಿಚಾರವು ಅವನನ್ನು ಅರೆಕ್ಷಣವಾದರೂ ಸೋಂಕುವ ಸಂಭವವಿರಲಿಲ್ಲ. ಈ ಮಾತಿಗೆ ಆಧಾರವಾಗಿ ಇತಿಹಾಸದಲ್ಲಿ ಗೋವಿಂದಸಿಂಹನು ಮರಾಟಿಗರೊಡನೆ ಯುದ್ಧಮಾಡಿದ ಸಂಗತಿಯು ಉಲ್ಲೇಖವಿಲ್ಲ. ಅಂದಬಳಿಕ ಗೋವಿಂದಸಿಂಹನ ಮೇಲೆ ಆ ತರದ ಆರೋಪ ಹೊರಿಸಬಯಿಸುವುದು ಎಷ್ಟುಮಾತ್ರಕ್ಕೂ ಸಮಂಜಸವೆನಿಸದು.

ಗೋವಿಂದಸಿಂಹನು ದಕ್ಷಿಣದಲ್ಲಿರುವಾಗ ಒಬ್ಬ ಸಂನ್ಯಾಸಿಯು ಗೋವಿಂದಸಿಂಹನ ದರ್ಶನ ತಕ್ಕೊಂಡನು. ಇವನು ಕೇವಲ ಧರ್ಮತತ್ವಗಳನ್ನಷ್ಟೆ ಅಭ್ಯಾಸಿಸಿದವನಲ್ಲ; ಯುದ್ಧವಿದ್ಯೆಯನ್ನೂ ಕಲಿತವನಾಗಿದ್ದನು. ಇವನು ಗೋವಿಂದಸಿಂಹನ ದರ್ಶನದಿಂದ ಸಂತೋಷಿತನಾದನು. ಆಲಾಪಪರಿಚಯಗಳಿಂದ ಭಕ್ತಿಯುತನಾದನು. ಕಡೆಯಲ್ಲಿ ಗೋವಿಂದಸಿಂಹನ ಶಿಷ್ಯನಾಗಿ 'ಬಾಂದಾ' ಅಂದರೆ ಗುರುವಿನ ದಾಸ ಎಂಬ ಹೆಸರನ್ನಿಟ್ಟುಕೊಂಡನು. ಶೀಖಸಮಾಜದ ಮುಂದಾಳುವಾಗಿ, ಶೀಖರ ಉನ್ನತಿಯನ್ನೆಸಗಲಿಕ್ಕೆ ಇವನೇ ಯೋಗ್ಯನೆಂದು ಭಾವಿಸಿ, ಗೋವಿಂದಸಿಂಹನು ಇವನನ್ನು ತನ್ನ ಹತ್ತಿರಿಟ್ಟುಕೊಂಡನು; ಇವನಿಗೆ ಉಪಯುಕ್ತವಾದ ವಿಷಯಗಳ ಉಪದೇಶಮಾಡಹತ್ತಿದನು. ಗೋವಿಂದಸಿಂಹನು ಶೀಖಧರ್ಮದ ಧಾರ್ಮಿಕ ವ್ಯವಸ್ಥೆಗಾಗಿ ಈ ಮೊದಲೆ ತಕ್ಕ ಏರ್ಪಾಟು ಮಾಡಿದ್ದನು; ಅಲ್ಲಲ್ಲಿ ಮಠಗಳನ್ನು ಸ್ಥಾಪಿಸಿದ್ದನು; ಧರ್ಮಗುರುಗಳನ್ನು ನಿಯಮಿಸಿದ್ದನು. ಈ ಧರ್ಮಗುರುಗಳು ಆಚರಿಸಬೇಕಿದ್ದ ನಿಯಮ

ಗಳನ್ನು ಗೊತ್ತುಮಾಡಿಕೊಟ್ಟಿದ್ದನು. ಇನ್ನು ರಾಜಕೀಯ ವ್ಯವಸ್ಥೆ ಮಾಡುವುದು ಉಳಿದಿತ್ತು. ಇದಕ್ಕೋಸುಗ ಬಾಂದಾನು ಯೋಗ್ಯ ಮನುಷ್ಯನೆಂದು ಗೋವಿಂದಸಿಂಹನು ಗೊತ್ತುಮಾಡಿಕೊಂಡನು. ಬಾಂದಾನ ಮುಖಾಂತರ ಪಂಚಾಬದಲ್ಲಿ ಶೀಖರ ಸ್ವತಂತ್ರರಾಜ್ಯದ ಪ್ರತಿಷ್ಠಾಪನೆಗೊಳಿಸಬೇಕೆಂಬುದು ಅವನ ಮಾನಸವಾಗಿತ್ತು. ಕಾರಣ ಅವನು ಬಾಂದಾನಮೇಲೆ ತನ್ನ ಸೈನಿಕರ ವ್ಯವಸ್ಥೆಯ ಕಾರ್ಯಭಾರವನ್ನು ಹೊರಿಸಿದನು. ತಕ್ಕ ಹಂಚಿಕೆಯನ್ನು ಹೇಳಿಕೊಟ್ಟನು. ಬಾಂದಾನು ಶೀಖರ ಧಾರ್ಮಿಕ ಬಾಬುಗಳಲ್ಲಿ ಕೈಹಾಕಕೂಡದೆಂದು ನಿರ್ಬಂಧಮಾಡಿದನು.

ಗೋವಿಂದಸಿಂಹನ ಅಂತಿಮ ಕಾಲವು ಸಮೀಪಿಸಿತು. ಕರ್ಮಯೋಗಿಯಾದ ಅವನು ತನ್ನ ಅಂತ್ಯಕಾಲದ ಆಭಾಸವನ್ನು ಮೊದಲೆ ತಿಳಿದವನಾದನು. ಕಾರಣ ಅವನು ಕೆಲವರು ಸಾಧುಗಳಿಂದಲೂ ಶಿಷ್ಯರಿಂದಲೂ ಪರಿವೇಷ್ಟಿತನಾಗಿ, ಅರಣ್ಯದಲ್ಲಿ ಪರ್ಣಕುಟೀರವನ್ನು ರಚಿಸಿಕೊಂಡು ಕಾಲ ಕಳೆಯಹತ್ತಿದನು. ಈ ಸಮಯದಲ್ಲಿ ದುಷ್ಟ ಪಠಾಣನೊಬ್ಬನು ಗುಪ್ತ ರೀತಿಯಿಂದ ಬಂದು, ಗೋವಿಂದಸಿಂಹನ ಹೊಟ್ಟೆಯಲ್ಲಿ ಚೂರಿಯನ್ನು ಚುಚ್ಚಿ ಹೋದನು. ಗೋವಿಂದಸಿಂಹನು ತನ್ನ ತಂದೆಯನ್ನು ಕೊಂದವನೆಂಬ ಭಾವನೆಯಿಂದ ಆ ಪಠಾಣನು ಸೇಡಿಗೆ ಪ್ರವೃತ್ತನಾಗಿ ಬಂದು ಈ ಕುಕಾರ್ಯವನ್ನು ಮಾಡಿದನೆಂದು ಕೆಲವರು ಹೇಳಿದ್ದಾರೆ. ಹೇಗೇ ಇರಲಿ, ಪಠಾಣನ ಈ ಕಾರ್ಯದಿಂದ ಗೋವಿಂದಸಿಂಹನ ದೇಹಾವಸಾನವಾಗಲಿಲ್ಲ. ಶಿಷ್ಯರ ಉಪಚಾರಗಳಿಂದ ಗೋವಿಂದಸಿಂಹನ ಪ್ರಕೃತಿಯು ಸುಧಾರಿಸುತ್ತ ನಡೆದಿತ್ತು. ಅವನ ದೇಹವು ಮೊದಲಿನಂತೆ ಸುಸ್ಥವಾಗುವುದರಲ್ಲಿತ್ತು. ಆದರೆ ದೈವೀಯ ಸಂಕೇತವು ಬೇರೆಯಾಗಿತ್ತು; ಗೋವಿಂದಸಿಂಹನ ಆಯುಷ್ಯದ ಮರ್ಯಾದೆಯು ಮುಗಿಯು ಬಂದಿತ್ತು. ಆದುದರಿಂದ ಅದು ಗೋವಿಂದಸಿಂಹನನ್ನು ಹೆಚ್ಚುಕಾಲ ಬದುಕಗೊಡಲಿಲ್ಲ. ಆ ಗಾಯವು ಇನ್ನೂ ಪೂರಾ ಮಾಯ್ದಿದ್ದಿಲ್ಲ. ಇಷ್ಟರಲ್ಲಿಯೆ

ಗೋವಿಂದಸಿಂಹನು ಒಂದು ದಿವಸ ಬಿಲ್ಲನ್ನು ತಕ್ಕೊಂಡು ಅದರಲ್ಲಿ ಬಾಣ ಹೂಡುವ ಪ್ರಯತ್ನ ಮಾಡಿದನು. ಇದರಿಂದ ಅವನ ಗಾಯವು ಪುನಃ ಬಿಚ್ಚಿತು. ವಿಪರೀತ ರಕ್ತಸ್ರಾವವಾಗಹತ್ತಿತು. ಶಿಷ್ಯರು ಮತ್ತೆ ಗಾಯವನ್ನು ಕಟ್ಟಿದರು. ಔಷಧೋಪಚಾರವನ್ನು ನಡಿಸಿದರು. ಆದರೆ ನೋವು ಕಡಿಮೆಯಾಗಲಿಲ್ಲ. ಗಾಯವು ಕ್ರಮಶಃ ಬೆಳೆಯುತ್ತ ನಡೆಯಿತು. ಗೋವಿಂದಸಿಂಹನು ಇನ್ನು ತಾನು ಬಹು ಕಾಲ ಬದುಕಲಾರೆನೆಂದೂ, ತನ್ನ ಮರಣವು ಸಮೀಪಿಸಿದೆಯೆಂದೂ ಶಿಷ್ಯರಿಗೆ ಹೇಳಿದನು; ಹಾಗು ಶಿಷ್ಯರ ಅನುಮೋದನೆಯಂತೆ ಪಲ್ಲಕ್ಕಿಯನ್ನೇರಿ ಗೋದಾವರಿಯ ದಂಡೆಯಲ್ಲಿರುವ ನದೇಡವೆಂಬ ಪಟ್ಟಣಕ್ಕೆ ಹೋದನು. ಈ ಸ್ಥಳದಲ್ಲಿ ಕೆಲವು ದಿನಗಳನ್ನು ಕಳೆದನು. ನೋವು ದಿನಾಲು ಹೆಚ್ಚುತ್ತ ನಡೆದಿತ್ತಲ್ಲದೆ, ಕಡಿಮೆಯಾಗಿರಲಿಲ್ಲ. ಗೋವಿಂದಸಿಂಹನು ಔಷಧಸೇವನೆಯನ್ನು ಬಿಟ್ಟುಕೊಟ್ಟನು. ಅವನ ಅಪ್ಪಣೆಯಂತೆ ಶಿಷ್ಯರು ಯಜ್ಞವನ್ನಾರಂಭಿಸಿದರು. ಈ ಯಜ್ಞದ ಮುಖಾಂತರ ಬ್ರಾಹ್ಮಣರಿಗೂ, ಸಾಧು-ಸತ್ಪುರುಷರಿಗೂ, ಫಕೀರರಿಗೂ ಅನ್ನ-ವಸ್ತ್ರಾದಿಗಳ ದಾನವು ನಡೆಯಿತು.

ಒಂದುದಿನ ಗೋವಿಂದಸಿಂಹನು ತನ್ನ ಶಿಷ್ಯರನ್ನು ಹತ್ತಿರ ಕರೆದು, ಇನ್ನು ತಾನು ಬೇಗ ದೇಹವಿಡುವೆನೆಂದೂ, ಉತ್ತರಕ್ರಿಯೆಯ ಸಾಮಾನುಗಳನ್ನು ಸಂಗ್ರಹಿಸಿ ತರಬೇಕೆಂದೂ ಹೇಳಿದನು; ಕೂಡಲೆ ಮೂರ್ಛಿತನಾಗಿ ಬಿದ್ದನು. ಶಿಷ್ಯರು ಗುರುವಿನ ದೇಹಾವಸಾನದ ವಿಷಯದಲ್ಲಿ ನಿಶ್ಶಂಕಿತರಾಗಿ, ಗುರುವಿನ ಅಪ್ಪಣೆಯಂತೆ ಸಾಮಾನುಗಳನ್ನು ಸಂಗ್ರಹಿಸಿದರು. ಚಂದನಕಟ್ಟಿಗೆಯ ಚಿತೆಯನ್ನು ರಚಿಸಿದರು. ಉಳಿದ ಉಪಕರಣಗಳನ್ನು ಕೂಡಹಾಕಿದರು.

ಮರಣವು ಇನ್ನೊಂದು ತಾಸಿನಮೇಲಿರುವಾಗ ಗೋವಿಂದಸಿಂಹನು ಪುನಃ ಎಚ್ಚತ್ತನು. ಅವನ ಅಪ್ಪಣೆಯಂತೆ ಶಿಷ್ಯರು ಸ್ನಾನ ಮಾಡಿಸಿದರು. ಹೊಸ ವಸ್ತ್ರಗಳನ್ನು ಹೊದಿಸಿದರು. ಅಸ್ತ್ರ ಶಸ್ತ್ರಾದಿಗಳಿಂದ ಗುರುವಿನ

ದೇಹವನ್ನಲಂಕರಿಸಿದರು. ಆಗ ಗೋವಿಂದಸಿಂಹನು ಹೇಳಿದ್ದೇನಂದರೆ: “ನನ್ನ ಮರಣದ ತರುವಾಯ ನೀವು ಈ ಅಸ್ತ್ರ ಶಸ್ತ್ರಾದಿಗಳನ್ನು ನನ್ನ ದೇಹದಿಂದ ಕಿತ್ತುಕೊಳ್ಳಬೇಡಿರಿ. ಇವೆಲ್ಲವುಗಳೊಡನೆ ನನ್ನ ದೇಹವನ್ನು ದಹನಮಾಡಿರಿ.” ಬಳಿಕ ಗೋವಿಂದಸಿಂಹನು ಎದ್ದು ಕುಳಿತು ದೇವರ ಪ್ರಾರ್ಥನೆಯನ್ನು ಮಾಡಹತ್ತಿದನು:—

“ಪರಮೇಶ! ಚರಾಚರ ವಸ್ತುಗಳಿಗಧೀಶನಾದ ಪರಮಾತ್ಮ! ನಿನಗಿಂತ ಶ್ರೇಷ್ಠವಾದ ವಸ್ತುವು ಬೇರೊಂದಿಲ್ಲ! ನೀನು ಅನಾದಿಯೂ, ಅನಂತನೂ, ಸರ್ವಶಕ್ತನೂ ಆಗಿರುವೆ. ಪುರಾಣ-ಕುರಾಣಗಳು ನಿನ್ನ ವಿಷಯವಾಗಿ ಬಹಳವಾಗಿ ಹೇಳುತ್ತಿವೆ! ಆದರೆ ಅವುಗಳಲ್ಲಿಯು ಯಾವ ಸಂಗತಿಯೂ ನನಗೆ ತೃಪ್ತಿಕರವೆನಿಸಲಿಲ್ಲ! ವೇದ ಶಾಸ್ತ್ರ ಶ್ರುತಿ ಸ್ಮೃತಿ ಮೊದಲಾದ ಉದ್ಗ್ರಂಥಗಳು ನಿನ್ನನ್ನು ಹೊಂದುವುದಕ್ಕಾಗಿ ಹಲವು ಬೇರೆ ಬೇರೆ ದಾರಿಗಳನ್ನು ತೋರಿಕೊಟ್ಟಿವೆ; ಆದರೆ ನಾನು ಆ ಭೇದವನ್ನು ತಿಳಿಯಲಾರದವನಾಗಿದ್ದೇನೆ! ದಯಾಸಾಗರನೆ, ನಾನು ಮಾಡಿದ್ದೆಲ್ಲವೂ ನಿನ್ನದು! ವಿಚಾರಿಸಿದ್ದೆಲ್ಲವೂ ನಿನ್ನ ವಿಷಯವಾಗಿ! ನಾನು ನನ್ನದೆಂದು ಭಾವಿಸಿ ಯಾವುದನ್ನೂ ಮಾಡಿದವನಲ್ಲ! ಎಲ್ಲವನ್ನೂ ನಿನಗೊಪ್ಪಿಸಿ, ನಿನ್ನದೆಂದೇ ಭಾವಿಸಿ ನಾನು ಆಚರಿಸಿದ್ದೇನೆ!!............”

ಈ ಮೇರೆಗೆ ಪ್ರಾರ್ಥನೆ ಮಾಡುತ್ತಿರುವಾಗಲೆ ಗೋವಿಂದಸಿಂಹನ ದೇಹಾವಸಾನವಾಯಿತು. ಪರಮ ಸಾಧುವೂ, ಶ್ರೇಷ್ಠ ಕರ್ಮವೀರನೂ ಆದ ಗೋವಿಂದಸಿಂಹನು ನರದೇಹವನ್ನು ಬಿಟ್ಟು ಅನಂತನಲ್ಲಿ ಐಕ್ಯನಾಗಿ ಹೋದನು. ಪರಮ ಸಾಹಸಿಯೂ, ಅತ್ಯಂತ ಶೂರನೂ ಆದ ಗೋವಿಂದಸಿಂಹನು ನಶ್ವರ ದೇಹವನ್ನು ತ್ಯಜಿಸಿ, ದಿವ್ಯದೇಹಧಾರಿಯಾದನು. ಧರ್ಮವೀರನೂ, ಯುದ್ಧವೀರನೂ ಆದ ಶೀಖ ಧರ್ಮದ ಹತ್ತನೆಯ ಗುರುವು ಸಾಯುಜ್ಯವನ್ನು ಪಡೆದನು.

ಶಿಷ್ಯ ಸಮೂಹವು ಗುರುವಿನ ವಿಯೋಗಕ್ಕಾಗಿ ಶೋಕಿಸಹತ್ತಿತು.

ಸಂನ್ಯಾಸಿಗಳು ಸಹ—ಕ್ಷಣಿಕವೇ ಏಕಾಗಲೊಲ್ಲದು—ಮೋಹಕ್ಕೊಳಗಾಗಿ ದುಃಖಿತರಾದರು. ಅವರ ಕಠೋರವಾದ ಆ ಸಂಯುಮವು ಅಳಿದು, ಕ್ಷಣಕಾಲ ಬಾಲಕರಂತೆ ರೋದಿಸಿದರು. ಬಳಿಕ ವಿವೇಕವನ್ನು ತಂದುಕೊಂಡು ಉತ್ತರಕ್ರಿಯೆಗೆ ತೊಡಗಿದರು.

ತನ್ನ ಹತ್ತನೆಯ ವರುಷದಿಂದ ಮೂವತ್ತುಮೂರು ವರುಷ ಶೀಖಸಮಾಜದ ಸೇವೆಯನ್ನುಮಾಡಿ, ಶ್ರೀ ಗುರುಗೋವಿಂದಸಿಂಹನು ವಿಕ್ರಮಸಂವತ ೧೭೬೫ (ಕ್ರಿ. ಶ. ೧೭೦೮) ಕಾರ್ತಿಕ ಶುದ್ಧ ಪಂಚಮಿಯ ದಿವಸ ತನ್ನ ಆಯುಷ್ಯದ ನಾಲ್ವತ್ತುಮೂರನೆಯ ವರುಷ ದೇಹವಿಸರ್ಜನ ಮಾಡಿದನು. ಶೀಖರು ಈ ಮಹಾಪುರುಷನು ತೋರಿದ ದಾರಿಯನ್ನೇ ಅನುಸರಿಸಿ, ಮುಂದಿನ ಕಾಲದಲ್ಲಿ ಪಂಜಾಬದಲ್ಲಿ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಲಿಕ್ಕೆ ಸಮರ್ಥರಾದರು.

---

# ಅಧ್ಯಾಯ ೨೦-ಉಪಸಂಹಾರ.

ಕರ್ಮವೀರನಾದ ಗೋವಿಂದಸಿಂಹನ ಚರಿತ್ರೆಯು ಸಮಾಪ್ತವಾಯಿತು. ಆದರೂ ನಾವು ಈ ಮಹಾತ್ಮನ ಚರಿತ್ರದ ಸಂಬಂಧದ ಒಂದೆರಡು ಮಾತುಗಳನ್ನು ಈ ಅಧ್ಯಾಯದಲ್ಲಿ ಹೇಳಬಯಿಸಿದ್ದೇವೆ.

ಧರ್ಮಕ್ಕೂ ರಾಜಕಾರಣಕ್ಕೂ ಸಂಬಂಧವಿಲ್ಲೆಂದೂ, ಧಾರ್ಮಿಕ ಮನುಷ್ಯನು ರಾಜಕಾರಣದಲ್ಲಿ ಕೈಹಾಕಕೂಡದೆಂದೂ ಕೆಲವರು ಅನ್ನುತ್ತಾರೆ. ಆದರೆ ಇವರ ಈ ಮತವು ಸಮಂಜಸವಲ್ಲ. ಧರ್ಮಕ್ಕೂ, ರಾಜಕರಣಕ್ಕೂ ನಿಕಟ ಸಂಬಂಧವಿದೆ. ಧರ್ಮವನ್ನು ಬಿಟ್ಟು ರಾಜಕರಣವಿಲ್ಲ. ರಾಜಕಾರಣವನ್ನು ಬಿಟ್ಟು ಧರ್ಮವಿಲ್ಲ. ಒಂದು ದೇಶದೊಳಗಿನ ಜನರೆಲ್ಲ ನಾವು ಧಾರ್ಮಿಕರಾಗಿದ್ದು, ರಾಜಕಾರಣದ ಕಡೆಗೆ ಕಣ್ಣೆತ್ತಿ

ನೋಡಲಾರೆವೆಂದು ಹೇಳಿದರೆ ನಡೆಯದು. ಇದೇ ಮೇರೆಗೆ ಧರ್ಮದ ಕಡೆಗೆ ದುರ್ಲಕ್ಷ್ಯಮಾಡಿ, ರಾಜಕಾರಣವನ್ನು ಸಾಗಿಸುವೆವೆಂದರೂ ಅದೂ ಸರಿಯಾಗಿ ಸಾಗದು. ಇದಕ್ಕೆ ಉದಾಹರಣವಾಗಿ ಪುರಾಣದ ಒಂದು ಸಂಗತಿಯನ್ನು ಉದ್ಧರಿಸಬಹುದು: ಒಂದು ಕಾಲದಲ್ಲಿ ರಾಕ್ಷಸರ ಉಪದ್ರವವು ಹೆಚ್ಚಿದಾಗ ಋಷಿಗಳ ಧಾರ್ಮಿಕ ಕ್ರಿಯೆಗಳು ಸಾಂಗವಾಗಿ ಸಾಗದಾದವು. ಋಷಿಗಳು ತಮ್ಮ ಕ್ರಿಯಾಕರ್ಮಗಳನ್ನು ನಿರ್ಭಯದಿಂದ ನಡಿಸಲಸಮರ್ಥರಾದರು. ರಾಕ್ಷಸರು ಋಷಿಗಳ ಕರ್ತವ್ಯಗಳಿಗೆ ವಿಘ್ನರಾಗಿ ನಾನಾ ರೀತಿಯಿಂದ ಪೀಡೆಯನ್ನುಂಟುಮಾಡಹತ್ತಿದರು. ಆಗ ವಿಶ್ವಾಮಿತ್ರನು ಅಯೋಧ್ಯೆಗೆ ಬಂದು, ದಶರಥನ ಬಳಿಯಲ್ಲಿ ರಾಮಲಕ್ಷ್ಮಣರನ್ನು ಯಾಚಿಸಿ, ಅವರನ್ನು ಕರೆದೊಯ್ದು, ಅವರ ಕೈಯಿಂದ ರಾಕ್ಷಸರ ಸಂಹಾರ ಮಾಡಿಸಿ, ಆಶ್ರಮವನ್ನು ನಿಷ್ಕಂಟಕ ಮಾಡಿಕೊಂಡನು. ವಿಶ್ವಾಮಿತ್ರನು ಅಯೋಧ್ಯೆಗೆ ಏಕೆ ಬರಬೇಕಿತ್ತು? ರಾಮಲಕ್ಷ್ಮಣರನ್ನು ಏಕೆ ಕರೆದೊಯ್ಯಬೇಕಿತ್ತು? ರಾಕ್ಷಸರನ್ನು ಏಕೆ ಸಂಹರಿಸಬೇಕಿತ್ತು? ಅದೇನೋ ರಾಜಕಾರಣದ ಮಾತು. ರಾಕ್ಷಸರು ರಾಜಕೀಯ ಉದ್ದೇಶದಿಂದ ಬರುವರು. ತಮ್ಮ ಇಷ್ಟದಂತೆ ವರ್ತಿಸುವರು. ಈ ಪ್ರಸಂಗದಲ್ಲಿ ಕೆಲವರು ಋಷಿಗಳಿಗೆ ತೊಂದರೆಯಾದರೂ ಆಗಬಹುದು. ಧಾರ್ಮಿಕರಾದ ನಾವು ಹೆರವರ ಪೀಡೆಯನ್ನು ಶಾಂತತೆಯಿಂದ ತಾಳಿಕೊಳ್ಳಬೇಕಲ್ಲದೆ, ಪ್ರತಿಹಿಂಸೆಗೆ ಪ್ರವರ್ತಿಸಬಾರದೆಂದು ಭಾವಿಸಿ, ವಿಶ್ವಾಮಿತ್ರನು ಸುಮ್ಮನಿದ್ದರೆ ಒಳಿತಾಗುತ್ತಿತ್ತೆ? ರಾಕ್ಷಸರ ಉಪಟಳವು ಕ್ರಮಶಃ ಹೆಚ್ಚಿ, ಅವರು ದೇಶದಲ್ಲಿ ಅನರ್ಥಪರಂಪರೆಯನ್ನುಂಟು ಮಾಡುತ್ತಿದ್ದಿಲ್ಲವೆ? ಧರ್ಮದೊಡನೆ ಜನರ ಸ್ವಾತಂತ್ರ್ಯವನ್ನೂ ಹರಣಮಾಡಿ, ಭಾರತೀಯರನ್ನು ಪರತಂತ್ರರನ್ನಾಗಿ ಮಾಡಬಯಸುತ್ತಿದ್ದಿಲ್ಲವೆ? ಅಂತೆಯೆ ವಿಶ್ವಾಮಿತ್ರನು ಕೆಲವು ದಿವಸ ತನ್ನ ಜಪತಪಾದಿ ಕಾರ್ಯಗಳನ್ನುಳಿದು, ರಾಕ್ಷಸ ಸಂಹಾರ ಕಾರ್ಯಕ್ಕೆ ಪ್ರವರ್ತಿಸಿದನು. ಇನ್ನು ವಿಶ್ವಾಮಿತ್ರನು ಸ್ವತಃ ರಾಕ್ಷಸ

ರನ್ನು ಸಂಹರಿಸಲಿಲ್ಲವೇಕೆ? ಎಂಬ ಪ್ರಶ್ನೆಯುಂಟಾಗಬಹುದು. ಆ ಕಾಲ ದಲ್ಲಿ ಗುಣಕರ್ಮಗಳ ವಿಭಾಗಣೆಯಿತ್ತು. ಚಾತುರ್ವರ್ಣ್ಯಗಳಲ್ಲಿ ಇಂತಹ ವರ್ಣದವನು ಇಂತಹ ಕರ್ಮಗಳನ್ನೇ ಮಾಡಬೇಕೆಂದು ನಿರ್ಬಂಧವಿತ್ತು. ಬ್ರಾಹ್ಮಣರ ಕೆಲಸವು ಬೇರಿತ್ತು. ಕ್ಷತ್ರಿಯರ ಕರ್ತವ್ಯವು ಬೇರಿತ್ತು. ಬ್ರಾಹ್ಮಣನ ಕರ್ತವ್ಯವನ್ನು ಬ್ರಾಹ್ಮಣನೇ ಮಾಡಬೇಕು. ಕ್ಷತ್ರಿಯನ ಕೆಲಸವನ್ನು ಕ್ಷತ್ರಿಯನೇ ಮಾಡಬೇಕು. ಆದರೆ ಒಬ್ಬನೊಬ್ಬನಿಗೆ ನೆರ ವಾಗಬೇಕು. ಅಂದರೆ ಬ್ರಾಹ್ಮಣನಿಗೆ ಅವಶ್ಯ ಪ್ರಸಂಗದಲ್ಲ ಕ್ಷತ್ರಿಯನು ಸಹಾಯಮಾಡಬೇಕು. ಕ್ಷತ್ರಿಯನಿಗೆ ಪ್ರಸಂಗವಿಶೇಷದಲ್ಲ ಬ್ರಾಹ್ಮಣನು ಸಹಾಯಮಾಡಬೇಕು. ಹೀಗಿದ್ದುದರಿಂದ ವಿಶ್ವಾಮಿತ್ರನು ತನ್ನಲ್ಲಿ ರಾಕ್ಷ ಸರನ್ನು ಸಂಹರಿಸುವ ಶಕ್ತಿಯಿದ್ದರೂ, ಕ್ಷತ್ರಿಯ ಕುಮಾರರಾದ ರಾಮ-ಲಕ್ಷ್ಮಣರಿಂದ ರಾಕ್ಷಸ ಸಂಹಾರಕಾರ್ಯವನ್ನು ಮಾಡಿಸಿದನು.

ಈ ಮಾತಿನ ಬಲವತ್ತರತೆಗಾಗಿ ಐತಿಹಾಸಿಕ ಕಾಲದ ಇನ್ನೊಂದು ಉದಾಹರಣೆಯನ್ನು ತೋರಿಸಬಹುದು. ವಿದ್ಯಾರಣ್ಯನು ಕೇವಲ ತಪ ಸ್ವಿಯು. ಇವನಿಗೂ ರಾಜಕಾರಣಕ್ಕೂ ಸಂಬಂಧವೆಷ್ಟು ಮಾತ್ರಕ್ಕೂ ಇರಲಿಲ್ಲ. ಅವನ ತಪಶ್ಚರ್ಯ ಸಾಧನಕ್ಕೆ ಯಾರಿಂದಲೂ ವಿಘ್ನವಾಗಿರ ಲಿಲ್ಲ. ಆದರೂ ಅವನು ರಾಜಕಾರಣದ ಕಡೆಗೆ ದುರ್ಲಕ್ಷ ಮಾಡಲಲ್ಲ. ಮುಸಲ್ಮಾನರನ್ನು ಬಲಿಯುಗೊಟ್ಟರೆ ಅವರು ಒಂದಿಲ್ಲೊಂದು ಕಾಲದಲ್ಲಿ ಹಿಂದುಗಳ ಧರ್ಮಾಚರಣೆಗೆ ವ್ಯಾಘಾತವನ್ನುಂಟುಮಾಡದೆ ಬಿಡರೆಂದು ಅವನು ಭಾವಿಸಿದ್ದನು. ಅಂತೇ ಅವನು ಮುಸಲ್ಮಾನರ ಬೆಳವಣಿಗೆಗೆ ಇಂಬುಗೊಡಲಿಲ್ಲ. ದೂರದರ್ಶಿಯಾದ ಆ ಮಹನೀಯನು ಮುಸಲ್ಮಾ ನರ ರಾಜ್ಯವನ್ನು ಪ್ರತಿಭಟಿಸಿ ಮೆರೆಯುವ ಕರ್ನಾಟಕಸಾಮ್ರಾಜ್ಯವನ್ನು ಸ್ಥಾಪಿಸುವ ಸಂಕಲ್ಪಮಾಡಿಕೊಂಡನು. ಹುಕ್ಕ-ಬುಕ್ಕರನ್ನು ಮುಂದೆ ಮಾಡಿ ವಿಜಯನಗರದ ರಾಜ್ಯವನ್ನು ನೆಲೆಗೊಳಿಸಿದನು. ಬಳಿಕ ನಿಶ್ಚಿಂತ ನಾಗಿ ತನ್ನ ಧಾರ್ಮಿಕ ಕರ್ತವ್ಯಗಳ ಕಡೆಗೆ ಹೊರಳಿದನು.

ಇವರಂತೆ ಗೋವಿಂದಸಿಂಹನೂ ಉಭಯಕಾರ್ಯಗಳನ್ನು ಕೈಗೊಂಡವನಾಗಿದ್ದನು. ವಿಶ್ವಾಮಿತ್ರನೇ ಆಗಲಿ, ವಿದ್ಯಾರಣ್ಯನಾಗಲಿ ಸ್ವತಃ ಶಸ್ತ್ರವನ್ನೆತ್ತಿದವರಲ್ಲ. ಶಿಷ್ಯರಿಗೆ ಆಲೋಚನೆಯ ಹೇಳಿ ಅವರಿಂದ ತಮ್ಮ ಇಚ್ಛೆಯಮೇರೆಗೆ ಕೆಲಸಮಾಡಿಸಿಕೊಂಡವರು. ಆದರೆ ಗೋವಿಂದಸಿಂಹನು ಸ್ವತಃ ಶಸ್ತ್ರಪಾಣಿಯು. ಧರ್ಮಗುರುವಾಗಿ ಕೇವಲ ಧಾರ್ಮಿಕ ಕಾರ್ಯಗಳನ್ನು ಕೈಗೊಳ್ಳಬೇಕಿದ್ದ ಇವನು ತನ್ನ ಪೂರ್ವಜರಿಗೆ ಮೊಗಲರಿಂದ ಉಂಟಾದ ಅನ್ಯಾಯಗಳನ್ನು ಕೇಳಿದ್ದನು. ಅನುಯಾಯಿಗಳಿಗೆ ಮೊಗಲರಿಂದ ಕಾಲಕಾಲಕ್ಕೆ ಒದಗುತಲಿದ್ದ ಅತ್ಯಾಚಾರಗಳನ್ನು ನೋಡಿದ್ದನು. ಇದರಿಂದ ಇವನು ಶೀಖಧರ್ಮದ ಸಮ್ಮದಿಗೆ ಶೀಖರ ರಾಜಕೀಯ ಸ್ವಾತಂತ್ರ್ಯವು ಅತ್ಯವಶ್ಯವೆಂದು ಭಾವಿಸಿದನು. ಧಾರ್ಮಿಕ ಕರ್ತವ್ಯದೊಡನೆ, ರಾಜಕೀಯ ಕರ್ತವ್ಯವನ್ನೂ ನಿರ್ಧರಿಸಿ, ನೆರವೇರಿಸಲಿಕ್ಕೆ ಬದ್ಧಕಂಕಣನಾದನು. ಹಾಗು ತನ್ನ ಈ ಉದ್ದೇಶ ಸಾಧನೆಗೆ ಆಮರಣ ಹೆಣಗಾಡಿದನು. ಅಂಶತಃ ಯಶಸ್ವಿಯಾಗಿ ಕೀರ್ತಿಶಾಲಿಯಾದನು.

ಗೋವಿಂದಸಿಂಹನು ಧರ್ಮವೀರನೂ ಅಹುದು. ಯುದ್ಧವೀರನೂ ಅಹುದು. ಧರ್ಮವೀರನಾಗಿದ್ದ ಇವನು ಅತ್ಯಾಚಾರಿಗಳಾದ ವಿಧರ್ಮಿಗಳ ದಂಡನೆಗೆ ಅನ್ಯರನ್ನು ಮುಂದೆ ಮಾಡಲು ಮನಸ್ಸು ಮಾಡಲಿಲ್ಲ. ವಿಶ್ವಾಮಿತ್ರನು ರಾಮ-ಲಕ್ಷ್ಮಣರನ್ನು ಕರೆತಂದಂತೆ, ಇಲ್ಲವೆ ವಿದ್ಯಾರಣ್ಯರು ಹುಕ್ಕ-ಬುಕ್ಕರನ್ನು ಮುಂದೆಮಾಡಿದಂತೆ, ಗೋವಿಂದಸಿಂಹನು ಸ್ವಾತಂತ್ರ್ಯಪ್ರಾಪ್ತಿಯ ಸಂಗ್ರಾಮಕ್ಕೆ ಬೇರೆ ಮನುಷ್ಯರನ್ನು ಹುಡುಕಹೋಗಲಿಲ್ಲ. ತಾನೇ ನಾಯಕನಾಗಿ ಒದಗಿದ ಕಷ್ಟನಷ್ಟಗಳನ್ನು ಸಹಿಸಿಕೊಂಡು ಅತ್ಯಂತ ಸ್ವಾರ್ಥತ್ಯಾಗಪೂರ್ವಕ ಹೆಣಗಾಡಿದನು. ತನ್ನ ವೀರತ್ವ-ಸಾಹಸಾದಿ ಉತ್ತಮೋತ್ತಮ ಗುಣಗಳನ್ನು ಪ್ರಕಟಿಸಿ ಗೌರವಾನ್ವಿತನಾದನು.

ಗೋವಿಂದಸಿಂಹನಲ್ಲಿ ಬ್ರಾಹ್ಮಣ್ಯ ಹಾಗು ಕ್ಷಾತ್ರಶಕ್ತಿಗಳ ಸಮಷ್ಟಿಯಿದ್ದಿತು. ಅವನು ಬ್ರಾಹ್ಮಣನೂ ಅಹುದು. ಕ್ಷತ್ರಿಯನೂ ಅಹುದು. ಬ್ರಾಹ್ಮಣನಾಗಿ ಧರ್ಮಗುರುವಿನ ಕೆಲಸವನ್ನು ಮಾಡಿದನು. ಕ್ಷತ್ರಿಯನಾಗಿ ಪಂಜಾಬದ ಸಂಸ್ಥಾನಿಕರೊಡನೆಯೂ, ಮೊಗಲರೊಡನೆಯೂ ಹೋರಾಡಿದನು. ಬ್ರಾಹ್ಮಣನಾಗಿ ಶಿಷ್ಯರಿಗೆ ಇಂತು ಉಪದೇಶಿಸಿದನು: "ಪ್ರಿಯಶಿಷ್ಯರೆ, ನೀವು ದೇಶದ ಕಷ್ಟದ ಹಾಗು ದರಿದ್ರರ ದುಃಖನಿವಾರಣೆಯ ಸಲುವಾಗಿ ಜನ್ಮವೆತ್ತಿರುವಿರೆಂಬುದನ್ನು ಎಂದೂ ಮರೆಯದಿರಿ. ಇದಕ್ಕನುರೂಪವಾಗಿ ಸದಾ ಪರೋಪಕಾರದ ಕಾರ್ಯಗಳನ್ನಾಚರಿಸಿರಿ." ಕ್ಷತ್ರಿಯನಾಗಿ ತನ್ನ ಅನುಯಾಯಿಗಳಿಗೆ ಉಪದೇಶಿಸಿದ್ದೇನಂದರೆ: "ಪರಾಧೀನರಾಷ್ಟ್ರದ ಧರ್ಮವು ಸುಖವಾಗಿ ಸಾಗದು. ಸ್ವತಂತ್ರರಾಜ್ಯವೇ ತನ್ನ ಧರ್ಮವನ್ನು ರಕ್ಷಣೆಮಾಡಿಕೊಳ್ಳಬಲ್ಲದು. ಪಾರತಂತ್ರ್ಯದ ರಾಷ್ಟ್ರದಲ್ಲಿ ಧರ್ಮರಕ್ಷಣೆಯು ಸಂಕಟಪರಂಪರೆಯ ಕಾರ್ಯವು."

ಗೋವಿಂದಸಿಂಹನ ಸ್ವದೇಶಪ್ರೇಮವು ಅತ್ಯುಜ್ವಲವಾದುದು. ಅವನು ದೇಶಹಿತಕ್ಕಾಗಿ, ಸಮಾಜದ ಕಲ್ಯಾಣಕ್ಕಾಗಿ ಎಂತಹ ಸ್ವಾರ್ಥತ್ಯಾಗ ಮಾಡಲಿಕ್ಕೂ ಹಿಂದೆಗೆಯಲಿಲ್ಲ. ತಂದೆಯಾದ ತೇಗಬಹದ್ದೂರನು ಧರ್ಮರಕ್ಷಣೆಗೋಸುಗ ಆತ್ಮಯಜ್ಞ ಮಾಡಿ, ಬಾಲಕ ಗೋವಿಂದಸಿಂಹನ ಮನೋಭೂಮಿಯಲ್ಲಿ ಸ್ವಾರ್ಥತ್ಯಾಗದ ಬೇರಳಿಸಿ ಹೋಗಿದ್ದನು. ಗೋವಿಂದಸಿಂಹನು ತಂದೆಯ ದೃಷ್ಟಾಂತವನ್ನು ಸದಾ ಕಣ್ಣುಮುಂದೆ ಇಟ್ಟುಕೊಂಡು ವ್ಯವಹರಿಸಿದನು. ಧರ್ಮರಕ್ಷಣೆಗಾಗಿಯೂ, ಸ್ವಾತಂತ್ರ್ಯಪ್ರಾಪ್ತಿಗಾಗಿಯೂ ಹೆಣಗಾಡುತ್ತಿರುವ ಅವನು ನಾಲ್ವರು ಮಕ್ಕಳನ್ನು ಕಳೆದುಕೊಂಡನು. ಅಸಂಖ್ಯ ಸೈನಿಕರನ್ನು ಬಲಿಗೊಟ್ಟನು. ಕೆಲಕಾಲ ಭಿಕ್ಷುಕನಿಗಿಂತಲೂ ಹೀನಸ್ಥಿತಿಯನ್ನು ಹೊಂದಿ, ಅತ್ತಿತ್ತ ಅಲೆದನು. ಸಂಪಾದಿಸಿದ ರಾಜ್ಯವನ್ನು ಕಳಕೊಂಡನು. ಎಲ್ಲೆಲ್ಲಿಯೂ ನಿರಾಶೆಯ ಸ್ಥಿತಿಯೇ ಸ್ಥಿತಿಯು ಈ ಕಾಲದಲ್ಲಿ ಅವನಿಗೆ ಯಾರ ಬೆಂಬಲವೂ ಇರ